# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು

**ಜುಲೈ ೩ನೇ ವಾರ**

13-07-2026 TO 18-07-2026



# ವಿದೇಶಿಯರಿಗೆ ಕರ್ನಾಟಕ ನೆಚ್ಚಿನ ತಾಣ

- ಭಾರತ-ಬ್ರಿಟನ್ ಎಫ್‌ಟಿಎ
- ಗಗನಯಾತ್ರಿಗಳ ಕೋಶ 3 ಪರೀಕ್ಷೆ ಯಶಸ್ವಿ
- ಬರಲಿದೆ ಪಾಲಿಮರ್ ನೋಟು
- ವ್ಯಾಪಾರ ಕೊರತೆ ₹2.91 ಲಕ್ಷ ಕೋಟಿ


## ❖ ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ ಸ್ಥಿತಿ; ಅಮೆರಿಕದ ದಾಳಿಗೆ ಇರಾನ್ ಪ್ರತಿದಾಳಿ: ಹೊರ್ಮುಜ್ ಜಲಸಂಧಿ ಮತ್ತೆ ಬಂದ್

- ಹೊರ್ಮುಜ್ ಜಲಸಂಧಿ ದಾಟುತ್ತಿದ್ದ ಹಡಗಿನ ಮೇಲೆ ಇರಾನ್ ನಡೆಸಿದ ದಾಳಿಗೆ ಪ್ರತಿಯಾಗಿ ಅಮೆರಿಕ ಸೇನೆಯು ಭಾನುವಾರ ಬೆಳಿಗ್ಗೆ ಇರಾನ್ ಹಲವು ಸ್ಥಳಗಳ ಮೇಲೆ ಭಾರಿ ವಾಯುದಾಳಿ ನಡೆಸಿದೆ.
- ಈ ದಾಳಿಗೆ ಇರಾನ್ ಸೇನೆ ತಿರುಗೇಟು ನೀಡಿದ್ದು, ಬಹರೇನ್, ಕುವೈತ್, ಕತಾರ್ ಮತ್ತು ಒಮಾನ್‌ನಲ್ಲಿರುವಅಮೆರಿಕದ ಸೇನಾ ನೆಲೆಗಳತ್ತ ಕ್ಷಿಪಣಿ ಗಳನ್ನು ಹಾರಿಸಿದೆ. ಹೊರ್ಮುಜ್ ಜಲಸಂಧಿಯನ್ನು ಸಂಪೂರ್ಣ ಬಂದ್ ಮಾಡಿರುವುದಾಗಿ ಘೋಷಿಸಿದೆ.
- 'ಈ ಘಟನೆಯ (ಅಮೆರಿಕದ ದಾಳಿ) ನಂತರ, ಮುಂದಿನ ಸೂಚನೆ ಬರುವವರೆಗೆ ಮತ್ತು ಈ ಪ್ರದೇಶದಲ್ಲಿ ಅಮೆರಿಕದ ಹಸ್ತಕ್ಷೇಪ ಕೊನೆಗೊಳ್ಳುವ ವರೆಗೆ ಹೊರ್ಮುಜ್ ಜಲಸಂಧಿಯನ್ನು ಮುಚ್ಚಲಾಗುತ್ತದೆ' ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ತಿಳಿಸಿದೆ.
- 'ಕೆಲವು ಹಡಗುಗಳು ನಮ್ಮ ಎಚ್ಚರಿಕೆಯನ್ನು ನಿರ್ಲಕ್ಷಿಸಿದವು.ನಾವು ಅನುಮತಿ ನೀಡಿದ ಮಾರ್ಗದಲ್ಲೇ ಸಂಚರಿಸುವಂತೆ ಅವುಗಳಿಗೆ ಸೂಚಿಸಿದೆವು. ಎಚ್ಚರಿಕೆ ನೀಡಲು ಹಡಗೊಂದರ ಮೇಲೆ ದಾಳಿ ನಡೆಸಲಾಯಿತು' ಎಂದು ಹೇಳಿದೆ.
- ಆದರೆ, ಹೊರ್ಮುಜ್ ಜಲಸಂಧಿ ಎಲ್ಲಾ ನೌಕೆಗಳ ಸಂಚಾರಕ್ಕೆ ಮುಕ್ತವಾಗಿದೆ ಎಂದು ಅಮೆರಿಕ ಸೇನೆ ತಿಳಿಸಿದೆ. 'ಹೊರ್ಮುಜ್‌ನಲ್ಲಿ ನೌಕೆಗಳ ಸುಗಮ ಸಂಚಾರ ಖಚಿತಪಡಿಸಲು ಅಮೆರಿಕದ ಸೇನಾ ಪಡೆಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ. ಜಲಸಂಧಿಯ ಮೇಲೆ ಇರಾನ್‌ಗೆ ಯಾವುದೇ ನಿಯಂತ್ರಣ ಇಲ್ಲ' ಎಂದು ಸೇನೆಯ ಸೆಂಟ್ರಲ್ ಕಮಾಂಡ್ ಹೇಳಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡಾ 'ಹಡಗುಗಳ ಸಂಚಾರಕ್ಕೆ ಹೊರ್ಮುಜ್ ಮುಕ್ತವಾಗಿದೆ' ಎಂದಿದ್ದಾರೆ.
- 140 ಗುರಿಗಳು ನಾಶ: ಬುಧವಾರ ಮತ್ತು ಗುರುವಾರ ಇರಾನ್ ಮೇಲೆ ದಾಳಿ ನಡೆಸಿದ್ದ ಅಮೆರಿಕ, ಭಾನುವಾರ ಮತ್ತೊಂದು ಸುತ್ತಿನ ದಾಳಿ ನಡೆಸಿತು. ಈ ಬೆಳವಣಿಗೆಯಿಂದ ಪಶ್ಚಿಮ ಏಷ್ಯಾ ಯುದ್ಧಕ್ಕೆ ಶಾಶ್ವತ ಅಂತ್ಯಹಾಡಲು ನಡೆಯುತ್ತಿರುವ ಪ್ರಯತ್ನಗಳಿಗೆ ಹಿನ್ನಡೆ ಉಂಟಾಗಿದೆ.
- ದಾಳಿಯಲ್ಲಿ ಇರಾನ್‌ನ ಸುಮಾರು 140 ಗುರಿಗಳನ್ನು ನಾಶಪಡಿಸಲಾಯಿತು ಎಂದು ಸೆಂಟ್ರಲ್ ಕಮಾಂಡ್ ಹೇಳಿದೆ. ಈ ಹಿಂದಿನ ಎರಡು ಸುತ್ತುಗಳ ದಾಳಿಗೆ ಹೋಲಿಸಿದರೆ, ಭಾನುವಾರ ದೊಡ್ಡ ಪ್ರಮಾಣದ ದಾಳಿ ನಡೆದಿದೆ.
- 'ಕ್ಷಿಪಣಿ ಮತ್ತು ಡ್ರೋನ್ ಉಡಾವಣಾ ಕೇಂದ್ರಗಳು, ಶಸ್ತ್ರಾಸ್ತ್ರ ಸಂಗ್ರಹಾಗಾರ, ಸಂವಹನ ಉಪಕರಣಗಳು ಮತ್ತು ಇತರ ತಾಣಗಳ ಮೇಲೆ ದಾಳಿ ನಡೆಸಲಾಯಿತು. ಈ ದಾಳಿಗಳು ಹಡಗುಗಳ ಸಂಚಾರಕ್ಕೆ ಬೆದರಿಕೆ ಹಾಕುವ ಇರಾನ್‌ನ ಸಾಮರ್ಥ್ಯವನ್ನು ದುರ್ಬಲಗೊಳಿಸುತ್ತದೆ' ಎಂದು ಅಮೆರಿಕ ಸೇನೆ ತಿಳಿಸಿದೆ.
- ಬಂದರ್ ಅಬ್ಬಾಸ್, ಸಿರಿಕ್, ಜಸ್ಕ್, ಕ್ವೆಶ್ ದ್ವೀಪ ಮತ್ತು ಇರಾಕ್ ಜತೆ ಗಡಿ ಹಂಚಿಕೊಂಡಿರುವ ಖುಜಿಸ್ತಾನ್ ಪ್ರಾಂತ್ಯದಲ್ಲಿ ಸ್ಫೋಟದ ಸದ್ದು ಕೇಳಿಬಂದಿದೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ.
- ಹಲವೆಡೆ ಮೊಳಗಿದ ಸೈರನ್: ಇರಾನ್ ಕ್ಷಿಪಣಿ ದಾಳಿ ಆರಂಭಿಸಿದ ಬೆನ್ನಲ್ಲೇ ಕೊಲ್ಲಿಯ ಹಲವು ರಾಷ್ಟ್ರಗಳಲ್ಲಿ ಎಚ್ಚರಿಕೆಯ ಸೈರನ್ ಮೊಳಗಿದವು. ಇರಾನ್ ಹಾರಿಸಿದ ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ ಎಂದು ಕತಾರ್ ಸೇನೆ ತಿಳಿಸಿದೆ. ಬಹರೇನ್ ಮತ್ತು ಯುಎಇಯ ಹಲವು ನಗರಗಳಲ್ಲೂ ವಾಯುದಾಳಿಯ ಎಚ್ಚರಿಕೆ ನೀಡುವ ಸೈರನ್‌ಗಳು ಮೊಳಗಿದವು.
- 'ಯಾವುದೇ ಕ್ಷಿಪಣಿ ನಮ್ಮ ಗಡಿಯೊಳಗೆ ಪ್ರವೇಶಿಸಿಲ್ಲ' ಎಂದು ಯುಎಇ ಸರ್ಕಾರ ತಿಳಿಸಿದೆ.
- 'ಒಮಾನ್‌ನ ದುಮ್ಮ ಬಂದರಿನಲ್ಲಿ ರುವ ಅಮೆರಿಕದ ನೌಕಾ ಪಡೆಗಳ ಕೇಂದ್ರಗಳು ಮತ್ತು ವಿಮಾನವಾಹಕ ನೌಕೆಗಳಿಗೆ ಇಂಧನ ತುಂಬಿಸುವ ಸೌಲಭ್ಯ ಗಳನ್ನು ನಾಶಪಡಿಸಲಾಗಿದೆ' ಎಂದು ಐಆರ್‌ಜಿಸಿ ತಿಳಿಸಿದೆ.


Dr. Rajkumar IAS/KAS Academy

# ವಿದೇಶಿಯರಿಗೆ ಕರ್ನಾಟಕ ನೆಚ್ಚಿನ ತಾಣ

ನವದೆಹಲಿ: ಶಿಕ್ಷಣಕ್ಕಾಗಿ ಭಾರತಕ್ಕೆ ಬರುವ ವಿದೇಶಿ ವಿದ್ಯಾರ್ಥಿಗಳಿಗೆ ಕರ್ನಾಟಕವೇ ನೆಚ್ಚಿನ ತಾಣ. 2023–24ರಲ್ಲಿ 7,914 ವಿದೇಶಿ ವಿದ್ಯಾರ್ಥಿಗಳು ಕರ್ನಾಟಕದ ವಿವಿಧ ಕಾಲೇಜುಗಳಿಗೆ ದಾಖಲಾಗಿದ್ದರು. ಪಿಎಚ್‌.ಡಿ, ಎಂ.ಫಿಲ್, ಸ್ನಾತಕೋತ್ತರ ಶಿಕ್ಷಣಕ್ಕಿಂತ ಪದವಿ ಶಿಕ್ಷಣಕ್ಕಾಗಿಯೇ ಇಲ್ಲಿಗೆ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಎರಡನೇ ಸ್ಥಾನದಲ್ಲಿ ಪಂಜಾಬ್, ಮೂರರಲ್ಲಿ ಮಹಾರಾಷ್ಟ್ರವಿದೆ. ಕೇಂದ್ರ ಶಿಕ್ಷಣ ಸಚಿವಾಲಯ ನಡೆಸಿರುವ ಸಮೀಕ್ಷೆಯಲ್ಲಿ (2023–24) ಈ ಎಲ್ಲ ಅಂಶಗಳು ತಿಳಿದು ಬಂದಿವೆ





## ರಾಜ್ಯಗಳಿಗೆ ಬಂದ ವಿದೇಶಿ ವಿದ್ಯಾರ್ಥಿಗಳು




ಮತ್ತೊಂದು ಸುದ್ದಿ 3B

## ಪದವಿ ಶಿಕ್ಷಣಕ್ಕೆ ಬರುವವರೇ ಹೆಚ್ಚು




ಆಧಾರ: 'ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆ 2023–24' ವರದಿ

## ಕಾಶ್ಮೀರಿಗರಿಗೆ ಬೆಂಗಳೂರು ಇಷ್ಟ

ಪ್ರಜಾವಾಣಿ ವಾರ್ತೆ

ಶ್ರೀನಗರ: 'ವಿದ್ಯಾರ್ಥಿಯಾಗಿ ನಾನು ಬೆಂಗಳೂರಿಗೆ ಬಂದೆ. ಮತ್ತೆ ನಾನು ಇಲ್ಲಿಂದ ವಾಪಸಾಗಲೇ ಇಲ್ಲ. ವಿದ್ಯಾಭ್ಯಾಸಕ್ಕೆ, ಉದ್ಯೋಗಕ್ಕೆ ಇದು ಸ್ವರ್ಗ. ಇಲ್ಲಿರುವ ಐಟಿ ಕಂಪನಿಗಳು, ಅತ್ಯುತ್ತಮ ಹವಾಮಾನ ಎಲ್ಲವೂ ಚಂದ. ಕಾಶ್ಮೀರಿಗಳನ್ನಂತೂ ಬೆಂಗಳೂರು ಅಪ್ಪಿಕೊಳ್ಳುತ್ತದೆ' - ಇದು ಮಾರೂಫ್ ಮಾತು.

ಅದು 1990ರ ಕಾಲಘಟ್ಟ. ಕಾಶ್ಮೀರದಲ್ಲಿ ಹಿಂಸಾಚಾರ, ಸೇನಾ ಕಾರ್ಯಾಚರಣೆ ನಡೆಯುತ್ತಿದ್ದ ದಿನಗಳು. ಶಿಕ್ಷಣಕ್ಕೆ ಉತ್ತಮ ವಾತಾವರಣವೇ ಇರಲಿಲ್ಲ. ಇಂಥ ಕಾಲದಲ್ಲಿ ಕಣಿವೆಯ ಸಾವಿರಾರು ಕುಟುಂಬಗಳಿಗೆ ಬೆಂಗಳೂರು ನಗರ ಭದ್ರ ಭವಿಷ್ಯಕ್ಕೆ ಸ್ವರ್ಗವಾಗಿ ಕಂಡಿತು.

### 'ಭಾವೈಕ್ಯದ ನೆಲೆ'

ಇತ್ತೀಚಿನ ವರ್ಷಗಳಲ್ಲಿ ದೇಶದ ವಿವಿಧೆಡೆ ಕಾಶ್ಮೀರಿ ವಿದ್ಯಾರ್ಥಿಗಳ ಮೇಲೆ ದಾಳಿಗಳು ನಡೆಯುತ್ತಿವೆ. ಆದ್ದರಿಂದ, ಪೋಷಕರು ತಮ್ಮ ಮಕ್ಕಳ ಸುರಕ್ಷತೆಗೇ ಹೆಚ್ಚಿನ ಒತ್ತು ನೀಡುತ್ತಾರೆ.

'ಬೆಂಗಳೂರು ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುತ್ತದೆ. ನಮ್ಮ ಪರಿಚಯದ ಹಲವರು ಅಲ್ಲಿಯೇ ಓದಿದ್ದಾರೆ. ಅಲ್ಲಿನ ಭಾವೈಕ್ಯದ ಬಗ್ಗೆ ಉತ್ತಮ ಮಾತುಗಳನ್ನಾಡುತ್ತಾರೆ' ಎನ್ನುತ್ತಾರೆ ಹಲವು ಪೋಷಕರು.

Publication Date
13/07/2026

Presented by ಪ್ರಜಾವಾಣಿ

### ‘ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ’ ದರ ಹೆಚ್ಚಳಕ್ಕೆ ಮುಂದಾದ ರಾಜ್ಯ ಸರ್ಕಾರ

# ಖಾಸಗಿ ಆಸ್ಪತ್ರೆ ಸೆಳೆಯಲು ದರ ಪರಿಷ್ಕರಣೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಜಾರಿಯಲ್ಲಿರುವ ‘ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ’ ಯೋಜನೆಯಡಿ ಜನರಿಗೆ ಚಿಕಿತ್ಸೆ ಒದಗಿಸುವುದಕ್ಕಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ ಆಸ್ಪತ್ರೆಗಳನ್ನು ಸೆಳೆಯಲು ಮುಂದಾಗಿರುವ ರಾಜ್ಯ ಸರ್ಕಾರ, ದರ ಪರಿಷ್ಕರಣೆಗೆ ನಿರ್ಧರಿಸಿದೆ.

ಈ ಸಂಬಂಧ ಆರೋಗ್ಯ ಇಲಾಖೆಯು ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಿದೆ. 2018ರಲ್ಲಿ ಆರಂಭವಾದ ಈ ಯೋಜನೆಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದೆ. ರಾಜ್ಯದಲ್ಲಿ ಒಂದು ಕೋಟಿಗೂ ಅಧಿಕ ಕುಟುಂಬಗಳು ಬಿಪಿಎಲ್ ಕಾರ್ಡ್ ಹೊಂದಿದ್ದು, ಅವು ‘ಆಯುಷ್ಮಾನ್ ಭಾರತ್’ ಯೋಜನೆ ಅಡಿ ಬರಲಿವೆ. 20 ಲಕ್ಷಕ್ಕೂ ಅಧಿಕ ಎಪಿಎಲ್ ಕುಟುಂಬಗಳನ್ನು ‘ಆರೋಗ್ಯ ಕರ್ನಾಟಕ’ ಯೋಜನೆಯಡಿ ತರಲಾಗಿದೆ. ಎಪಿಎಲ್ ಕುಟುಂಬದ ಸದಸ್ಯರಿಗೆ ಗರಿಷ್ಠ ₹1.50 ಲಕ್ಷ ಚಿಕಿತ್ಸಾ ವೆಚ್ಚ ನಿಗದಿ ಮಾಡಿದ್ದು, ಶೇ 30ರಷ್ಟು ಹಣವನ್ನು ಪಾವತಿಸಲಾಗುತ್ತದೆ. ಆದರೆ, ಖಾಸಗಿ ಆಸ್ಪತ್ರೆಗಳು ಯೋಜನೆಯಡಿ ನೋಂದಣಿಗೆ ನಿರಾಸಕ್ತಿ ತೋರಿರುವುದು ಚಿಕಿತ್ಸೆಗೆ ತೊಡಕಾಗಿದೆ. ಆದ್ದರಿಂದ ಯೋಜನೆ ಪ್ರಾರಂಭವಾದ ಬಳಿಕ ಮೊದಲ ಬಾರಿಗೆ ದರ ಪರಿಷ್ಕರಣೆ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಜಾರಿಯಲ್ಲಿರುವ ಇನ್ನೊಂದು ಪ್ರಮುಖ ಆರೋಗ್ಯ ವಿಮೆಯಾದ ‘ಯಶಸ್ವಿನಿ’ ಯೋಜನೆಯಡಿ ಚಿಕಿತ್ಸಾ ಪ್ಯಾಕೇಜ್‌ಗಳ ದರವನ್ನು 2024ರಲ್ಲಿ ಪರಿಷ್ಕರಿಸಲಾಗಿದೆ. ‘ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್’ ಮೂಲಕ 2023ರ ಜನವರಿಯಲ್ಲಿ ಈ ಯೋಜನೆಗೆ ರಾಜ್ಯ ಸರ್ಕಾರ ಮರುಚಾಲನೆ ನೀಡಿತ್ತು.

▶8

#### ಅಂಕಿ ಅಂಶಗಳು

**2,965** ಯೋಜನೆಯಡಿ ನೋಂದಾಯಿತ ಸರ್ಕಾರಿ ಆಸ್ಪತ್ರೆಗಳು

**541** ಯೋಜನೆಯಡಿ ನೋಂದಾಯಿತ ಖಾಸಗಿ ಆಸ್ಪತ್ರೆಗಳು

#### ಚಿಕಿತ್ಸೆಗೆ ಶಿಫಾರಸು ಅಗತ್ಯ

‘ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ’ ಯೋಜನೆಯಡಿ 1,650 ಬಗೆಯ ಚಿಕಿತ್ಸೆಗಳನ್ನು ನೀಡಲಾಗುತ್ತದೆ. ಈ ಯೋಜನೆಯಡಿ 171 ತುರ್ತು ಚಿಕಿತ್ಸೆಗಳನ್ನು ಸೇರ್ಪಡೆ ಮಾಡಲಾಗಿದೆ. ರಸ್ತೆ ಅಪಘಾತ ಸೇರಿ ವಿವಿಧ ತುರ್ತು ಸಂದರ್ಭದಲ್ಲಿ ಮಾತ್ರ ನೋಂದಾಯಿತ ಖಾಸಗಿ ಆಸ್ಪತ್ರೆಗೂ ನೇರವಾಗಿ ದಾಖಲಾಗಬಹುದಾಗಿದೆ. ಉಳಿದ ಪ್ರಕರಣಗಳಲ್ಲಿ ಸರ್ಕಾರಿ ಆಸ್ಪತ್ರೆಗಳ ಶಿಫಾರಸು ಅಗತ್ಯ. ಯೋಜನೆಯಡಿ ಐವಿಎಫ್, ರೂಟ್ ಕೆನಾಲ್, ಬೆನ್ನುಹುರಿ ವಿರೂಪಕ್ಕೆ ಸಂಬಂಧಿಸಿದ ಚಿಕಿತ್ಸೆ, ಗಿಲ್ಲೈನ್‌-ಬರ್ರೆ ಸಿಂಡ್ರೋಮ್ (ಜಿಬಿಎಸ್) ಕಾಯಿಲೆಗೆ ನೀಡುವ ‘ಇಂಟ್ರಾವೀನಸ್ ಇಮ್ಯುನೋಗ್ಲೋಬಿನ್’ (ಐವಿಐಜಿ) ಥೆರಪಿಯಂತಹ ಚಿಕಿತ್ಸೆಗಳನ್ನು ಇತ್ತೀಚೆಗೆ ಸೇರ್ಪಡೆ ಮಾಡಲಾಗಿದೆ.



**ಯೋಜನೆಯಡಿ ಚಿಕಿತ್ಸಾ ಪ್ಯಾಕೇಜ್‌ಗಳ ದರ ಪರಿಷ್ಕರಣೆಗೆ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಹೆಚ್ಚುವರಿ ಹಣವನ್ನು ವಿವಿಧ ಮೂಲಗಳಿಂದ ಹೊಂದಿಸಲಾಗುತ್ತದೆ**

**ಗುರುದತ್ತ ಹೆಗಡೆ,**
ಆಯುಕ್ತ, ಆರೋಗ್ಯ ಇಲಾಖೆ

# ಅಪಘಾತ: 2ನೇ ಸ್ಥಾನದಲ್ಲಿ ಬೆಂಗಳೂರು

## ಭಾರತದಲ್ಲಿ ರಸ್ತೆ ಅಪಘಾತಗಳು, ಪಾದಚಾರಿಗಳ ಸಾವು ಕುರಿತ 2024ರ ವರದಿ

ಪ್ರಜಾವಾಣಿ ವಾರ್ತೆ

ನವದೆಹಲಿ: 2024ರಲ್ಲಿ ದೇಶದ ಮಹಾನಗರಗಳಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ಪಾದಚಾರಿಗಳು ಮೃತಪಟ್ಟ ಘಟನೆಗಳಿಗೆ ಸಂಬಂಧಿಸಿ ಬೆಂಗಳೂರು ಎರಡನೇ ಸ್ಥಾನದಲ್ಲಿದೆ. ಇದೇ ವಿಚಾರವಾಗಿ, ರಾಜ್ಯಗಳ ಪೈಕಿ ಕರ್ನಾಟಕ ಐದನೇ ಸ್ಥಾನದಲ್ಲಿದೆ. ದೆಹಲಿಯಲ್ಲಿ 584 ಪಾದಚಾರಿಗಳು ಮೃತಪಟ್ಟಿದ್ದು, ಮೊದಲ ಸ್ಥಾನದಲ್ಲಿದೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಇತ್ತೀಚೆಗೆ ಬಿಡುಗಡೆ ಮಾಡಿರುವ ‘ಭಾರತದಲ್ಲಿ ರಸ್ತೆ ಅಪಘಾತಗಳು’ ವರದಿಯಲ್ಲಿ ಈ ಆಘಾತಕಾರಿ ಮಾಹಿತಿ ಇದೆ.

ಬೆಂಗಳೂರಿನಲ್ಲಿ 1,216 ರಸ್ತೆ ಅಪಘಾತಗಳು ಸಂಭವಿಸಿದ್ದವು. ಈ ಅಪಘಾತಗಳಲ್ಲಿ 246 ಪಾದಚಾರಿಗಳು ಮೃತಪಟ್ಟು, ಇತರ 1,039 ಪಾದಚಾರಿಗಳು ಗಾಯಗೊಂಡಿದ್ದರು. ಮೃತಪಟ್ಟವರ ಪೈಕಿ ಹೆಚ್ಚು ಜನರು 60 ವರ್ಷ ಹಾಗೂ ಅದಕ್ಕೂ ಮೇಲ್ಪಟ್ಟ ವಯಸ್ಸಿನವರಾಗಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.



ದೆಹಲಿಯಲ್ಲಿ 2,184 ಅಪಘಾತಗಳು ಸಂಭವಿಸಿದ್ದವು ಎಂದೂ ಹೇಳಲಾಗಿದೆ.

ಹಿಂದಿನ ವರ್ಷಗಳಿಗೆ ಹೋಲಿಸಿದಲ್ಲಿ, ಬೆಂಗಳೂರಿನಲ್ಲಿ ಪಾದಚಾರಿಗಳ ಸಾವುಗಳ ಸಂಖ್ಯೆಯಲ್ಲಿ ಏರಿಕೆ ಕಂಡು ಬಂದಿದೆ. 2020 ಹಾಗೂ 2024ರ ನಡುವೆ ಪಾದಚಾರಿಗಳನ್ನೊಳಗೊಂಡ 4,954 ಅಪಘಾತಗಳು ಸಂಭವಿಸಿದ್ದವು. ಈ ವೇಳೆ ಒಟ್ಟು 1,108 ಪಾದಚಾರಿಗಳು ಮೃತಪಟ್ಟಿದ್ದಾರೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

#### ವರದಿಯ ಪ್ರಮುಖ ಅಂಶಗಳು

- ರಸ್ತೆ ದಾಟುವಾಗ, ಫುಟ್‌ಪಾತ್‌ಗಳ ಮೇಲೆ ನಿಂತಿರುವಾಗ ಮತ್ತು ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ ವಾಹನಗಳು ಡಿಕ್ಕಿ ಹೊಡೆದು ಅಪಘಾತಗಳು ಸಂಭವಿಸಿವೆ
- ಪಾದಚಾರಿಗಳಿಗೆ ದ್ವಿಚಕ್ರ ವಾಹನಗಳೇ ಅತಿದೊಡ್ಡ ಅಪಾಯಕಾರಿಯಾಗಿವೆ. ಬೆಂಗಳೂರಿನಲ್ಲಿ ಸಂಭವಿಸಿದ ಪಾದಚಾರಿಗಳ ಸಾವುಗಳಲ್ಲಿ ಶೇ 28.4 ರಷ್ಟು ಪ್ರಕರಣಗಳಲ್ಲಿ ದ್ವಿಚಕ್ರ ವಾಹನಗಳಿಂದ ಸಂಭವಿಸಿದ ಅಪಘಾತಗಳೇ ಕಾರಣ
- ರಾಜ್ಯಗಳ ವಿಚಾರದಲ್ಲಿ 2024ರಲ್ಲಿ 2,321 ಸಾವುಗಳೊಂದಿಗೆ ಕರ್ನಾಟಕ ಐದನೇ ಸ್ಥಾನದಲ್ಲಿದೆ
- ಅತಿವೇಗವಾಗಿ ವಾಹನಗಳನ್ನು ಓಡಿಸುವುದು, ಪಥಗಳ ಶಿಸ್ತು ಪಾಲನೆ ಮಾಡದಿರುವುದು, ಫುಟ್‌ಪಾತ್‌ಗಳು, ಝೀಬ್ರಾ ಕ್ರಾಸಿಂಗ್‌ಗಳ ಕೊರತೆ ಹಾಗೂ ಪಾದಚಾರಿಗಳ ಓಡಾಟಕ್ಕೆ ಮೀಸಲಾದ ಜಾಗಗಳನ್ನು ಒತ್ತುವರಿ ಮಾಡಿಕೊಳ್ಳುವುದು ಸಾವುಗಳು ಹೆಚ್ಚಾಗಲು ಕಾರಣ



## ❖ ಗಗನಯಾತ್ರಿಗಳ ಕೋಶ 3 ಪರೀಕ್ಷೆ ಯಶಸ್ವಿ

- ಮಾನವಸಹಿತ ಗಗನಯಾನ ಕಾರ್ಯಕ್ರಮದ ಭಾಗವಾಗಿ 'ಗಗನಯಾತ್ರಿಗಳು ಇರುವ ಕೋಶದ ವ್ಯವಸ್ಥೆ'ಗಳ ಮೂರು ಪ್ರಮುಖ ಪರೀಕ್ಷೆ ಗಳನ್ನು ಇಸ್ರೋ, ಭಾನುವಾರ ಯಶಸ್ವಿಯಾಗಿ ನಡೆಸಿದೆ.
- ಸಮುದ್ರಕ್ಕೆ ಇಳಿದ ನಂತರ ಗಗನಯಾನಿಗಳ ಕೋಶವು ನೇರವಾದ ಸ್ಥಿತಿಯಲ್ಲಿ ಇರುವುದನ್ನು ಖಚಿತ ಪಡಿಸಿಕೊಳ್ಳಲು ಮೊದಲ ಪರೀಕ್ಷೆಯನ್ನು ನಡೆಸಲಾಯಿತು. ಇದು ಗಗನಯಾತ್ರಿಗಳ ಸುರಕ್ಷತೆಯ ಅತ್ಯಂತ ಪ್ರಮುಖ ಅವಶ್ಯಕತೆ ಗಳಲ್ಲಿ ಒಂದಾಗಿದೆ ಎಂದು ಇಸ್ರೋ ತಿಳಿಸಿದೆ.
- ಎರಡನೇ ಪರೀಕ್ಷೆಯಲ್ಲಿ ಕೋಶಕ್ಕೆ ವಿದ್ಯುತ್ ಹಾಗೂ ಪ್ರೊಪಲ್ಸನ್ ಒದಗಿಸುವ ಸರ್ವಿಸ್ ಮಾಡ್ಯೂಲ್ ನಡುವಿನ ಕೊಂಡಿಯಾಗಿ ಕಾರ್ಯನಿರ್ವಹಿಸುವ ಸಂಪರ್ಕ ವ್ಯವಸ್ಥೆಯನ್ನು ಬೇರ್ಪಡಿಸುವ ಬಗ್ಗೆ ಪರಿಶೀಲಿಸಲಾಯಿತು. ಮೂರನೇ ಪರೀಕ್ಷೆಯು ನೌಕೆಯ ಮೇಲ್ಭಾಗದ ರಕ್ಷಣಾತ್ಮಕ ಕವಚ ಬೇರ್ಪ ಡುವ ಸಂದರ್ಭದಲ್ಲಿ ಕೋಶಕ್ಕೆ ಯಾವುದೇ ಹಾನಿಯಾಗದಿರುವುದನ್ನು ದೃಢಪಡಿಸಿದೆ. ಈ ಪ್ರಕ್ರಿಯೆಯು ಪ್ಯಾರಾಚೂಟ್‌ಗಳು ಮತ್ತು ಅದಕ್ಕೆ ಸಂಬಂಧಿಸಿದ ವ್ಯವಸ್ಥೆಗಳನ್ನು ರಕ್ಷಿಸುತ್ತದೆ. ಕೋಶದ ವೇಗವನ್ನು ಕಡಿಮೆ ಮಾಡಲು ಪ್ಯಾರಾಚೂಟ್‌ಗಳನ್ನು ಬಳಸುವ ಮುನ್ನ ಈ ಕವಚವನ್ನು ಬೇರ್ಪಡಿಸಲಾಗುತ್ತದೆ.

# ಶೈಕ್ಷಣಿಕ ಸಾಧನೆ: ರಾಜ್ಯದ ಸ್ಥಾನ ಏರಿಕೆ, ಆದರೆ...

ಕೇಂದ್ರ ಶಿಕ್ಷಣ ಸಚಿವಾಲಯವು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಶಾಲೆಗಳ ಶೈಕ್ಷಣಿಕ ಗುಣಮಟ್ಟ ಕುರಿತ 'ಕಾರ್ಯಕ್ಷಮತೆ ಶ್ರೇಯಾಂಕ ಸೂಚ್ಯಂಕ 2.0' ವರದಿಯನ್ನು ಬಿಡುಗಡೆ ಮಾಡಿದೆ. 2025–26ನೇ ಸಾಲಿನಲ್ಲಿ ಕರ್ನಾಟಕವು ಹಿಂದಿನ ವರ್ಷಕ್ಕಿಂತ ತನ್ನ ಒಟ್ಟಾರೆ ಸ್ಥಾನವನ್ನು ಉತ್ತಮಪಡಿಸಿಕೊಂಡಿದೆ. ಆದರೂ ಕೇರಳ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳಿಗಿಂತ ಹಿಂದೆ ಇದೆ. ಆರು ವಿಸ್ತೃತ ಮಾನದಂಡಗಳ ಮೂಲಕ ಶಾಲಾ ಶಿಕ್ಷಣದ ಗುಣಮಟ್ಟವನ್ನು ಅಳೆಯಲಾಗಿದೆ. ಕಲಿಕಾ ಫಲಿತಾಂಶ ವಿಭಾಗದಲ್ಲಿ ರಾಜ್ಯವು ಹಿಂದುಳಿದಿದೆ

### ರಾಜ್ಯದ ಶೈಕ್ಷಣಿಕ ಜಿಲ್ಲೆಗಳು ಪಡೆದ ಅಂಕ

| | | |
|---|---|---|
| ದಕ್ಷಿಣ ಕನ್ನಡ | 1 | 347 |
| ಮೈಸೂರು | 2 | 336 |
| ಉಡುಪಿ | 3 | 333 |
| ಹಾಸನ | 4 | 331 |
| ಉತ್ತರ ಕನ್ನಡ | 5 | 330 |
| ಬೆಂಗಳೂರು ದಕ್ಷಿಣ | 6 | 327 |
| ಬೆಂಗಳೂರು ಉತ್ತರ | 7 | 326 |
| ಕೊಡಗು | 8 | 323 |
| ತುಮಕೂರು–ಮಧುಗಿರಿ | 9 | 322 |
| ಉತ್ತರಕನ್ನಡ–ಶಿರಸಿ | 10 | 322 |
| ಬೆಳಗಾವಿ–ಚಿಕ್ಕೋಡಿ | 11 | 321 |
| ಬೆಂಗಳೂರು ಗ್ರಾಮಾಂತರ | 12 | 313 |
| ಚಿಕ್ಕಮಗಳೂರು | 13 | 308 |
| ಮಂಡ್ಯ | 14 | 307 |
| ಬಾಗಲಕೋಟೆ | 15 | 306 |
| ಬೆಳಗಾವಿ | 16 | 305 |
| ಚಿಕ್ಕಬಳ್ಳಾಪುರ | 17 | 304 |
| ತುಮಕೂರು | 18 | 304 |
| ಶಿವಮೊಗ್ಗ | 19 | 302 |
| ಗದಗ | 20 | 301 |
| ದಾವಣಗೆರೆ | 21 | 301 |
| ಚಿತ್ರದುರ್ಗ* | 22 | 300 |
| ರಾಮನಗರ | 23 | 293 |
| ಧಾರವಾಡ | 24 | 292 |
| ಹಾವೇರಿ | 25 | 291 |
| ಚಾಮರಾಜನಗರ | 26 | 290 |
| ಕೋಲಾರ | 27 | 288 |
| ವಿಜಯನಗರ | 28 | 287 |
| ಬಳ್ಳಾರಿ | 29 | 279 |
| ವಿಜಯಪುರ | 30 | 274 |
| ಕೊಪ್ಪಳ | 31 | 273 |
| ಕಲಬುರಗಿ | 32 | 261 |
| ಯಾದಗಿರಿ | 33 | 258 |
| ರಾಯಚೂರು | 34 | 257 |
| ಬೀದರ್ | 35 | 250 |

* ಚಿತ್ರದುರ್ಗದವರೆಗಿನ ಶೈಕ್ಷಣಿಕ ಜಿಲ್ಲೆಗಳು ಪ್ರಚೆಷ್ಟಾ–1 ಶ್ರೇಯಾಂಕದ ಅಡಿಯಲ್ಲಿ ಬಂದರೆ ಉಳಿದ ಜಿಲ್ಲೆಗಳಿಗೆ ಪ್ರಚೆಷ್ಟಾ–2 ಶ್ರೇಯಾಂಕ ಸಿಕ್ಕಿದೆ

Publication Date 13/07/2026



ಪ್ರಾತಿನಿಧಿಕ ಚಿತ್ರ

ಪ್ರಜಾವಾಣಿ ವಾರ್ತೆ

ಜಗತ್ತಿನಲ್ಲಿಯೇ ಬೃಹತ್ ಶಿಕ್ಷಣ ವ್ಯವಸ್ಥೆ ಹೊಂದಿರುವ ದೇಶಗಳಲ್ಲಿ ಭಾರತವೂ ಒಂದಾಗಿದೆ. 14.67 ಲಕ್ಷ ಶಾಲೆಗಳು, 1.03 ಕೋಟಿ ಶಿಕ್ಷಕರು ಮತ್ತು ಸುಮಾರು 24.72 ಕೋಟಿ ವಿದ್ಯಾರ್ಥಿಗಳು ಈ ವ್ಯವಸ್ಥೆಯ ಭಾಗವಾಗಿದ್ದಾರೆ. ಶಾಲೆಗಳು ವಿವಿಧ ರೀತಿಯ ವ್ಯವಸ್ಥೆ ಹೊಂದಿದ್ದು, ವಿದ್ಯಾರ್ಥಿಗಳು ವಿಭಿನ್ನ ಸಾಮಾಜಿಕ, ಆರ್ಥಿಕ ಹಿನ್ನೆಲೆಗೆ ಸೇರಿದವರು. ವ್ಯವಸ್ಥೆ ಏಕರೂಪವಾಗಿಲ್ಲದ ಕಾರಣ ಶಿಕ್ಷಣದ ಗುಣಮಟ್ಟ ಅರಿಯುವ ಕೆಲಸ ಸಂಕೀರ್ಣವಾಗಿದೆ.

**ಕಾರ್ಯಕ್ಷಮತೆ ಶ್ರೇಯಾಂಕ ಸೂಚ್ಯಂಕ**

'ಕಾರ್ಯಕ್ಷಮತೆ ಶ್ರೇಯಾಂಕ ಸೂಚ್ಯಂಕ 2.0' (ಪಿಜಿಐ) ಅನ್ವಯ ಶಾಲೆಗಳನ್ನು ವಿವಿಧ ಗುಂಪುಗಳನ್ನಾಗಿ ವಿಂಗಡಿಸಲಾಗಿದ್ದು, ಅವುಗಳ ಸಾಧನೆಗೆ ತಕ್ಕಂತೆ ವಿವಿಧ ಹಂತಗಳಲ್ಲಿ ಸ್ಥಾನ ಕಲ್ಪಿಸಲಾಗಿದೆ. ಹೀಗೆ ಮಾಡುವುದರಿಂದ ಕಳಪೆ ಸಾಧನೆ ಮಾಡಿದ ರಾಜ್ಯಗಳು ತಾರತಮ್ಯ ಅನುಭವಿಸುವುದು ತಪ್ಪುತ್ತದೆ ಮತ್ತು ಮುಂದಿನ ವರ್ಷಗಳಲ್ಲಿ ಸ್ಥಾನ ಉತ್ತಮಪಡಿಸಿಕೊಳ್ಳಲು ಸಹಾಯಕವಾಗುತ್ತದೆ ಎಂದು ಪ್ರತಿಪಾದಿಸಲಾಗಿದೆ.

ಫಲಿತಾಂಶ ಮತ್ತು ಶೈಕ್ಷಣಿಕ ಆಡಳಿತ ಹಾಗೂ ನಿರ್ವಹಣೆ ಎನ್ನುವ ಎರಡು ವಿಭಾಗಗಳಲ್ಲಿ ಆರು ಮಾನದಂಡಗಳ (1.ಶೈಕ್ಷಣಿಕ ಫಲಿತಾಂಶ, 2.ಶಿಕ್ಷಣದ ಲಭ್ಯತೆ, 3.ಮೂಲಸೌಕರ್ಯ ಮತ್ತು ಸವಲತ್ತುಗಳು, 4.ಸಮಾನತೆ, 5.ಆಡಳಿತ ಪ್ರಕ್ರಿಯೆಗಳು, 6.ಶಿಕ್ಷಕರ ಕಲಿಕೆ ಮತ್ತು ತರಬೇತಿ) ಅನ್ವಯ ಶಾಲೆಗಳ ಸಾಧನೆಯನ್ನು ಮೌಲ್ಯಮಾಪನ ಮಾಡಿ ಶ್ರೇಯಾಂಕಗಳನ್ನು (ಗ್ರೇಡಿಂಗ್) ನೀಡಲಾಗಿದೆ. ಅದಕ್ಕೆ ಅಗತ್ಯವಾದ ದತ್ತಾಂಶವನ್ನು ಏಕೀಕೃತ ಜಿಲ್ಲಾವಾರು ಶೈಕ್ಷಣಿಕ ಮಾಹಿತಿ ವ್ಯವಸ್ಥೆ, ಪಿಎಂ ಪೋಷಣ್ ಸೇರಿದಂತೆ ಹಲವು ಮೂಲಗಳಿಂದ ಪಡೆಯಲಾಗಿದೆ.

ಗಮನಾರ್ಹ ಸಂಗತಿ ಎಂದರೆ, ಶ್ರೇಯಾಂಕದ ಪಟ್ಟಿಯಲ್ಲಿ ಮೊದಲ ಮೂರು ಶ್ರೇಣಿಗಳಲ್ಲಿ (ಉತ್ಕರ್ಷ, ಉತ್ತಮ–1, ಉತ್ತಮ–2) ಯಾವುದೇ ರಾಜ್ಯ/ಕೇಂದ್ರಾಡಳಿತ ಪ್ರದೇಶವೂ ಸ್ಥಾನ ಪಡೆದಿಲ್ಲ. ಕಳೆದ ಬಾರಿ ಆಕಾಂಶಿ–1ರಲ್ಲಿ ಸ್ಥಾನ ಪಡೆದಿದ್ದ ಕರ್ನಾಟಕವು ಈ ಬಾರಿ ತಮಿಳುನಾಡು, ಆಂಧ್ರಪ್ರದೇಶ ಮತ್ತಿತರ ರಾಜ್ಯಗಳೊಂದಿಗೆ ಪ್ರಚೆಷ್ಟಾ–3ರಲ್ಲಿ ಸ್ಥಾನ ಪಡೆದಿದೆ. ಕೇರಳ ಮತ್ತು ಮಹಾರಾಷ್ಟ್ರ ಕರ್ನಾಟಕಕ್ಕಿಂತ ಉತ್ತಮ ಸಾಧನೆ ಮಾಡಿವೆ.

**ಕಲಿಕೆಯಲ್ಲಿ ಹಿಂದೆ:** ರಾಜ್ಯದ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿದಿದ್ದಾರೆ. ಶೈಕ್ಷಣಿಕ ಫಲಿತಾಂಶದ ಮಾನದಂಡದ ವಿಭಾಗದಲ್ಲಿ ಒಟ್ಟು 240 ಅಂಕಗಳ ಪೈಕಿ ಕರ್ನಾಟಕವು ಕೇವಲ 72.7 ಅಂಕ ಮಾತ್ರ ಗಳಿಸಿ ಆಕಾಂಶಿ–1 ವಿಭಾಗದಲ್ಲಿ ಸ್ಥಾನ ಪಡೆದಿದ್ದು, ಆರು ವಿಭಾಗಗಳಲ್ಲಿಯೇ ಇದು ರಾಜ್ಯದ ಅತ್ಯಂತ ಕಳಪೆ ಸಾಧನೆಯಾಗಿದೆ. 'ಪರಾಖ್' ರಾಷ್ಟ್ರೀಯ ಸರ್ವೇಕ್ಷಣದಲ್ಲಿ (2024) ವಿವಿಧ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಆಧರಿಸಿ ಅಂಕ ನೀಡಲಾಗಿದೆ. ಶಿಕ್ಷಣದ ಲಭ್ಯತೆ, ಶೈಕ್ಷಣಿಕ ಆಡಳಿತದ ಪ್ರಗತಿಯ ನಡುವೆಯೂ ಶಾಲೆಗಳಲ್ಲಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿದಿರುವುದು ರಾಜ್ಯದ ಅತಿ ದೊಡ್ಡ ಸವಾಲಾಗಿದೆ.

ಇತರೆ ವಿಭಾಗಗಳಲ್ಲಿ ರಾಜ್ಯದ ಸಾಧನೆಯು ಆಶಾದಾಯಕವಾಗಿದೆ. ಲಭ್ಯತೆಯಲ್ಲಿ ರಾಜ್ಯವು ಉತ್ತಮ–1 ವಿಭಾಗದಲ್ಲಿ ಸ್ಥಾನ ಪಡೆದಿದ್ದು, 80ಕ್ಕೆ 66.5 ಅಂಕ ಪಡೆದಿದೆ. ವಿದ್ಯಾರ್ಥಿಗಳ ನೋಂದಣಿ, ಮುಂದುವರಿಕೆ ಇತ್ಯಾದಿ ವಿಚಾರಗಳಲ್ಲಿ ರಾಜ್ಯವು ಅಲ್ಪಮಟ್ಟಿನ ಸಾಧನೆ ಮಾಡಿದೆ. ಸಮಾನತೆಯ ವಿಭಾಗದಲ್ಲಿ ರಾಜ್ಯವು 260ಕ್ಕೆ 217.3ರಷ್ಟು ಅಂಕ ಪಡೆದಿದ್ದು, ವಿವಿಧ ಹಿನ್ನೆಲೆಗಳ ವಿದ್ಯಾರ್ಥಿಗಳನ್ನು ಒಳಗೊಳ್ಳುವ ಮತ್ತು ಅಂತರ ಕಡಿಮೆ ಮಾಡುವ ವಿಚಾರದಲ್ಲಿ ಗಮನಾರ್ಹ ಸಾಧನೆ ಮಾಡಿದೆ. ಶಿಕ್ಷಕರ ತರಬೇತಿಯ ವಿಭಾಗದಲ್ಲಿ ರಾಜ್ಯವು 100ಕ್ಕೆ 77.4 ಅಂಕ ಪಡೆದಿದ್ದು, ಉತ್ತಮ–2 ಸ್ಥಾನ ಪಡೆದಿದೆ. ಆದರೆ, ಶೈಕ್ಷಣಿಕ ಆಡಳಿತದಲ್ಲಿ 75 ಅಂಕ ಗಳಿಸಿ, ಪ್ರಚೆಷ್ಟಾ–1ರಲ್ಲಿ ಸ್ಥಾನ ಗಳಿಸಿದೆ.

ಮೂಲಸೌಕರ್ಯಗಳನ್ನು ಕಲ್ಪಿಸುವ ವಿಚಾರದಲ್ಲಿ ರಾಜ್ಯವು ಹಿಂದುಳಿದಿದೆ. ಈ ವಿಭಾಗದಲ್ಲಿ 190ಕ್ಕೆ 86.7 ಅಂಕಗಳನ್ನಷ್ಟೇ ಪಡೆದಿದೆ. ಶಾಲಾ ಕೊಠಡಿಗಳು, ವಿದ್ಯುತ್, ಕುಡಿಯುವ ನೀರು, ಶೌಚಾಲಯ, ಇಂಟರ್‌ನೆಟ್, ಕಲಿಕಾ ಸಂಪನ್ಮೂಲಗಳು ಮುಂತಾದ ಮೂಲಸೌಕರ್ಯಗಳು ಮತ್ತು ಸವಲತ್ತುಗಳನ್ನು ಕಲ್ಪಿಸುವ ವಿಚಾರದಲ್ಲಿ ರಾಜ್ಯವು ಸಾಕಷ್ಟು ಹಿಂದುಳಿದಿದ್ದು, ಪ್ರಚೆಷ್ಟಾ–2 ವಿಭಾಗದಲ್ಲಿ ಸ್ಥಾನ ಪಡೆದಿದೆ.

### ಆರು ಮಾನದಂಡಗಳಲ್ಲಿ ಕರ್ನಾಟಕ ಪಡೆದ ಅಂಕ ಮತ್ತು ಶ್ರೇಯಾಂಕ (ಆವರಣದಲ್ಲಿರುವುದು ಒಟ್ಟು ಅಂಕ)

| | | |
|---|---|---|
| ಕಲಿಕಾ ಫಲಿತಾಂಶ (240) | 72.7 | ಆಕಾಂಶಿ–1 |
| ಶಿಕ್ಷಣದ ಲಭ್ಯತೆ (80) | 66.5 | ಉತ್ತಮ–1 |
| ಮೂಲಸೌಕರ್ಯ,ಸವಲತ್ತು (190) | 86.73 | ಪ್ರಚೆಷ್ಟಾ–2 |
| ಸಮಾನತೆ (260) | 217.3 | ಉತ್ತಮ–1 |
| ಆಡಳಿತ ಪ್ರಕ್ರಿಯೆ (130) | 75 | ಪ್ರಚೆಷ್ಟಾ–1 |
| ಶಿಕ್ಷಕರ ಶಿಕ್ಷಣ ಮತ್ತು ತರಬೇತಿ (100) | 77.4 | ಉತ್ತಮ–2 |

### ದಕ್ಷಿಣ ಕನ್ನಡ ಮುಂದೆ

ರಾಜ್ಯದ ಶೈಕ್ಷಣಿಕ ಜಿಲ್ಲೆಗಳ ಪೈಕಿ 22 ಜಿಲ್ಲೆಗಳು ಪ್ರಚೆಷ್ಟಾ–1 ಶ್ರೇಯಾಂಕದಡಿ ಬಂದರೆ, 13 ಜಿಲ್ಲೆಗಳು ಪ್ರಚೆಷ್ಟಾ–2 ಶ್ರೇಯಾಂಕದ ವ್ಯಾಪ್ತಿಯಲ್ಲಿವೆ.

ಆರು ಮಾನದಂಡಗಳ ಒಟ್ಟು 600 ಅಂಕಗಳಲ್ಲಿ 347 ಅಂಕಗಳಿಸಿರುವ ದಕ್ಷಿಣ ಕನ್ನಡ ಜಿಲ್ಲೆ ಮೊದಲ ಸ್ಥಾನದಲ್ಲಿದ್ದರೆ, 336 ಅಂಕಗಳನ್ನು ಪಡೆದಿರುವ ಮೈಸೂರು ಜಿಲ್ಲೆ ಎರಡನೇ ಸ್ಥಾನದಲ್ಲಿದೆ. ಮೂರನೇ ಸ್ಥಾನದಲ್ಲಿರುವ ಉಡುಪಿ 333 ಅಂಕಗಳನ್ನು ಪಡೆದಿದೆ. 250 ಅಂಕಗಳನ್ನು ಗಳಿಸಿರುವ ಬೀದರ್ ಕೊನೆಯ ಸ್ಥಾನದಲ್ಲಿದೆ. ರಾಯಚೂರು ಅದಕ್ಕಿಂತ ಒಂದು ಸ್ಥಾನ ಮೊದಲಿದೆ. ಅದು ಪಡೆದ ಅಂಕಗಳು 257.

### ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

#### ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.


**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜುಲೈ 15**

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

**ವಿಳಾಸ**

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್,
ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

### ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಪಡೆದ ಅಂಕ




#### ಅಂಕವಾರು ಶ್ರೇಯಾಂಕದ ಲೆಕ್ಕಾಚಾರ

(ಆವರಣದಲ್ಲಿರುವುದು ಆಯಾ ಶ್ರೇಯಾಂಕ ಪಡೆದ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ)

- 941-1,000– ಉತ್ಕರ್ಷ (0), 881-940–ಉತ್ತಮ–1 (0)
- 821-880– ಉತ್ತಮ–2 (0), 761-820–ಉತ್ತಮ–3 (1)
- 701-760– ಪ್ರಚೆಷ್ಟಾ–1 (4), 641-700–ಪ್ರಚೆಷ್ಟಾ–2 (5)
- 581-640–ಪ್ರಚೆಷ್ಟಾ–3 (13), 521-580– ಆಕಾಂಶಿ–1 (13)
- 461-520– ಆಕಾಂಶಿ–2, 401-460–ಆಕಾಂಶಿ–3

#### ಕೇಂದ್ರಾಡಳಿತ ಪ್ರದೇಶಗಳು

| | | |
|---|---|---|
| ಚಂಡೀಗಢ | 739.1 | 766.0 |
| ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು | 604.5 | 638.9 |
| ದಾದ್ರಾ–ನಗರ್ ಹವೇಲಿ, ದಿಯು ಮತ್ತು ದಾಮನ್ | 683.2 | 723.8 |
| ಲಕ್ಷದ್ವೀಪ | 587.7 | 672.8 |
| ಪುದುಚೆರಿ | 575 | 584.8 |

### ❖ ರಷ್ಯಾ: ಕಚ್ಚಾ ತೈಲ ಆಮದು ಶೇ 34ರಷ್ಟು ಹೆಚ್ಚಳ

- ಭಾರತವು ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದು ಮೇ ತಿಂಗಳಿಗೆ ಹೋಲಿಸಿದರೆ ಜೂನ್‌ನಲ್ಲಿ ಶೇ 34ರಷ್ಟು ಏರಿಕೆಯಾಗಿದೆ ಎಂದು ಯುರೋಪ್‌ನ 'ಇಂಧನ ಮತ್ತು ಶುದ್ಧ ಗಾಳಿ ಕುರಿತ ಸಂಶೋಧನಾ ಕೇಂದ್ರ' (ಸಿಆರ್‌ಇಎ) ಹೇಳಿದೆ.
- ಭಾರತವು ರಷ್ಯಾದಿಂದ ಜೂನ್ ತಿಂಗಳಿನಲ್ಲಿ ಒಟ್ಟು ₹59,861 ಕೋಟಿ (5.5 ಬಿಲಿಯನ್ ಯುರೊ) ಮೌಲ್ಯದ ಪಳೆಯುಳಿಕೆ ಇಂಧನವನ್ನು ಖರೀದಿಸಿದೆ. ಈ ಪೈಕಿ ₹48,977 ಕೋಟಿ (4.5 ಬಿಲಿಯನ್ ಯುರೊ) ಮೌಲ್ಯದ ಕಚ್ಚಾ ತೈಲವನ್ನು ಖರೀದಿಸಿದ್ದು, ಒಟ್ಟು ಖರೀದಿಯಲ್ಲಿ ಇದು ಶೇ 83ರಷ್ಟು ಎಂದು ಸಿಆರ್‌ಇಎ ತಿಳಿಸಿದೆ.
- ರಷ್ಯಾದಿಂದ ಚೀನಾ ಜೂನ್‌ನಲ್ಲಿ ₹79,452 ಕೋಟಿ (7.3 ಬಿಲಿಯನ್ ಯುರೊ) ಮೌಲ್ಯದ ಪಳೆಯುಳಿಕೆ ಇಂಧನ ಖರೀದಿಸಿದ್ದು, ರಷ್ಯಾದ ಅತಿದೊಡ್ಡ ಗ್ರಾಹಕನಾಗಿದೆ. ಭಾರತ ಎರಡನೇ ಸ್ಥಾನದಲ್ಲಿದೆ.
- ಮೇ ತಿಂಗಳಿಗೆ ಹೋಲಿಸಿದರೆ ಜೂನ್ ತಿಂಗಳಿನಲ್ಲಿ ದೇಶದ ಒಟ್ಟು ಕಚ್ಚಾ ತೈಲದ ಆಮದು ಶೇ 5.4ರಷ್ಟು ಹೆಚ್ಚಳವಾಗಿದೆ. ಜಾಮ್ ನಗರದಲ್ಲಿನ ರಿಲಯನ್ಸ್ ಇಂಡಸ್ಟ್ರೀಸ್‌ನ ತೈಲ ಸಂಸ್ಕರಣಾ ಘಟಕವು ಮೇ ತಿಂಗಳಿನಲ್ಲಿ ಖರೀದಿಸಿದ ಕಚ್ಚಾ ತೈಲಕ್ಕಿಂತಲೂ ಜೂನ್‌ನಲ್ಲಿ ಶೇ 150ರಷ್ಟು ಹೆಚ್ಚು ಕಚ್ಚಾ ತೈಲ ಖರೀದಿಸಿದೆ.
- ಇದೇ ವೇಳೆ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ಪ್ಯಾರಾದೀಪ್ ಸಂಸ್ಕರಣಾ ಘಟಕವು ಶೇ 126ರಷ್ಟು, ಭಾರತ್ ಪೆಟ್ರೋಲಿಯಂನ ಕೊಚ್ಚಿ ಸಂಸ್ಕರಣಾ ಘಟಕವು ಶೇ 83ರಷ್ಟು ಮತ್ತು ನಯರಾ ಎನರ್ಜಿಯ ವಾದಿನರ್ ಘಟಕವು ಶೇ 45ರಷ್ಟು ಹೆಚ್ಚು ಕಚ್ಚಾ ತೈಲ ಖರೀದಿಸಿವೆ ಎಂದು ತಿಳಿಸಿದೆ.

# ಭಾರತ–ಕೆನಡಾ: ಮಾತುಕತೆ ಮುಕ್ತಾಯ

## ಜುಲೈ 6ರಿಂದ 10ರವರೆಗೆ ಒಟ್ಟಾವಾದಲ್ಲಿ ನಡೆದ ಮೂರನೇ ಸುತ್ತಿನ ಚರ್ಚೆ

**ನವದೆಹಲಿ (ಪಿಟಿಐ):** ಭಾರತ ಮತ್ತು ಕೆನಡಾ ನಡುವಿನ ಪ್ರಸ್ತಾವಿತ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ ಮೂರನೇ ಸುತ್ತಿನ ಮಾತುಕತೆ ಮುಕ್ತಾಯಗೊಂಡಿದೆ ಎಂದು ಕೇಂದ್ರ ವಾಣಿಜ್ಯ ಇಲಾಖೆ ತಿಳಿಸಿದೆ.

ಉಭಯ ದೇಶಗಳ ನಡುವೆ ಜುಲೈ 6ರಿಂದ 10ರವರೆಗೆ ಕೆನಡಾದ ಒಟ್ಟಾವಾದಲ್ಲಿ ಮಾತುಕತೆ ನಡೆದಿದೆ. ಈ ವೇಳೆ ಸರಕು, ಸೇವೆಗಳು, ಬೌದ್ಧಿಕ ಆಸ್ತಿ, ವ್ಯವಹಾರಕ್ಕೆ ಇರುವ ತಾಂತ್ರಿಕ ಅಡಚಣೆಗಳು ಸೇರಿದಂತೆ ವಿವಿಧ ವಿಷಯಗಳ ಕುರಿತು ಮಾತುಕತೆ ನಡೆದಿದೆ. ಮಾತುಕತೆಯು ಸಕಾರಾತ್ಮಕವಾಗಿತ್ತು. ಅಲ್ಲದೆ, ಪ್ರಸಕ್ತ ವರ್ಷದಲ್ಲಿಯೇ ಮಾತುಕತೆಯನ್ನು ಪೂರ್ಣಗೊಳಿಸಲು ಎರಡೂ ದೇಶಗಳು ಉದ್ದೇಶಿಸಿವೆ ಎಂದು ಇಲಾಖೆ ತಿಳಿಸಿದೆ.

2030ರ ವೇಳಗೆ ದ್ವಿಪಕ್ಷೀಯ ವ್ಯಾಪಾರದ ಮೌಲ್ಯವನ್ನು ₹4.76 ಲಕ್ಷ ಕೋಟಿಗೆ (50 ಬಿಲಿಯನ್ ಡಾಲರ್) ಹೆಚ್ಚಿಸುವ ಗುರಿಯನ್ನು ಉಭಯ ದೇಶಗಳು ಹೊಂದಿವೆ. ಈ ಹಿನ್ನೆಲೆಯಲ್ಲಿ ಮಾತುಕತೆಯು ಮಹತ್ವ ಪಡೆದಿದೆ.



2024–25ರ ಆರ್ಥಿಕ ವರ್ಷದಲ್ಲಿ ಭಾರತ ಮತ್ತು ಕೆನಡಾ ನಡುವಿನ ದ್ವಿಪಕ್ಷೀಯ ವ್ಯಾಪಾರದ ಮೌಲ್ಯವು ₹82,556 ಕೋಟಿಯಷ್ಟಾಗಿತ್ತು. ಅದು ಕಳೆದ ಆರ್ಥಿಕ ವರ್ಷದಲ್ಲಿ ಶೇ 8.22ರಷ್ಟು ಇಳಿಕೆಯಾಗಿ, ₹75,787 ಕೋಟಿಯಾಗಿದೆ.

ಕೆನಡಾದ ಜನಸಂಖ್ಯೆ 4.16 ಕೋಟಿಯಷ್ಟಾಗಿದ್ದು, ಜಿಡಿಪಿಯು ₹223 ಲಕ್ಷ ಕೋಟಿ (2.34 ಟ್ರಿಲಿಯನ್ ಡಾಲರ್) ಆಗಿದೆ.

ಭಾರತವು ಕೆನಡಾಕ್ಕೆ ಪ್ರಮುಖವಾಗಿ, ಔಷಧಗಳು, ಕಬ್ಬಿಣ ಮತ್ತು ಉಕ್ಕು, ಸಾಗರೋತ್ಪನ್ನಗಳು, ಎಲೆಕ್ಟ್ರಾನಿಕ್ ಸರಕುಗಳು, ರಾಸಾಯನಿಕ ಸೇರಿದಂತೆ ವಿವಿಧ ವಸ್ತುಗಳನ್ನು ರಫ್ತು ಮಾಡುತ್ತದೆ. ಅಲ್ಲದೆ, ದೂರಸಂಪರ್ಕ, ಕಂಪ್ಯೂಟರ್ ಮತ್ತು ಮಾಹಿತಿ ಸೇವೆಗಳು ಹಾಗೂ ಇತರೆ ವ್ಯಾಪಾರ ಸೇವೆಗಳನ್ನು ರಫ್ತು ಮಾಡುತ್ತದೆ.

ಕೆನಡಾದಿಂದ ಭಾರತವು ದ್ವಿದಳ ಧಾನ್ಯಗಳು, ಹರಳು, ಅಮೂಲ್ಯ ಲೋಹಗಳು, ಕಲ್ಲಿದ್ದಲು, ರಸಗೊಬ್ಬರ, ಕಾಗದ, ಕಚ್ಚಾ ಪೆಟ್ರೋಲಿಯಂ ಅನ್ನು ಪ್ರಮುಖವಾಗಿ ಆಮದು ಮಾಡಿಕೊಳ್ಳುತ್ತದೆ.

ಭಾರತ ಮತ್ತು ಕೆನಡಾದ ಮುಕ್ತ ವ್ಯಾಪಾರ ಒಪ್ಪಂದವು ಉತ್ತಮ ಪ್ರಗತಿಯಲ್ಲಿದೆ. ಮುಂದಿನ ಸುತ್ತಿನ ಮಾತುಕತೆ ನಡೆಸಲು ಭಾರತದ ಅಧಿಕಾರಿಗಳ ತಂಡವು ಸೋಮವಾರ ಕೆನಡಾಕ್ಕೆ ಭೇಟಿ ನೀಡಲಿದೆ. ಮುಂದಿನ ಆರು ತಿಂಗಳೊಳಗೆ ಈ ಒಪ್ಪಂದ ಅಂತಿಮಗೊಳಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ಜುಲೈ 4ರಂದು ಹೇಳಿದ್ದರು.

### ಐದು ದಿನ ಗೋಯಲ್ ಪ್ರವಾಸ

**ನವದೆಹಲಿ (ಪಿಟಿಐ):** ವ್ಯಾಪಾರ ಮತ್ತು ಹೂಡಿಕೆಗೆ ಉತ್ತೇಜನ ನೀಡಲು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ಜುಲೈ 13ರಿಂದ ಐದು ದಿನ ಸ್ಪೇನ್, ಬೆಲ್ಜಿಯಂ ಮತ್ತು ಫಿನ್‌ಲ್ಯಾಂಡ್‌ಗೆ ಭೇಟಿ ನೀಡಲಿದ್ದಾರೆ.

ಈ ವೇಳೆ ಸಚಿವರು ಭಾರತ ಮತ್ತು ಈ ಮೂರು ದೇಶಗಳ ನಡುವೆ ವ್ಯಾಪಾರ ಹಾಗೂ ಹೂಡಿಕೆಗಳನ್ನು ಹೆಚ್ಚಿಸುವ ಮಾರ್ಗಗಳ ಕುರಿತು ಚರ್ಚಿಸಲಿದ್ದಾರೆ ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ.

ಶುದ್ಧ ಇಂಧನ, ಡಿಜಿಟಲ್ ತಂತ್ರಜ್ಞಾನ, ತಯಾರಿಕಾ ವಲಯ, ಹರಳು ಮತ್ತು ಆಭರಣಗಳು, ಆಹಾರ ಸಂಸ್ಕರಣೆ, ಆರೋಗ್ಯ ಸೇರಿದಂತೆ ವಿವಿಧ ವಲಯಗಳ ಪ್ರಮುಖ ಕಂಪನಿಗಳ ಪ್ರತಿನಿಧಿಗಳು ನಿಯೋಗದಲ್ಲಿ ಇರಲಿದ್ದಾರೆ.

Publication Date
13/07/2026

Presented by

## ❖ ಕತಾರ್ ಮಾಜಿ ದೊರೆ ನಿಧನ

- ಕತಾರ್‌ನ ಮಾಜಿ ದೊರೆ, ಪರಿವರ್ತನೆಯ ಹರಿಕಾರ ಎಂಬ ಹೆಸರು ಪಡೆದಿದ್ದ ಶೇಖ್ ಹಮದ್ ಬಿನ್ ಖಲೀಫಾ ಅಲ್ ಥಾನಿ (74) ಅವರು ಭಾನುವಾರ ನಿಧನರಾದರು ಎಂದು ಇಲ್ಲಿನ ಸರ್ಕಾರಿ ಮಾಧ್ಯಮ ವರದಿ ಮಾಡಿದೆ.
- ಶೇಖ್ ಹಮದ್ ಅವರು 18 ವರ್ಷ ಕತಾರ್ ಅನ್ನು ಆಳಿದ್ದರು.
- ಪರ್ಶಿಯನ್ ಕೊಲ್ಲಿಯ ಸಾಮಾನ್ಯ ದೇಶವಾಗಿದ್ದ ಕತಾರ್ ಅನ್ನು ಶೇಖ್ ಹಮದ್ ಅವರು ಜಾಗತಿಕವಾಗಿ ಪ್ರಮುಖ ರಾಜತಾಂತ್ರಿಕ ದೇಶವನ್ನಾಗಿ ಪರಿವರ್ತಿಸಿದರು. ಮಾಧ್ಯಮ ಕ್ಷೇತ್ರ, ಹೂಡಿಕೆಯಲ್ಲೂ ಗಮನಾರ್ಹ ಪ್ರಗತಿ ಸಾಧಿಸಿದರು. ಹಿಂದುಳಿದ ದೇಶವೆಂಬ ಹಣೆಪಟ್ಟಿ ಯನ್ನು ಕಳಚಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತರಕ್ಕೆ ಏರಿಸಿದರು.
- ಸಂಪ್ರದಾಯವನ್ನು ಮುರಿದು ಸ್ವಯಂಪ್ರೇರಿತರಾಗಿ ತಮ್ಮ ಮಗನಿಗೆ 2013ರಲ್ಲಿ ಅಧಿಕಾರ ಹಸ್ತಾಂತರ ಮಾಡುವ ಮೂಲಕ ಅಳ್ವಿಕೆಯಿಂದ ಕೆಳಗಿಳಿದಿದ್ದರು.
- ಅವರ ಅಳ್ವಿಕೆ ಅವಧಿಯಲ್ಲಿ ಸ್ವತಂತ್ರ ನೀತಿ ನಿರೂಪಣೆ ಕಾರಣದಿಂದಾಗಿ ಶಿಯಾ ಪ್ರಾಬಲ್ಯದ ಇರಾನ್, ಬಂಡುಕೋರರ ಗುಂಪು ಹಮಾಸ್ ಮತ್ತು ಈಜಿಪ್ಟ್‌ನಲ್ಲಿನ ನಿಷೇಧಿತ ಮುಸ್ಲಿಂ ಬ್ರದರ್ ಹುಡ್ ಸೇರಿದಂತೆ ಪ್ರಾದೇಶಿಕ ಹಾಗೂ ಪಶ್ಚಿಮದ ರಾಷ್ಟ್ರಗಳೊಂದಿಗೆ ಕತಾರ್ ಉತ್ತಮ ಬಾಂಧವ್ಯ ಸಾಧಿಸಿತು.



'ಎಚ್‌ಇಎಕ್ಸ್20' ಕಂಪನಿ ಅಭಿವೃದ್ಧಿಪಡಿಸಿದ ಗಗನನೌಕೆ ನಭಕ್ಕೆ

# 'ಬಾಹ್ಯಾಕಾಶ'ದಲ್ಲಿ ಮಲಯಾಳಿಗರ ಛಾಪು

ಪ್ರಜಾವಾಣಿ ವಾರ್ತೆ

**ತಿರುವನಂತಪುರ:** 49 ವರ್ಷದ ಅನಿಲ್ ಮೆನನ್ ಜುಲೈ 14ರಂದು ಬಾಹ್ಯಾಕಾಶ ಯಾನ ಕೈಗೊಳ್ಳಲಿದ್ದಾರೆ. ಆ ಮೂಲಕ, ಅಂತರಿಕ್ಷಯಾನ ಕೈಗೊಳ್ಳುತ್ತಿರುವ ಮೊದಲ ಮಲಯಾಳಿ ಎಂಬ ಹೆಗ್ಗಳಿಕೆಗೂ ಪಾತ್ರರಾಲಿದ್ದಾರೆ.

ಅನಿಲ್ ಮೆನನ್

ಅನಿಲ್ ಮೆನನ್ ಮಾತ್ರವಲ್ಲ, ತಿರುವನಂತಪುರ ಮೂಲದ ಕಂಪನಿ 'ಎಚ್‌ಇಎಕ್ಸ್20' ತಾನು ನಿರ್ಮಿಸಿದ ಗಗನನೌಕೆಯನ್ನು ಸ್ಪೇಸ್‌ಎಕ್ಸ್ ರಾಕೆಟ್ ಮೂಲಕ ನಭಕ್ಕೆ ಕಳುಹಿಸುವ ಮೂಲಕ ಗಮನ ಸೆಳೆದಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಮಲಯಾಳಿಗರು ತಮ್ಮದೇ ಛಾಪು ಮೂಡಿಸುವ ಮೂಲಕ ಗಮನ ಸೆಳೆಯುತ್ತಿದ್ದಾರೆ.

> **ಯುಎಇ ಬಾಹ್ಯಾಕಾಶ ಸಂಸ್ಥೆ ಹಾಗೂ ಬ್ರಿಟನ್‌ನ ಕಂಪನಿಯೊಂದಕ್ಕಾಗಿ 'ಎಚ್‌ಇಎಕ್ಸ್20' ಉಪಗ್ರಹಗಳನ್ನು ಅಭಿವೃದ್ಧಿಪಡಿಸುತ್ತಿದೆ**
> **ಲಾಯ್ಡ್ ಜಾಕೋಬ್ ಲೋಪೇಜ್**
> 'ಎಚ್‌ಇಎಕ್ಸ್20' ಸಹಸಂಸ್ಥಾಪಕ

ಸ್ಪೇಸ್‌ಎಕ್ಸ್‌ನ ಬಾಹ್ಯಾಕಾಶ ಕಾರ್ಯಕ್ರಮ 'ಟ್ರಾನ್ಸ್‌ಪೋರ್ಟರ್‌-17' ಅಡಿ ಇತ್ತೀಚೆಗೆ ಎಚ್‌ಇಎಕ್ಸ್20 ಕಂಪನಿ ತಯಾರಿಸಿದ ಗಗನನೌಕೆಯನ್ನು ಉಡ್ಡಯನ ಮಾಡಲಾಗಿದೆ.

ಈಗ, ಇದೇ ಕಂಪನಿಯ ಎರಡನೇ ಗಗನನೌಕೆ 'ಕೈನೆಟಿಕ್ ಆಪ್ಟಿಕಲ್ ಯಾ ಆಬ್ಸರ್ವರ್'(ಕೆಒವೈಒ) ಅನ್ನು ಕಳೆದ ವಾರ ಯಶಸ್ವಿಯಾಗಿ ಉಡ್ಡಯನ ಮಾಡಲಾಗಿದೆ. ಈ ಗಗನನೌಕೆಯನ್ನು ತೈವಾನ್‌ನ ನ್ಯಾಷನಲ್ ಸೆಂಟ್ರಲ್ ಯೂನಿ-ವರ್ಸಿಟಿಗಾಗಿ ಅಭಿವೃದ್ಧಿಪಡಿಸಲಾಗಿದೆ.

ಇದಕ್ಕೂ ಮೊದಲು, ಸ್ಪೇಸ್‌ಎಕ್ಸ್‌ನ 'ಟ್ರಾನ್ಸ್‌ಪೋರ್ಟರ್‌-13' ಕಾರ್ಯಕ್ರಮದ ಭಾಗವಾಗಿ 'ಎಚ್‌ಇಎಕ್ಸ್20' ತನ್ನ ಮೊದಲ ಗಗನನೌಕೆ 'ನೀಲಾ'ವನ್ನು ಅಂತರಿಕ್ಷಕ್ಕೆ ಕಳುಹಿಸಿತ್ತು.

'ನೀಲಾ' ಕಡಿಮೆ ಅವಧಿಗಾಗಿ ಬಾಹ್ಯಾಕಾಶದಲ್ಲಿ ಕಾರ್ಯನಿರ್ವಹಿಸಲಿದೆ. 'ಕೆಒವೈಒ' ಒಂದೂವರೆಯಿಂದ ಎರಡು ವರ್ಷ ದತ್ತಾಂಶ ರವಾನಿಸಲಿದೆ. ಹೀಗಾಗಿ, ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ನಾವು ಭದ್ರವಾಗಿ ತಳವೂರುವುದಕ್ಕೆ 'ಕೆಒವೈಒ' ನಮಗೆ ಬಲ ತುಂಬಲಿದೆ' ಎಂದು 'ಎಚ್‌ಇಎಕ್ಸ್20' ಕಂಪನಿಯ ಸಹಸಂಸ್ಥಾಪಕ ಹಾಗೂ ಮುಖ್ಯ ಜಾಗತಿಕ ಅಧಿಕಾರಿ ಲಾಯ್ಡ್ ಜಾಕೋಬ್ ಲೋಪೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಗಗನನೌಕೆಯು(ಕೆಒವೈಒ) ಕಕ್ಷೆಗೆ ಸೇರಿದ ಕೂಡಲೇ ಕಾರ್ಯಾಚರಣೆ ಆರಂಭಿಸಿದ್ದು, ಇಲ್ಲಿನ ನಿಯಂತ್ರಣ ಕೇಂದ್ರದೊಂದಿಗೆ ಯಶಸ್ವಿಯಾಗಿ ಸಂವಹನ ಸಾಧಿಸಿರುವುದು ನಮ್ಮ ಸಂತಸವನ್ನು ಹೆಚ್ಚಿಸಿದೆ' ಎಂದು ಲೋಪೇಜ್ ಹೇಳಿದರು.

ಲೋಪೇಜ್ ಮತ್ತು ಅಶ್ವಿನ್ ಚಂದ್ರನ್, ಅಮಲ್ ಚಂದ್ರನ್, ಅನುರಾಗ್ ರಘು ಹಾಗೂ ಅರವಿಂದ ಎಂ.ಬಿ ಅವರು ಜತೆಗೂಡಿ 2020ರಲ್ಲಿ 'ಎಚ್‌ಇಎಕ್ಸ್20' ಕಂಪನಿ ಸ್ಥಾಪಿಸಿದ್ದಾರೆ.

### ಮೆನನ್‌ಗೆ ಪಾಲಕ್ಕಾಡ್ ನಂಟು

ರಷ್ಯಾದ 'ಎಕ್ಸ್‌ಪಿಡಿಷನ್‌-75' ಬಾಹ್ಯಾಕಾಶ ಕಾರ್ಯಕ್ರಮದ ಭಾಗವಾಗಿ ಮೂವರು ಗಗನಯಾನಿಗಳನ್ನು ಹೊತ್ತು 'ಸೋಯುಜ್ ಎಂಎಸ್‌-29' ಗಗನನೌಕೆಯು ಜುಲೈ 14ರಂದು ಕಜಕಸ್ತಾನದಿಂದ ನಭಕ್ಕೆ ಹಾರಲಿದೆ. 49 ವರ್ಷದ ಅನಿಲ್ ಮೆನನ್ ಕೂಡ ಈ ತಂಡದ ಸದಸ್ಯರಾಗಿದ್ದಾರೆ.

ಅನಿಲ್ ಅವರ ಪೂರ್ವಜರು ಕೇರಳದ ಪಾಲಕ್ಕಾಡ್‌ನವರು. ಇವರು, ಖ್ಯಾತ ವಕೀಲ ಹಾಗೂ ರಾಜಕಾರಣಿಯಾಗಿದ್ದ ಚೇತ್ತೂರು ಶಂಕರನ್ ನಾಯರ್ ಅವರ ಮರಿಮೊಮ್ಮಗ. ಶಂಕರನ್ ನಾಯರ್ ಅವರು 1897ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. 1906ರಿಂದ 1908ರ ವರೆಗೆ ಮದ್ರಾಸ್ ಪ್ರಾಂತ್ಯದ ಅಡ್ವೊಕೇಟ್ ಜನರಲ್ ಆಗಿದ್ದರು.

ಅನಿಲ್ ಅವರ ತಂದೆ ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ತೆರಳಿದರು. ಉಕ್ರೇನ್‌ನ ಎಲಿಜಬೆತ್ ಸಮೊಲೆಂಕೊ ಅವರನ್ನು ವಿವಾಹವಾಗಿದ್ದರು.

2014ರಿಂದ ಅನಿಲ್ ಮೆನನ್ ನಾಸಾದಲ್ಲಿ 'ಫ್ಲೈಟ್ ಸರ್ಜನ್' ಆಗಿ ಕಾರ್ಯ ನಿರ್ವಹಿಸುತ್ತಿದ್ದರು. 2018ರಲ್ಲಿ ಅವರು ಸ್ಪೇಸ್‌ಎಕ್ಸ್ ಸೇರಿದರು. ಅವರ ಪತ್ನಿ ಅನ್ನಾ ಮೆನನ್ ಕೂಡ ಗಗನಯಾನಿ

**❖ ಆಯೋಗದ 75 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲು ಇಂತಹ ಕ್ರಮ ತನಿಖೆಗೆ ರಾಷ್ಟ್ರಪತಿಗೆ ರಾಜ್ಯಪಾಲರ ಶಿಫಾರಸು ಅಧಿಕಾರ ದುರುಪಯೋಗ, ಸ್ವಜನಪಕ್ಷಪಾತ ಆರೋಪ**

- ಕೆಪಿಎಸ್‌ಸಿ ಅಧ್ಯಕ್ಷ ಅಮಾನತು: ಪುತ್ರಿಗೆ ಸರ್ಕಾರಿ ಹುದ್ದೆಗಿಟ್ಟಿಸಿಕೊಳ್ಳಲು ಅಧಿಕಾರ ದುರುಪಯೋಗ, ಸ್ವಜನಪಕ್ಷಪಾತ ಎಸಗಿದ್ದಾರೆಂದು ಸಲ್ಲಿಕೆಯಾಗಿರುವ ದೂರು ಆಧರಿಸಿ ಕರ್ನಾಟಕ ಲೋಕ ಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ ಅವರನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಮಾನತು ಮಾಡಿದ್ದಾರೆ.
- ಕೆಪಿಎಸ್‌ಸಿಯ 75 ವರ್ಷಗಳ ಇತಿಹಾಸದಲ್ಲಿ ಅಧ್ಯಕ್ಷರೊಬ್ಬರು ಅಮಾನತುಗೊಂಡಿರುವುದು ಇದೇ ಮೊದಲು. ಅಲ್ಲದೆ, ಸಾಹುಕಾರ ವಿರುದ್ಧದ ಆರೋಪಗಳ ಕುರಿತು ತನಿಖೆಗೆಸಂವಿಧಾನದ 317(1)ನೇ ವಿಧಿಯ ಅಡಿಯಲ್ಲಿ ಸುಪ್ರೀಂ ಕೋರ್ಟ್ ಗಮನಕ್ಕೆ ತರುವಂತೆ ರಾಜ್ಯಪಾಲರು ರಾಷ್ಟ್ರಪತಿಗೆ ಶಿಫಾರಸು ಮಾಡಿದ್ದಾರೆ. ಮುಂದಿನ ಆದೇಶದವರೆಗೆ ಹಂಗಾಮಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವಂತೆ ಆಯೋಗದ ಹಿರಿಯ ಸದಸ್ಯರೊಬ್ಬರಿಗೆ ಆದೇಶಿಸಿದ್ದಾರೆ.
- 'ಕೆಪಿಎಸ್‌ಸಿಯ ಸಮಗ್ರತೆ ಮತ್ತು ವಿಶ್ವಾಸಾರ್ಹತೆ ರಕ್ಷಿಸುವುದರ ಜೊತೆಗೆ ನ್ಯಾಯಯುತ, ನಿಷ್ಪಕ್ಷಪಾತ ಮತ್ತು ಪ್ರಭಾವ ರಹಿತ ತನಿಖೆ ಖಚಿತಪಡಿಸಿಕೊಳ್ಳಲು, ರಾಷ್ಟ್ರಪತಿಯಿಂದ ಮುಂದಿನ ಆದೇಶ ಬರುವವರೆಗೆ ಸಾಹುಕಾರ ಅವರನ್ನು ಅಧ್ಯಕ್ಷ ಹುದ್ದೆಯಿಂದ ತಕ್ಷಣ ದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ' ಎಂದು ಲೋಕಭವನವು ಸೋಮವಾರ ಪ್ರಕಟಣೆ ಹೊರಡಿಸಿದೆ.
- ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಲ್ಲಿನ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಗೆ ಸಾಹುಕಾರ ಅವರ ಪುತ್ರಿ ಸುಮಾ ಎಸ್. ಸಾಹುಕಾರ ತಮ್ಮ ಕುಟುಂಬದ ವಾರ್ಷಿಕ ಆದಾಯ * 40 ಸಾವಿರ ಎಂದು ಘೋಷಿಸಿದ ಆದಾಯ ಮತ್ತು ಜಾತಿ ಪ್ರಮಾಣಪತ್ರ ಪಡೆದು 3ಬಿ ಮೀಸಲಾತಿ ಅಡಿ ಅರ್ಜಿ ಸಲ್ಲಿಸಿದ್ದರು. ಮೂಲ ದಾಖಲೆಗಳ ಪರಿಶೀಲನೆಯ ವೇಳೆಯಲ್ಲಿ ಈ ವಿಷಯ ಆಯೋಗದ ಅಧಿಕಾರಿಗಳ ಗಮನಕ್ಕೆ ಬಂದಿತ್ತು. ಈ ಬಗ್ಗೆ ಲೋಕಭವನಕ್ಕೆ ದೂರು ಸಲ್ಲಿಕೆ ಆಗಿತ್ತು.
- ಲೋಕಭವನದ ಪ್ರಕಟಣೆಯಲ್ಲಿ ಏನಿದೆ?: 'ಶಿವಶಂಕರಪ್ಪ ಸಾಹುಕಾರ ವಿರುದ್ಧ ಸ್ವಜನಪಕ್ಷಪಾತ, ಮಾಹಿತಿಬಹಿರಂಗಪಡಿಸದೇ ಇರುವುದು ಸೇರಿ ಮತ್ತಿತರ ದೂರುಗಳು ಬಂದಿದ್ದವು. ಅಧಿಕಾರ ದುರುಪಯೋಗಪಡಿಸಿಕೊಂಡು ತಮ್ಮ ಇಬ್ಬರು ಹೆಣ್ಣುಮಕ್ಕಳನ್ನು ಕೈಗಾರಿಕಾ ವಿಸ್ತರಣಾ ಅಧಿಕಾರಿ ಹುದ್ದೆಗಳಿಗೆ ಆಯ್ಕೆ ಮಾಡಲು ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ. ಅವರ ನೇರ ಅವಲಂಬಿತರು ಕೆಪಿಎಸ್‌ಸಿ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾಗ, ಈ ನೇಮಕಾತಿ ಪ್ರಕ್ರಿಯೆಯಿಂದ ದೂರವಿರಲು ಅಥವಾ ಹಿತಾಸಕ್ತಿ ಸಂಘರ್ಷವನ್ನು ಔಪಚಾರಿಕವಾಗಿ ಘೋಷಿಸಲು ಅಧ್ಯಕ್ಷರು ವಿಫಲರಾಗಿದ್ದಾರೆ ಎಂಬುದು ಸ್ಪಷ್ಟವಾಗಿ ಕಂಡುಬಂದಿದೆ.
- 'ಅಧ್ಯಕ್ಷರ ಪುತ್ರಿಯೊಬ್ಬರು ತಮ್ಮ ಕುಟುಂಬದ ವಾರ್ಷಿಕ ಆದಾಯವನ್ನು ₹40 ಸಾವಿರ ಎಂದು ಘೋಷಿಸುವ ಮೂಲಕ ಆದಾಯ ಮತ್ತು ಜಾತಿ ಪ್ರಮಾಣಪತ್ರ ಪಡೆದುಕೊಂಡಿದ್ದಾರೆ. ಹೆಚ್ಚಿನ ಆದಾಯ ಇತ್ತು ಮತ್ತು ತಮ್ಮ ತಂದೆ ಆಯೋಗದ ಅಧ್ಯಕ್ಷರಾಗಿದ್ದಾರೆ ಎಂಬ ಅರಿವು ಇತ್ತು. ಹಾಗಿದ್ದರೂ ಸತ್ಯಾಂಶಗಳನ್ನು ಮರೆಮಾಚಿ ಮೀಸಲಾತಿ ಮತ್ತು ಕೆನೆಪದರ ವಿನಾಯಿತಿ ಕೋರಿದ್ದಾರೆ ಎಂಬುದನ್ನು ಸಾಕ್ಷ್ಯಗಳು ಸೂಚಿಸುತ್ತವೆ.
- *2002ರ ಮಾರ್ಚ್ 30ರ ಸರ್ಕಾರಿ ಆದೇಶದ ಪ್ರಕಾರ, ಕೆಪಿಎಸ್‌ಸಿ ಅಧ್ಯಕ್ಷರ ಮಕ್ಕಳು ಇತರ ಹಿಂದುಳಿದ ವರ್ಗಗಳ ಕೋಟಾದಡಿ ಮೀಸಲಾತಿ ಪಡೆಯಲು ಅರ್ಹರಲ್ಲ. ನಿಯಮ ಮೀರಿ ಲಾಭ ಪಡೆಯುವ ಉದ್ದೇಶದಿಂದ, ಅಧ್ಯಕ್ಷರು ಮತ್ತು ಅವರ ಪುತ್ರಿ ಪ್ರಮುಖ ಮಾಹಿತಿಯನ್ನು ಮರೆಮಾಚಿದ್ದಾರೆ. ಆಯೋಗದ ಮುಖ್ಯಸ್ಥರ ಮೇಲ್ವಿಚಾರಣೆಯ ಕೊರತೆ ಅಥವಾ ಉದ್ದೇಶಪೂರ್ವಕ ನಿರ್ಲಕ್ಷ್ಯವಿಲ್ಲದೆ ಇಂತಹ ಕೃತ್ಯ ನಡೆಯಲು ಸಾಧ್ಯವಿಲ್ಲ.
- 'ಅಧ್ಯಕ್ಷರು ಸಲ್ಲಿಸಿದ ವಿವರಗಳು ಆಯೋಗದ ಅಧ್ಯಕ್ಷರ ಕಡೆಗೆ ಸ್ಪಷ್ಟವಾಗಿ ಬೊಟ್ಟು ಮಾಡುತ್ತವೆ. ಪ್ರಕರಣದ ಸತ್ಯಾಂಶಗಳು ಮತ್ತು ಸನ್ನಿವೇಶಗಳನ್ನು ಪರಿಗಣಿಸಿದಾಗ. ಇದು ಅವರ ದುರ್ನಡತೆಗೆ ಸಮಾನವಾಗಿದೆ' ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಹೊರಡಿಸಿರುವ ಪ್ರಕಟಣೆಯಲ್ಲಿ ವಿವರಿಸಲಾಗಿದೆ.

## ❖ 10 ಸಾವಿರ ಯುವ ಸಂಘಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಆದೇಶ: 'ಭಾರತ್ ಜೋಡೊ'ಗೆ ₹1,010 ಕೋಟಿ

- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಆರು ಸಾವಿರ, ನಗರ ವಾರ್ಡ್‌ಗಳ ವ್ಯಾಪ್ತಿಯಲ್ಲಿ ನಾಲ್ಕು ಸಾವಿರ ಸೇರಿ ಒಟ್ಟು ಹತ್ತು ಸಾವಿರ 'ಭಾರತ್ ಜೋಡೊ' ಯುವ ಸಂಘಗಳನ್ನು ಸ್ಥಾಪಿಸಲು ಮುಂದಾಗಿರುವ ರಾಜ್ಯ ಸರ್ಕಾರ, ಪ್ರತಿ ಸಂಘಕ್ಕೆ ತಲಾ ₹10 ಲಕ್ಷದಂತೆ ₹1 ಸಾವಿರ ಕೋಟಿ ಹಾಗೂ ಆಡಳಿತ ವೆಚ್ಚಕ್ಕೆ ₹10 ಕೋಟಿ ಸೇರಿ ಒಟ್ಟು ₹1,010 ಕೋಟಿ ವೆಚ್ಚ ಮಾಡಲು ಅನುಮೋದನೆ ನೀಡಿ ಆದೇಶ ಹೊರಡಿಸಿದೆ.
- ಈ ಯೋಜನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕಂದಾಯ ಇಲಾಖೆ ಹಾಗೂ ಶಿಕ್ಷಣ ಇಲಾಖೆಗಳ ಸಹಯೋಗದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅನುಷ್ಠಾನಗೊಳಿಸಲಿದೆ.
- ಪ್ರತಿಯೊಂದು ಸಂಘಕ್ಕೆ ಒಬ್ಬ ತರಬೇತುದಾರನಿಗೆ ಗೌರವಧನ ನೀಡಲು ವಾರ್ಷಿಕ ತಲಾ ₹24 ಸಾವಿರದಂತೆ ಒಟ್ಟು ₹24 ಕೋಟಿ ವೆಚ್ಚವನ್ನು ಸಂಘಗಳಿಗೆ ಒದಗಿಸಲಾಗುವ 21 ಸಾವಿರ ಕೋಟಿಯಿಂದ ಭರಿಸಬೇಕು. ಮಾರ್ಗಸೂಚಿಗಳ ಅನ್ವಯವೇ ಇಡೀ ಯೋಜನೆಯನ್ನು ಅನುಷ್ಠಾನಗೊಳಿಸಬೇಕು. ಮಾರ್ಗಸೂಚಿಗಳಲ್ಲಿ ಮುಂದೆ ಯಾವುದಾದರೂ ಬದಲಾವಣೆ ಅಗತ್ಯ ಇದ್ದರೆ ಅದಕ್ಕೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಚಿವರಿಂದ ಅನುಮೋದನೆ ಪಡೆದು ಸೂಕ್ತ ಬದಲಾವಣೆಗಳನ್ನು ಮಾಡಬಹುದು ಎಂದೂ ಆದೇಶದಲ್ಲಿದೆ.
- ಸಂಘ ಘಟಕ ಸ್ಥಾಪನೆ ಹೇಗೆ?: ಪ್ರತಿ ಘಟಕವನ್ನು ಸ್ಥಾಪಿಸಲು ಬಿಜೆವೈಎಸ್ ಪೋರ್ಟಲ್ ಅಥವಾ ಮೊಬೈಲ್ ಆ್ಯಪ್ ಮೂಲಕ ಅಥವಾ ಗ್ರಾಮ ಪಂಚಾಯಿತಿ ಹಾಗೂ ನಗರ ಪ್ರದೇಶಗಳಲ್ಲಿ ಗ್ರಾಮ ಒನ್, ಕರ್ನಾಟಕ ಒನ್, ಬೆಂಗಳೂರು ಒನ್, ನಾಗರೀಕ ಸೇವಾ ಕೇಂದ್ರಗಳ ಸಹಾಯದಿಂದ ಅರ್ಜಿ ಸಲ್ಲಿಸಬೇಕು.
- ಸದಸ್ಯರ ನೋಂದಣಿಗೆ ಆಧಾರ್ ಕಡ್ಡಾಯ. ಸದಸ್ಯರ ವಯೋಮಿತಿ 16 ವರ್ಷದಿಂದ 35 ವರ್ಷ. ಒಂದು ಘಟಕ ರಚನೆಗೆ ಕನಿಷ್ಠ 100 ಯುವ ಸದಸ್ಯರಿರಬೇಕು. ಪ್ರತಿ ಸದಸ್ಯ ಗುರುತಿನ ಚೀಟಿಗೆ ಸೇರಿ ₹10 ನೋಂದಣಿ ಶುಲ್ಕ ನೀಡಬೇಕು. ಸಂಘವನ್ನು ಕರ್ನಾಟಕ ಸೊಸೈಟಿ ನೋಂದಣಿ ಕಾಯ್ದೆ-1960ರಡಿ ನೋಂದಾಯಿಸಬೇಕು. ಅರ್ಜಿದಾರರು ಅದೇ ಗ್ರಾಮ ಪಂಚಾಯಿತಿ ಅಥವಾ ವಾರ್ಡಿನ ನಿವಾಸಿ ಆಗಿರಬೇಕು. ಪ್ರತಿಯೊಬ್ಬ ಸದಸ್ಯರು ಒಂದು ಸಂಘಕ್ಕೆ ಮಾತ್ರ ಸದಸ್ಯರಾಗಲು ಅರ್ಹರಾಗಿರುತ್ತಾರೆ ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

### <u>ಪಂಚಾಯಿತಿಗೊಂದು ಸಂಘ</u>

- ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದು ಸಂಘ, ಪ್ರತಿ ಪಟ್ಟಣ ಪಂಚಾಯಿತಿ (ತಾಲ್ಲೂಕು ಪಂಚಾಯಿತಿ) ವ್ಯಾಪ್ತಿಯಲ್ಲಿ ಸರಾಸರಿ 4 ಸಾವಿರ ಜನಸಂಖ್ಯೆಗೆ ಒಂದು ಸಂಘ, ಪ್ರತಿ ಪುರಸಭೆ ವ್ಯಾಪ್ತಿಯಲ್ಲಿ ಸರಾಸರಿ 6 ಸಾವಿರ ಜನಸಂಖ್ಯೆಗೆ ಒಂದು ಸಂಘ, ಪ್ರತಿ ನಗರಸಭೆಯಲ್ಲಿ ಸರಾಸರಿ 8 ಸಾವಿರ ಜನಸಂಖ್ಯೆಗೆ ಒಂದು ಸಂಘ ಹಾಗೂ ಮಹಾನಗರ ಪಾಲಿಕೆ ಮತ್ತು ಜಿಬಿಎ ವ್ಯಾಪ್ತಿಯಲ್ಲಿ ಸರಾಸರಿ 10 ಸಾವಿರ ಜನಸಂಖ್ಯೆಗೆ ಒಂದು ಸಂಘ ಸ್ಥಾಪಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.
- ಮಹಾನಗರ ಪಾಲಿಕೆಗಳು ಮತ್ತು ಜಿಬಿಎ ವ್ಯಾಪ್ತಿಯಲ್ಲಿ ಈ ಯೋಜನೆಗೆ ತಗಲುವ ವೆಚ್ಚವನ್ನು ಅಯಾ ಪಾಲಿಕೆಗಳು ತಮ್ಮ ಸ್ವಂತ ಆಯವ್ಯಯದಿಂದ ಭರಿಸಬೇಕು. ಈ ಯೋಜನೆಯ ಅನುಷ್ಠಾನಕ್ಕಾಗಿ ಆಡಳಿತ ಮತ್ತು ಇತರ ವೆಚ್ಚಕ್ಕಾಗಿ ಪ್ರತಿ ವರ್ಷ ಅಂದಾಜು 2 10 ಕೋಟಿಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಒದಗಿಸಲಿದೆ.

Dr. Rajkumar IAS/KAS Academy

## ಇಂಧನ ಸುರಕ್ಷತೆ ಹೆಚ್ಚಿಸಲು ಯೋಜನೆ ಅನಿವಾರ್ಯ: ನಿಯಾಸ್ ಶಿಫಾರಸು

# ಶರಾವತಿ ಪಂಪ್ಡ್ ಸ್ಟೋರೇಜ್ ಅನುಮತಿಗೆ ರಹದಾರಿ

• ಮಂಜುನಾಥ ಹೆಬ್ಬಾರ್

**ನವದೆಹಲಿ:** ಸಂರಕ್ಷಿತ ಪ್ರದೇಶದಲ್ಲಿ ಹೊಸ ಅಣೆಕಟ್ಟೆಗಳ ನಿರ್ಮಾಣವನ್ನು ಒಳಗೊಳ್ಳದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಅನುಮೋದನೆ ನೀಡಬಹುದು ಎಂದು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್ (ನಿಯಾಸ್) ಶಿಫಾರಸು ಮಾಡಿದೆ.

ಈ ಯೋಜನೆಯು ತಾಪಮಾನ ಬದಲಾವಣೆಯ ಪರಿಣಾಮಗಳನ್ನು ತಗ್ಗಿಸಲು ಹಾಗೂ ಇಂಧನ ಸುರಕ್ಷತೆ ಹೆಚ್ಚಿಸಲು ಸಹಾಯ ಮಾಡುತ್ತದೆ. ಯೋಜನೆಯ ಜಾರಿಯಲ್ಲಿ ರಾಷ್ಟ್ರೀಯ ಹಾಗೂ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ಸಂಸ್ಥೆ ತಿಳಿಸಿದೆ. ಈ ಅಂಶಗಳನ್ನು ಒಳಗೊಂಡ ವರದಿಯನ್ನು ಅದು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರಿಗೆ ಜೂನ್ 24ರಂದು ಸಲ್ಲಿಸಿದೆ. ಪಂಪ್ಡ್ ಸ್ಟೋರೇಜ್ ಯೋಜನೆಯ ಅನುಷ್ಠಾನ ಕಾರ್ಯಸಾಧುವಲ್ಲ ಎಂದು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ತಜ್ಞರ ಸಮಿತಿ ಈ ಹಿಂದೆ ಅಭಿಪ್ರಾಯಪಟ್ಟಿರುವುದನ್ನು ಇಲ್ಲಿ ಸ್ಮರಿಸಬಹುದು.

ಮಂಡಳಿಯ ಸ್ಥಾಯಿ ಸಮಿತಿಯ 84ನೇ ಸಭೆಯಲ್ಲಿ (2025ರ ಜೂನ್ 26) ಯೋಜನೆಗೆ ಷರತ್ತುಬದ್ಧ ಅನುಮೋದನೆ ನೀಡಲಾಗಿತ್ತು. ಆಗಸ್ಟ್ 19ರಂದು ನಡೆದಿದ್ದ 85ನೇ ಸಭೆಯಲ್ಲಿ ಯೋಜನೆಯ ಬಗ್ಗೆ ಮತ್ತೆ ಚರ್ಚಿಸಲಾಗಿತ್ತು. ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಜಾರಿಗೊಳ್ಳುತ್ತಿರುವ ಯೋಜನೆ ಕುರಿತು ಹಲವು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರು. ಸ್ಥಳ ಪರಿಶೀಲನೆ ನಡೆಸಿ ವರದಿ ನೀಡುವಂತೆ ತಜ್ಞರ ಸಮಿತಿಗೆ ಸ್ಥಾಯಿ ಸಮಿತಿ ನಿರ್ದೇಶನ ನೀಡಿತ್ತು. ಸಮಿತಿಯು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿತ್ತು. 2026ರ ಫೆಬ್ರುವರಿಯಲ್ಲಿ ನಡೆದ ಸ್ಥಾಯಿ ಸಮಿತಿಯ ಸಭೆಯಲ್ಲಿ ಸಮಿತಿಯ ವರದಿ ಬಗ್ಗೆ ಚರ್ಚಿಸಲಾಗಿತ್ತು. ಯೋಜನೆ ಬಗ್ಗೆ ನಿಯಾಸ್ ಅಭಿಪ್ರಾಯ ಪಡೆಯುವಂತೆ ರಾಜ್ಯ ಸರ್ಕಾರಕ್ಕೆ ಸ್ಥಾಯಿ ಸಮಿತಿ ಸೂಚಿಸಿತ್ತು.

### ಸಂಸ್ಥೆಯ ಶಿಫಾರಸುಗಳೇನು?

‘ದೇಶದಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಆದರೆ, ವಿದ್ಯುತ್ ಸ್ಟೋರೇಜ್‌ಗೆ ಯಾವುದೇ ಗ್ರಿಡ್ ಇಲ್ಲ. ಪ್ರಸ್ತಾವಿತ ಪಂಪ್ಡ್ ಸ್ಟೋರೇಜ್ ಯೋಜನೆಯು ಇಂಧನ ಸಂಗ್ರಹ ಅವಶ್ಯಕತೆಗಳನ್ನು ಪೂರೈಸಲು ಅತಿ ಅಗತ್ಯ. ಯೋಜನೆಯು ಸಕಾಲದಲ್ಲಿ ಕಾರ್ಯಾರಂಭ ಮಾಡದಿದ್ದರೆ ರಾಜ್ಯದಲ್ಲಿ ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಬೇಕಾಗುತ್ತದೆ ಹಾಗೂ ಅನ್ಯ ರಾಜ್ಯಗಳಿಂದ ವಿದ್ಯುತ್ ಖರೀದಿ ಮಾಡಬೇಕಾಗುತ್ತದೆ’ ಎಂದು ಸಂಸ್ಥೆ ಅಭಿಪ್ರಾಯಪಟ್ಟಿದೆ.

‘ಯೋಜನೆಯ ಭಾಗವಾಗಿ ನಾಗರಬಸ್ತಿ ಕೆರೆಯಿಂದ ಬೇಗೋಡೆವರೆಗೆ ರಸ್ತೆ ಅಗಲೀಕರಣ ಮಾಡಲು ಕೆಪಿಟಿಎಲ್ ಉದ್ದೇಶಿಸಿತ್ತು. ಈ ಪ್ರಸ್ತಾವಕ್ಕೆ ಸ್ಥಾಯಿ ಸಮಿತಿ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಈ ಕಾರಣದಿಂದ, ಸುರಂಗ ಮಾರ್ಗ ನಿರ್ಮಿಸುವುದಾಗಿ ಕೆಪಿಸಿಎಲ್ ಭರವಸೆ ನೀಡಿದೆ. ಈ ಹಿಂದೆ ರಸ್ತೆ ಅಗಲೀಕರಣಕ್ಕೆ 15.4 ಹೆಕ್ಟೇರ್ ಜಾಗ ಬೇಕಿತ್ತು. ಈಗ ಮಾರ್ಪಾಡು ಮಾಡಿರುವುದರಿಂದ 4.8 ಹೆಕ್ಟೇರ್ ಜಾಗ ಸಾಕು. ಒಟ್ಟಾರೆಯಾಗಿ, ಯೋಜನೆಗೆ ಅರಣ್ಯ ಬಳಕೆ ಪ್ರಮಾಣ 54 ಹೆಕ್ಟೇರ್‌ನಿಂದ 38 ಹೆಕ್ಟೇರ್‌ಗೆ ಇಳಿಯಲಿದೆ’ ಎಂದು ಸಂಸ್ಥೆಯು ವರದಿಯಲ್ಲಿ ಉಲ್ಲೇಖಿಸಿದೆ.

ಶರಾವತಿ ಪಂಪ್ಡ್ ಸ್ಟೋರೇಜ್ ವಿಶಿಷ್ಟ ಯೋಜನೆಯಾಗಿದ್ದು, ಈಗಿರುವ ಅಣೆಕಟ್ಟೆಗಳನ್ನು ಬಳಸಿಕೊಂಡೇ ವಿದ್ಯುತ್ ಉತ್ಪಾದನೆ ಮಾಡಲಿದೆ; ಹೀಗಾಗಿ, ಈ ಯೋಜನೆಗೆ ಅನುಮೋದನೆ ನೀಡುವುದು ಸೂಕ್ತ ಎಂದು ಸಂಸ್ಥೆ ತಿಳಿಸಿದೆ.

Publication Date
14/07/2026

Presented by

## ಭಾರತದ ಗಡಿಯ ಸಮೀಪದಲ್ಲೇ ಬೃಹತ್ ಜಲವಿದ್ಯುತ್ ಯೋಜನೆ: ಭೂಗರ್ಭಶಾಸ್ತ್ರಜ್ಞರ ಅಧ್ಯಯನ ವರದಿ

ಟಿಬೆಟ್‌ನಲ್ಲಿ ಹುಟ್ಟಿ ಭಾರತ ಮತ್ತು ಬಾಂಗ್ಲಾದೇಶದಲ್ಲಿ ಹರಿದು ಬಂಗಾಳ ಕೊಲ್ಲಿಗೆ ಸೇರುವ ಬ್ರಹ್ಮಪುತ್ರ ನದಿಗೆ ಚೀನಾ ಬೃಹತ್ ಅಣೆಕಟ್ಟು ನಿರ್ಮಿಸುತ್ತಿದೆ. ಟಿಬೆಟ್‌ನಲ್ಲಿ ಯಾರ್ಲಂಗ್ ಸಂಗ್ಪೊ ಎಂದು ಕರೆಯಲಾಗುವ ಈ ನದಿಯ ಕೆಳಭಾಗದಲ್ಲಿ, ಭಾರತಕ್ಕೆ ಹೊಂದಿಕೊಂಡಂತಿರುವ ಪ್ರದೇಶದಲ್ಲಿ ಚೀನಾ ನಿರ್ಮಿಸುತ್ತಿರುವ ಅಣೆಕಟ್ಟೆಯ ತಳಭಾಗವೇ ಅಭದ್ರವಾಗಿದೆ ಎಂದು ಸ್ವತಃ ಚೀನಾದಲ್ಲಿಯೇ ನಡೆದ ಅಧ್ಯಯನ ಎಚ್ಚರಿಸಿದೆ. ಅಣೆಕಟ್ಟೆ ನಿರ್ಮಿಸಲಾಗುತ್ತಿರುವ ಭೂಪ್ರದೇಶದ ಆಳದಲ್ಲಿ ಬಿರುಕು ಇದೆ. ಜತೆಗೆ, ಈ ಪ್ರದೇಶವು ಭಾರಿ ಭೂಕಂಪಗಳಿಗೆ ಹೆಸರಾಗಿದ್ದು, ಇದು ಜಲಾಶಯವನ್ನು ಕುಸಿಯುವಂತೆ ಮಾಡಬಹುದು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ




**16,710** ಕೋಟಿ ಡಾಲರ್ (ಅಂದಾಜು ₹15.98 ಲಕ್ಷ ಕೋಟಿ) ಅಣೆಕಟ್ಟೆ ನಿರ್ಮಾಣದ ಯೋಜನಾ ವೆಚ್ಚ

**5** ನಿರ್ಮಾಣವಾಗಲಿರುವ ಅಣೆಕಟ್ಟುಗಳು

**60** ಸಾವಿರ ಮೆಗಾ ವಾಟ್ ಜಲ ವಿದ್ಯುತ್ ಸ್ಥಾವರದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ

**30** ಸಾವಿರ ಕೋಟಿ ಕಿಲೋವಾಟ್ ಅವರ್ ವಾರ್ಷಿಕವಾಗಿ ವಿದ್ಯುತ್ ಉತ್ಪಾದನೆ ಮಾಡುವ ಗುರಿ

**30** ಕೋಟಿಗೂ ಹೆಚ್ಚು ಯೋಜನೆಯಡಿ ಉತ್ಪಾದಿಸಲಾಗುವ ವಿದ್ಯುತ್ ಸೌಲಭ್ಯ ಪಡೆಯಲಿರುವ ಜನರ ಸಂಖ್ಯೆ

**2,880** ಕಿ.ಮೀ ಬ್ರಹ್ಮಪುತ್ರ ನದಿಯ ಒಟ್ಟು ಉದ್ದ

**1,624** ಕಿ.ಮೀ ಟಿಬೆಟ್‌ನಲ್ಲಿ ನದಿ (ಯಾರ್ಲಂಗ್ ಸಂಗ್ಪೊ) ಹರಿವಿನ ಉದ್ದ

**50** ಕಿ.ಮೀ ಅರುಣಾಚಲ ಪ್ರದೇಶದಲ್ಲಿರುವ ಭಾರತದ ಗಡಿಯಿಂದ ಯೋಜನೆ ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಇರುವ ದೂರ

# ಬ್ರಹ್ಮಪುತ್ರ: ಚೀನಾದ ಬೃಹತ್ ಅಣೆಕಟ್ಟೆಯ ತಳವೇ ಅಭದ್ರ

ಪ್ರಜಾವಾಣಿ ವಾರ್ತೆ

**ಬ್ರಹ್ಮಪುತ್ರ** ನದಿಗೆ ಅಡ್ಡಲಾಗಿ ಚೀನಾ ನಿರ್ಮಿಸುತ್ತಿರುವ ಜಗತ್ತಿನ ಅತಿದೊಡ್ಡ ಅಣೆಕಟ್ಟೆಯಿಂದ ಹಿಮಾಲಯದ ತಪ್ಪಲಿನ ಜೀವಪ್ರಭೇದ, ಪರಿಸರ ಮತ್ತು ಜನಜೀವನಕ್ಕೆ ಅಪಾಯ ಉಂಟಾಗುವ ಸಾಧ್ಯತೆ ಇದೆ ಎಂದು ಭಾರತವು ಹಿಂದೆಯೇ ವಿರೋಧ ವ್ಯಕ್ತಪಡಿಸಿತ್ತು. ಭಾರತದ ಆತಂಕಕ್ಕೆ ಚೀನಾದ ಭೂಗರ್ಭಶಾಸ್ತ್ರಜ್ಞರ ಇತ್ತೀಚಿನ ಅಧ್ಯಯನವೊಂದು ಧ್ವನಿಯಾಗಿದೆ. ಅಣೆಕಟ್ಟೆ ನಿರ್ಮಾಣವಾಗುತ್ತಿರುವ ಭೂಪ್ರದೇಶದ ಕೆಳಗೇ ಕಂಟಕ ಇದೆ ಎಂದು ಚೀನಾದ ಭೂಗರ್ಭಶಾಸ್ತ್ರಜ್ಞರು ಎಚ್ಚರಿಸಿದ್ದಾರೆ.

ಚೀನಾ ಸರ್ಕಾರದ ಭೂಗರ್ಭ ಇಲಾಖೆಯ ಸಹಕಾರದೊಂದಿಗೆ ಅಣೆಕಟ್ಟೆಯ ಬಗ್ಗೆ ಭೂಗರ್ಭಶಾಸ್ತ್ರಜ್ಞರು ಕಾರ್ಯಸಾಧ್ಯತೆ ಅಧ್ಯಯನ ನಡೆಸಿ, ಅದರ ವಿವರಗಳನ್ನು ‘ಸೆಡಿಮೆಂಟರಿ ಜಿಯಾಲಜಿ ಮತ್ತು ತೆಥ್ಯಾನ್ ಜಿಯಾಲಜಿ’ ಎನ್ನುವ ಸಂಶೋಧನಾ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅಣೆಕಟ್ಟು ನಿರ್ಮಾಣವಾಗುತ್ತಿರುವ ಪ್ರದೇಶದ ಕೆಳಗೇ ಭೂಮಿಯ ಹೊರಪದರದಲ್ಲಿ (ಕ್ರಸ್ಟ್) ಬಿರುಕು ಇದ್ದು, ಅದರಿಂದ ಅಣೆಕಟ್ಟಿಗೆ ಅಪಾಯವೊದಗಬಹುದು ಎಂದು ವಿಜ್ಞಾನಿಗಳ ಸಂಶೋಧನೆ ಉಲ್ಲೇಖಿಸಿ ‘ಸೌತ್ ಚೀನಾ ಮಾರ್ನಿಂಗ್ ಪೋಸ್ಟ್’ ವರದಿ ಮಾಡಿದೆ.

ಭೂಮಿಯ ಹೊರಪದರದಲ್ಲಿನ ಬಿರುಕು ಜಲವಿದ್ಯುತ್ ಯೋಜನೆಯ ಮೂಲಸೌಕರ್ಯಕ್ಕೆ ಹಾನಿಯುಂಟುಮಾಡುವ ಸಂಭವ ಇದೆ. ಇಳಿಜಾರು ಪ್ರದೇಶ ಕುಸಿಯುವುದನ್ನು ತಡೆಯುವುದು, ಮಣ್ಣುಕುಸಿತದಂಥ ಅವಘಡ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸುವುದು ಸವಾಲಾಗಿದೆ ಎಂದು ವರದಿ ಹೇಳಿದೆ.

ಹಿಮ ಯುಗದಿಂದಲೂ ಸಕ್ರಿಯವಾಗಿರುವ ಭೂಮಿಯ ಈ ಬಿರುಕನ್ನು ಪೈಝೊನ್ ಬಿರುಕು ಎನ್ನಲಾಗುತ್ತಿದ್ದು, ಇದು ಭೂಮಿಯ ಒಳಗಿನ ಶಿಲಾಪದರಗಳನ್ನು ಶಿಥಿಲಗೊಳಿಸುತ್ತಿದೆ. ಇದರಿಂದ ಭೂಮಿ ತನ್ನ ಧಾರಣ ಶಕ್ತಿ ಕಳೆದುಕೊಂಡಿದೆ. ಹೀಗೆ ಶಿಥಿಲಗೊಂಡಿರುವ ಹಾಗೂ ಬಿಗಿ ಕಳೆದುಕೊಂಡಿರುವ ಭೂಮಿಗೆ ರಸ್ತೆ, ಸುರಂಗ, ಸೇತುವೆ, ಅಣೆಕಟ್ಟು ಇತ್ಯಾದಿಗಳನ್ನು ಹೊರುವ ಶಕ್ತಿ ಇರುವುದಿಲ್ಲ.

ವರದಿಯ ಪ್ರಕಾರ, ಅಣೆಕಟ್ಟು ನಿರ್ಮಾಣವಾಗುತ್ತಿರುವ ಪ್ರದೇಶಕ್ಕೆ ಅಂಟಿಕೊಂಡಿರುವ ಸ್ಥಳವು ಹಿಮಾಲಯದ ಭೂಕಂಪ ಸಂಭವನೀಯ ಪ್ರದೇಶವಾಗಿದೆ. ಇಲ್ಲಿನ ನೆಲದಾಳದಲ್ಲಿ ಭೂಕಂಪನ ಚಟುವಟಿಕೆಗಳು ನಡೆಯುತ್ತಲೇ ಇರುತ್ತವೆ. ಅತ್ಯಂತ ಪ್ರಬಲ ಭೂಕಂಪಗಳೂ ಇಲ್ಲಿ ಸಂಭವಿಸಿದ್ದು, ಪದೇ ಪದೇ ಮರುಕಳಿಸುತ್ತಲೂ ಇವೆ. 2017ರಲ್ಲಿ ಈ ಪ್ರದೇಶದಲ್ಲಿ ರಿಕ್ಟರ್ ಮಾಪಕದಲ್ಲಿ 6.9 ತೀವ್ರತೆಯ ಭೂಕಂಪ ಸಂಭವಿಸಿತ್ತು. ಅಣೆಕಟ್ಟು ನಿರ್ಮಾಣವಾದ ನಂತರ ಈ ಪ್ರದೇಶವು ನೀರಿನಲ್ಲಿ ಮುಳುಗುತ್ತದೆ. ಅದರ ಜತೆಗೆ ಭೂಮಿಯ ಹೊರಪದರದಲ್ಲಿನ ಬಿರುಕು, ಭೂಕಂಪದ ಸಾಧ್ಯತೆಯೂ ಸೇರಿಕೊಂಡು, ಜಲಾಶಯದ ಎರಡೂ ಬದಿಯ ಇಳಿಜಾರು ಕುಸಿತದ ಅಪಾಯ ಹೆಚ್ಚುತ್ತದೆ ಎನ್ನುತ್ತದೆ ವರದಿ.


ಒಂದೇ ನದಿ ಮೂರು ಹೆಸರು: ಟಿಬೆಟ್‌ನಲ್ಲಿ ಹುಟ್ಟುವ ಯಾರ್ಲಂಗ್ ಸಂಗ್ಪೊ, ಭಾರತದಲ್ಲಿ ಬ್ರಹ್ಮಪುತ್ರ, ಬಾಂಗ್ಲಾದಲ್ಲಿ ಜಮುನಾ ಆಗಿ ಹರಿಯುತ್ತದೆ. ಯಾರ್ಲಂಗ್ ಸಂಗ್ಪೊ ಟಿಬೆಟ್‌ನ ಅತಿ ಉದ್ದದ ನದಿ. ಭಾರತದ ಅರುಣಾಚಲ ಪ್ರದೇಶ ಮತ್ತು ಅಸ್ಸಾಂ ಮೂಲಕ ಹರಿಯುವ ಇದು ನಂತರ ಬಾಂಗ್ಲಾ ಮೂಲಕ ಸಾಗುತ್ತದೆ.

ಟಿಬೆಟ್ ಮೇಲೆ ಸಂಪೂರ್ಣ ಹಿಡಿತ ಸಾಧಿಸಿರುವ ಚೀನಾ, ಅಲ್ಲಿ ಈಗಾಗಲೇ ಹಲವು ಅಣೆಕಟ್ಟುಗಳನ್ನು ನಿರ್ಮಿಸಿದೆ. ಆದರೆ, ಈಗ ಚೀನಾ ಅಲ್ಲಿ ನಿರ್ಮಿಸುತ್ತಿರುವುದು ಜಗತ್ತಿನ ಅತ್ಯಂತ ದೊಡ್ಡ ಅಣೆಕಟ್ಟು. ಮೆಡಾಗ್ ಜಲವಿದ್ಯುತ್ ಯೋಜನೆ ಎಂದು ಇದನ್ನು ಕರೆಯಲಾಗಿದ್ದು, ಕಳೆದ ವರ್ಷದ ಜುಲೈನಲ್ಲಿ ಕಾಮಗಾರಿಗೆ ಚಾಲನೆ ನೀಡಿದೆ. ನದಿಯ ಕೆಳಭಾಗದಲ್ಲಿ ಅಣೆಕಟ್ಟು ನಿರ್ಮಿಸಿ, ಜಲವಿದ್ಯುತ್ ಉತ್ಪಾದನೆ ಮಾಡುವುದು ಚೀನಾದ ಯೋಜನೆ. ಚೀನಾದ ತ್ರೀ ಗಾರ್ಜಸ್ ಡ್ಯಾಮ್ (ಮೂರು ಕಂದಕಗಳ ನಡುವೆ ಕಟ್ಟಲಾಗಿರುವ ಅಣೆಕಟ್ಟು) ಪ್ರಸ್ತುತ ಅತಿ ದೊಡ್ಡ ಅಣೆಕಟ್ಟಾಗಿದ್ದು, ಅಲ್ಲಿ ಜಲವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಯಾರ್ಲಂಗ್ ಸಂಗ್ಪೊ ನದಿಯ ಕೆಳಭಾಗದಲ್ಲಿ ಈಗ ನಿರ್ಮಿಸಲಾಗುತ್ತಿರುವ ಅಣೆಕಟ್ಟಿನಿಂದ ತ್ರೀ ಗಾರ್ಜಸ್‌ಗಿಂತ ಮೂರು ಪಟ್ಟು (30,000 ಕೋಟಿ ಕಿಲೊವಾಟ್ ಅವರ್) ವಿದ್ಯುತ್ ಉತ್ಪಾದನೆ ಮಾಡಬಹುದು ಎನ್ನುವುದು ಚೀನಾದ ಲೆಕ್ಕಾಚಾರ. ಆದರೆ, ಈ ಅಣೆಕಟ್ಟೆಯ ಸುರಕ್ಷತೆಯ ಬಗ್ಗೆ ಮೊದಲಿನಿಂದಲೂ ಅನುಮಾನಗಳು, ಪ್ರಶ್ನೆಗಳು ಕೇಳಿಬರುತ್ತಲೇ ಇವೆ.

ಹಿಮಾಲಯದ ಗಿರಿ ಕಂದರಗಳಲ್ಲಿ, ಭೂಕಂಪದ ಸಾಧ್ಯತೆ ಇರುವ ಪ್ರದೇಶದಲ್ಲಿ ಅಣೆಕಟ್ಟು ನಿರ್ಮಾಣಕ್ಕಾಗಿ ಅಗೆಯುವುದು ಭೂಕುಸಿತದಂಥ ದುರ್ಘಟನೆಗಳಿಗೆ ಕಾರಣವಾಗಲಿದೆ. ಭೂಕಂಪ ನಿರೋಧಕ ತಂತ್ರಜ್ಞಾನ ಬಳಸಿ ಅಣೆಕಟ್ಟು ನಿರ್ಮಿಸಿದರೂ ಅದರಿಂದ ಉಂಟಾಗುವ ಗುಡ್ಡಕುಸಿತ, ಮಣ್ಣು-ಕಲ್ಲಿನ ಅನಿಯಂತ್ರಿತ ಹರಿಯುವಿಕೆ ತಡೆಯುವುದು ಸಾಧ್ಯವಾಗುವುದಿಲ್ಲ. ಇದು ಯೋಜನೆಗೆ ಗಂಭೀರ ಸವಾಲೊಡ್ಡಲಿದೆ ಎಂದು ಸಿಚೌನ್ ಪ್ರಾಂತೀಯ ಭೂವಿಜ್ಞಾನ ಬ್ಯೂರೊದ ತಜ್ಞರು 2022ರಲ್ಲೇ ಎಚ್ಚರಿಕೆ ನೀಡಿದ್ದರು.

ಇದುವರೆಗೂ ಚೀನಾ ಸರ್ಕಾರವು ಯೋಜನೆಯನ್ನು ಸಮರ್ಥಿಸಿಕೊಳ್ಳುತ್ತಲೇ ಬಂದಿದೆ. ಈಗ ಚೀನಾ ಆಡಳಿತದ ಅಧೀನದಲ್ಲಿ ಬರುವ ವಿಜ್ಞಾನಿಗಳ ತಂಡವೇ ಯೋಜನೆಯ ಅಪಾಯದ ಬಗ್ಗೆ ವರದಿ ನೀಡಿದೆ. ಜಗತ್ತಿನ ಅತಿ ದೊಡ್ಡ ಅಣೆಕಟ್ಟು ಕಟ್ಟಿ ದಾಖಲೆ ನಿರ್ಮಿಸುವ ಹುಮ್ಮಸ್ಸಿನಲ್ಲಿರುವ ಚೀನಾ ತನ್ನದೇ ತಜ್ಞರ ವರದಿಗೆ ಕಿವಿಗೊಡುವುದೇ ಎನ್ನುವುದು ಸದ್ಯದ ಪ್ರಶ್ನೆ.

ಆಧಾರ: ಪಿಟಿಐ, ಸದನದಲ್ಲಿ ಸಚಿವರ ಉತ್ತರ, ಮಾಧ್ಯಮ ವರದಿಗಳು



ಟಿಬೆಟ್‌ನಲ್ಲಿ ಹರಿಯುವ ಬ್ರಹ್ಮಪುತ್ರ (ಯಾರ್ಲಂಗ್ ಸಂಗ್ಪೊ) ನದಿಯ ನೋಟ

### ಭಾರತದ ವಿರೋಧ

ಅಸ್ಸಾಂ ಸೇರಿದಂತೆ ಭಾರತದ ಈಶಾನ್ಯ ರಾಜ್ಯಗಳು, ಬಾಂಗ್ಲಾದೇಶಕ್ಕೆ ಬ್ರಹ್ಮಪುತ್ರ ಜೀವ ನದಿಯಾಗಿದೆ. ಬೃಹತ್ ಜಲ ವಿದ್ಯುತ್ ಯೋಜನೆಯಿಂದ ಭಾರತ, ಬಾಂಗ್ಲಾದೇಶಕ್ಕೆ ಯಾವುದೇ ತೊಂದರೆಯಾಗದು ಎಂದು ಚೀನಾ ಹೇಳುತ್ತಿದೆ. ಆದರೆ, ಭಾರತವು ಯೋಜನೆಗೆ ಆರಂಭದಿಂದಲೂ ವಿರೋಧ ವ್ಯಕ್ತಪಡಿಸುತ್ತಾ ಬಂದಿದೆ.


- ಬೃಹತ್ ಅಣೆಕಟ್ಟೆಯ ನಿರ್ಮಾಣದಿಂದ ಬ್ರಹ್ಮಪುತ್ರ ನದಿಯ ನೀರಿನ ಹರಿವಿನ ನಿಯಂತ್ರಣ ಚೀನಾಕ್ಕೆ ಸಾಧ್ಯವಾಗಲಿದ್ದು, ದ್ವಿಪಕ್ಷೀಯ ಸಂಬಂಧಗಳು ಹದಗೆಟ್ಟ ಸಂದರ್ಭದಲ್ಲಿ ಚೀನಾವು ಬ್ರಹ್ಮಪುತ್ರ ನೀರನ್ನೇ ಒಂದು ಅಸ್ತ್ರವನ್ನಾಗಿ ಭಾರತದ ವಿರುದ್ಧ ಬಳಸಬಹುದು
- ನೀರು ಹರಿಯುವಿಕೆಗೆ ಚೀನಾ ತಡೆ ಒಡ್ಡಿದರೆ ಈಶಾನ್ಯ ರಾಜ್ಯಗಳ ರೈತರಿಗೆ ಅಗತ್ಯಕ್ಕೆ ಬೇಕಾದಾಗ ನೀರು ಸಿಗದಿರಬಹುದು. ಮಳೆಗಾಲದ ಸಂದರ್ಭದಲ್ಲಿ ಅಥವಾ ವಿಪತ್ತಿನ ಸಂದರ್ಭದಲ್ಲಿ ಅಣೆಕಟ್ಟೆಯಿಂದ ಏಕಾಏಕಿ ನೀರು ಹೊರಗಡೆ ಬಿಟ್ಟಾಗ ಬ್ರಹ್ಮಪುತ್ರ ನದಿ ಪಾತ್ರದಲ್ಲಿ ನೆರೆ ಪರಿಸ್ಥಿತಿ ಸೃಷ್ಟಿಯಾಗಬಹುದು ಎಂಬ ಆತಂಕವನ್ನು ಭಾರತದ ತಜ್ಞರು ವ್ಯಕ್ತಪಡಿಸಿದ್ದಾರೆ
- ದೇಶದ ಗಡಿಯಿಂದ ಕೇವಲ 50 ಕಿ.ಮೀ ದೂರದಲ್ಲೇ ಬೃಹತ್ ಕಾಮಗಾರಿ ನಡೆಯುತ್ತಿರುವುದರಿಂದ ಈ ಭಾಗದ ಭೌಗೋಳಿಕ ಚಿತ್ರಣ ಬದಲಾಗಿದೆ. ಭೂಮಿಯ ಆಳದಲ್ಲಿ ಕಂಪನ ಉಂಟಾದರೆ ಅದರ ಪರಿಣಾಮ ಭಾರತದ ಮೇಲೂ ಆಗಲಿದೆ ಎಂಬ ಕಳವಳವೂ ವ್ಯಕ್ತವಾಗಿದೆ
- ಹಿಮಾಲಯ ವ್ಯಾಪ್ತಿಯಲ್ಲಿ ಇಂಧನ ಭದ್ರತೆಯ ಜೊತೆಗೆ ಆರ್ಥಿಕವಾಗಿ, ಭೌಗೋಳಿಕವಾಗಿ ತನ್ನ ಹಿಡಿತವನ್ನು ಬಿಗಿಗೊಳಿಸುವ ಉದ್ದೇಶವೂ ಚೀನಾದ ಈ ಯೋಜನೆಯ ಹಿಂದಿರಬಹುದು ಎಂಬ ವಿಶ್ಲೇಷಣೆಯೂ ಇದೆ

Publication Date
14/07/2026

Presented by

## ❖ ಕಾಶಿ, ಮಥುರಾ, ಸಂಭಲ್ ವಿವಾದ: ಮಧ್ಯಸ್ಥಿಕೆ ವಿಫಲ

- ವಾರಾಣಸಿಯ ಕಾಶಿ ವಿಶ್ವನಾಥ ಹಾಗೂ ಗ್ಯಾನವಾಪಿ ಮಸೀದಿ, ಮಥುರಾದ ಶ್ರೀಕೃಷ್ಣ ಜನ್ಮಭೂಮಿ-ಶಾಹಿ ಇದ್ಗಾ ಮಸೀದಿ ಮತ್ತು ಸಂಭಲ್‌ನ ಜಾಮಾ ಮಸೀದಿ - ಹರಿಹರ ದೇವಾಲಯಕ್ಕೆ ಸಂಬಂಧಿಸಿದ ವಿವಾದಗಳನ್ನು ವಿಶೇಷ 'ಲೋಕ ಅದಾಲತ್'ನಲ್ಲಿ ಮಧ್ಯಸ್ಥಿಕೆ ಮೂಲಕ ಬಗೆಹರಿಸುವ ಪ್ರಯತ್ನಗಳು ವಿಫಲವಾಗಿವೆ.
- ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲೇ ವಿವಾದ ಇತ್ಯರ್ಥ ಪಡಿಸಿಕೊಳ್ಳಲು ಅರ್ಜಿದಾರರು ಬಯಸಿದ್ದರಿಂದ ಮಧ್ಯಸ್ಥಿಕೆ ವಿಫಲವಾಗಿದೆ ಎಂದು ಮೂಲಗಳು ತಿಳಿಸಿವೆ ಮಥುರಾ ವಿವಾದವನ್ನು ಮಧ್ಯಸ್ಥಿಕೆ ಮೂಲಕ ಬಗೆಹರಿಸಿಕೊಳ್ಳುವಂತೆ ನಿರ್ದೇಶಿಸಲು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಏಳು ಅರ್ಜಿಗಳು ಸಲ್ಲಿಕೆಯಾಗಿದ್ದ ಕಾರಣ ಪ್ರಕರಣವನ್ನು ಇತ್ಯರ್ಥಪಡಿಸುವಂತೆ 'ಲೋಕ ಅದಾಲತ್'ಗೆ ನ್ಯಾಯಾಲಯ ಸೂಚಿಸಿತ್ತು.
- ಅದರಂತೆ ನ್ಯಾಯಧೀಶರಾದ ಸುರೇಂದ್ರ ಪ್ರಸಾದ್ ಅವರ ನೇತೃತ್ವದಲ್ಲಿ ಅದಾಲತ್ ನಡೆದಿದೆ. ಆದರೆ, ಮುಸ್ಲಿಂ ಕಕ್ಷಿದಾರರು ಅದಾಲತ್‌ಗೆ ಹಾಜರಾಗದ ಕಾರಣ ಅದು ವಿಫಲವಾಗಿದೆ.
- ಗ್ಯಾನವಾಪಿ ವಿಚಾರದಲ್ಲಿಯೂ ಹಿಂದೂ-ಮುಸ್ಲಿಂ ಕಕ್ಷಿದಾರರು ನ್ಯಾಯಾಲಯದಲ್ಲೇ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳುವುದಾಗಿ ಹೇಳಿದ್ದಲ್ಲದೇ, ಅದಾಲತ್‌ನ ವಿಚಾರಣಾ ಪ್ರಕ್ರಿಯೆಗಳಲ್ಲಿ ಭಾಗಿಯಾಗಲು ನಿರಾಕರಿಸಿದ್ದಾರೆ ಎನ್ನಲಾಗಿದೆ.
- ಸಂಭಲ್ ವಿವಾದದಲ್ಲಿ ಈ ಪ್ರಕರಣವು ಎರಡು ಸಮುದಾಯಗಳ ಧಾರ್ಮಿಕ ನಂಬಿಕೆಗೆ ಸಂಬಂಧಿಸಿರುವುದರಿಂದ ನ್ಯಾಯಾಲಯದಲ್ಲಿ ತೀರ್ಪು ಬರುವುದೇ ಸೂಕ್ತ ಎಂದು ಮುಸ್ಲಿಂ ಪರ ಅರ್ಜಿದಾರರು ಹೇಳಿದ್ದಾರೆ. ಇತ್ತ ಹಿಂದೂಗಳು ಇದಕ್ಕೆ ಸಂಬಂಧಿಸಿದಂತೆ ಯಾವುದೇ ಅಧಿಕೃತ ಸೂಚನೆ ಬಂದಿಲ್ಲ ಎಂದು ಹೇಳಿದ್ದಾರೆ.
- ಬಹುಕಾಲದಿಂದ ಇತ್ಯರ್ಥವಾಗದೇ ಉಳಿದಿರುವ ಪ್ರಕರಣಗಳನ್ನು ಮಧ್ಯಸ್ಥಿಕೆ ಮೂಲಕ ಪರಿಹರಿಸುವುದನ್ನು ಉತ್ತೇಜಿಸಲು ಸುಪ್ರೀಂ ಕೋರ್ಟ್ 'ಸಮಾಧಾನ ಸಮಾರೋಹ್' ಎಂಬ ಕಾರ್ಯಕ್ರಮ ಆಯೋಜಿಸಿ, ಅದರ ಅಡಿಯಲ್ಲಿ ಈ ಪ್ರಕರಣಗಳನ್ನು ಮಧ್ಯಸ್ಥಿಕೆ ಮೂಲಕ ಬಗೆಹರಿಸಲು ವಿಚಾರಣೆ ನಡೆಸುತ್ತಿದೆ. ಅಗಸ್ಟ 21, 22 ಹಾಗೂ 23ರಂದು 'ವಿಶೇಷ ಲೋಕ ಅದಾಲತ್' ವಿಚಾರಣೆ ಮತ್ತೆ ನಡೆಯಲಿದೆ.



# ವ್ಯಾಪಾರ ಕೊರತೆ ₹2.91 ಲಕ್ಷ ಕೋಟಿ

### ಅಮೂಲ್ಯ ಲೋಹಗಳು, ಎಲೆಕ್ಟ್ರಾನಿಕ್ಸ್ ಸರಕುಗಳ ಸಾಗಣೆ ವೆಚ್ಚದಲ್ಲಿನ ಹೆಚ್ಚಳದಿಂದ ಆಮದು ವೆಚ್ಚ ಏರಿಕೆ: ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ಜೂನ್ ತಿಂಗಳಿನಲ್ಲಿ ದೇಶದಿಂದ ₹3.86 ಲಕ್ಷ ಕೋಟಿ ಮೌಲ್ಯದ ಸರಕು ಮತ್ತು ಸೇವೆಗಳು ರಫ್ತಾಗಿದ್ದು, ಕಳೆದ ವರ್ಷದ ಜೂನ್‌ಗೆ ಹೋಲಿಸಿದರೆ ರಫ್ತು ಶೇ 15.5ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಇದೇ ಅವಧಿಯಲ್ಲಿ ದೇಶದ ಆಮದು ಶೇ 31ರಷ್ಟು ಜಿಗಿದಿದ್ದು, ಇದು ಹಣಕಾಸಿನ ಮೌಲ್ಯದಲ್ಲಿ ₹6.77 ಲಕ್ಷ ಕೋಟಿಯಾಗಿದೆ. ರಫ್ತು ಮತ್ತು ಆಮದು ನಡುವಿನ ಅಂತರವಾದ ವ್ಯಾಪಾರ ಕೊರತೆಯು ಕಚ್ಚಾ ತೈಲ ಬೆಲೆ ಏರಿಕೆಯಿಂದ ಜೂನ್ ತಿಂಗಳಿನಲ್ಲಿ ₹2.91 ಲಕ್ಷ ಕೋಟಿಗೆ ಹೆಚ್ಚಳವಾಗಿದೆ. ಇದು ಐದು ತಿಂಗಳ ಗರಿಷ್ಠ ಮಟ್ಟ.

ಜೂನ್ ತಿಂಗಳಿನಲ್ಲಿ ₹1.84 ಲಕ್ಷ ಕೋಟಿ ಮೌಲ್ಯದ ಕಚ್ಚಾ ತೈಲ ದೇಶಕ್ಕೆ ಆಮದಾಗಿದ್ದು, ಶೇ 40ರಷ್ಟು ಹೆಚ್ಚಳವಾಗಿದೆ. ಪ್ರಸಕ್ತ ವರ್ಷದ ಜೂನ್ ಮೊದಲಾರ್ಧದಲ್ಲಿ ಕಚ್ಚಾ ತೈಲ ದರವು ಬ್ಯಾರಲ್‌ಗೆ ಸುಮಾರು 90 ಡಾಲರ್‌ನಷ್ಟಿತ್ತು. ಆದರೆ, ಇದರ ಬೆಲೆ ಈಗ 80 ಡಾಲರ್ ಆಸುಪಾಸಿನಲ್ಲಿದೆ.

ಅಮೂಲ್ಯ ಲೋಹಗಳು, ಎಲೆಕ್ಟ್ರಾನಿಕ್ ಸರಕುಗಳು ಮತ್ತು ಯಂತ್ರೋಪಕರಣಗಳ ಸಾಗಣೆ ವೆಚ್ಚದಲ್ಲಿನ ಹೆಚ್ಚಳವು ದೇಶದ ಆಮದು ವೆಚ್ಚ ಏರಿಕೆಗೆ ಕಾರಣವಾಗಿದೆ.

ಜೂನ್ ತಿಂಗಳಿನಲ್ಲಿ ಎಲೆಕ್ಟ್ರಾನಿಕ್ಸ್ ವಸ್ತುಗಳ ಆಮದು ಶೇ 58ರಷ್ಟು ಹೆಚ್ಚಳವಾಗಿದ್ದು, ₹1.28 ಲಕ್ಷ ಕೋಟಿ ಮೌಲ್ಯದ ಸರಕುಗಳು ಆಮದಾಗಿವೆ. ₹55,474 ಕೋಟಿ ಮೌಲ್ಯದ ಯಂತ್ರೋಪಕರಣಗಳು ಆಮದಾಗಿದ್ದು, ಶೇ 31ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ, ಪ್ರಸಕ್ತ ಜೂನ್ ತ್ರೈಮಾಸಿಕದಲ್ಲಿ ರಫ್ತು ಪ್ರಮಾಣ ಶೇ 15.92ರಷ್ಟು ಹೆಚ್ಚಳವಾಗಿದ್ದು, ₹12.37 ಲಕ್ಷ ಕೋಟಿಯಾಗಿದೆ. ಆಮದು ಶೇ 19.89ರಷ್ಟು ಏರಿಕೆಯಾಗಿದ್ದು, ₹20.67 ಲಕ್ಷ ಕೋಟಿಯಾಗಿದೆ ಎಂದು ಹೇಳಿದೆ.

**ವ್ಯಾಪಾರ ಕೊರತೆ** (₹ಲಕ್ಷ ಕೋಟಿಗಳಲ್ಲಿ)

| ಜ. | ಫೆ. | ಮಾ. | ಏ. | ಮೇ | ಜೂ. |
|---|---|---|---|---|---|
| 3.31 | 2.50 | 1.92 | 2.59 | 2.06 | 2.91 |

"ಎಲೆಕ್ಟ್ರಾನಿಕ್ಸ್, ಕಬ್ಬಿಣದ ಅದಿರು, ಕರಕುಶಲ ವಸ್ತುಗಳು, ಮಾಂಸ ಮತ್ತು ಹೈನು ಉತ್ಪನ್ನಗಳ ವಲಯದಲ್ಲಿ ರಫ್ತು ಹೆಚ್ಚಳವಾಗಿರುವುದು ಒಟ್ಟಾರೆ ರಫ್ತು ಹೆಚ್ಚಳಕ್ಕೆ ಕಾರಣವಾಗಿದೆ
**ರಾಜೇಶ್ ಅಗರವಾಲ್,** ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ

**ಚಿನ್ನದ ಆಮದು ಶೇ 7ರಷ್ಟು ಹೆಚ್ಚಳ**

ಕಳೆದ ವರ್ಷದ ಜೂನ್ ತಿಂಗಳಿಗೆ ಹೋಲಿಸಿದರೆ ಈ ಬಾರಿ ಚಿನ್ನದ ಆಮದು ಪ್ರಮಾಣವು ಶೇ 7ರಷ್ಟು ಹೆಚ್ಚಳವಾಗಿದ್ದು, ₹19,131 ಕೋಟಿ ಮೌಲ್ಯದ ಚಿನ್ನ ಆಮದಾಗಿದೆ.

ಕಳೆದ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹71,658 ಕೋಟಿ ಮೌಲ್ಯದಷ್ಟು ಚಿನ್ನದ ಆಮದಾಗಿತ್ತು. ಆದರೆ, ಈ ಬಾರಿ ₹1.05 ಲಕ್ಷ ಕೋಟಿಗೆ ಏರಿಕೆಯಾಗಿದೆ.

Publication Date
14/07/2026

Presented by

## ❖ 'ವ್ಯಾಪಾರ ಒಪ್ಪಂದ ಮಾತುಕತೆಯಲ್ಲಿ ಪ್ರಗತಿ'

- ಭಾರತ ಮತ್ತು ಅಮೆರಿಕದ ನಡುವೆ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆಗಳು ಉತ್ತಮ ಪ್ರಗತಿ ಕಾಣುತ್ತಿವೆ, ಒಪ್ಪಂದದ ಚೌಕಟ್ಟು ಸಿದ್ಧವಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಒಪ್ಪಂದದ ಚೌಕಟ್ಟಿಗೆ ಸೂಕ್ತ ಸಮಯದಲ್ಲಿ ಅಂಕಿತ ಬೀಳಲಿದೆ ಎಂದಿದ್ದಾರೆ.
- ಸುಂಕದ ವಿಚಾರದಲ್ಲಿ ಭಾರತವು ಪ್ರತಿಸ್ಪರ್ಧಿ ದೇಶಗಳಿಗಿಂತ ಹೆಚ್ಚಿನ ಅನುಕೂಲವನ್ನು ಕೋರುತ್ತಿದೆ ಎಂದು ಅಧಿಕಾರಿ ಹೇಳಿದ್ದಾರೆ. 'ಅಮೆರಿಕದ ತಂಡದ ಜೊತೆ ಬಹಳ ಒಳ್ಳೆಯ ಚರ್ಚೆ ನಡೆದಿದೆ...' ಎಂದಿದ್ದಾರೆ.



# ಚಿಲ್ಲರೆ ಹಣದುಬ್ಬರ ಶೇ 4.38ಕ್ಕೆ ಏರಿಕೆ

ನವದೆಹಲಿ (ಪಿಟಿಐ): ಆಹಾರ ವಸ್ತುಗಳ ಬೆಲೆ ಹೆಚ್ಚಳದ ಪರಿಣಾಮವಾಗಿ ಜೂನ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 4.38ಕ್ಕೆ ಹೆಚ್ಚಳ ಆಗಿದೆ. ಇದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗುರಿಗಿಂತ ಹೆಚ್ಚು.

ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 4ರಲ್ಲಿ ನಿಗದಿ ಮಾಡುವುದು ಆರ್‌ಬಿಐ ಗುರಿ. ಹಣದುಬ್ಬರ ಪ್ರಮಾಣವನ್ನು ಅಂದಾಜಿಸುವ ಹೊಸ ಸರಣಿಯು ಜನವರಿಯಲ್ಲಿ ಜಾರಿಗೆ ಬಂದಿದ್ದು, ಅದಾದ ನಂತರದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 4ರ ಮಟ್ಟಕ್ಕಿಂತ ಜಾಸ್ತಿ ಆಗಿರುವುದು ಇದೇ ಮೊದಲು.

**ಹಣದುಬ್ಬರ ಪ್ರಮಾಣವು ಜುಲೈನಲ್ಲಿ ಶೇ 4.9ಕ್ಕೆ ಹೆಚ್ಚಬಹುದು. ಜಾಗತಿಕ ಬಿಕ್ಕಟ್ಟುಗಳು ಹಾಗೂ ಎಲ್ ನಿನೊ ಪರಿಸ್ಥಿತಿಯು ಹಣದುಬ್ಬರ ಹೆಚ್ಚಳದ ಸಾಧ್ಯತೆಯನ್ನು ಜಾಸ್ತಿ ಮಾಡಬಹುದು**

**ಮೇಘಾ ಅರೋರಾ,**
ಇಂಡಿಯಾ ರೇಟಿಂಗ್ಸ್ ಸಂಸ್ಥೆಯ ನಿರ್ದೇಶಕಿ

ನಗರ ಪ್ರದೇಶಗಳಲ್ಲಿ ಹಣದುಬ್ಬರ ಪ್ರಮಾಣವು ಶೇ 4.74ರಷ್ಟು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಶೇ 3.92ರಷ್ಟು ದಾಖಲಾಗಿದೆ. ಜೂನ್‌ನಲ್ಲಿ ದಾಖಲಾಗಿರುವುದು ಪೆಟ್ರೋಲ್, ಡೀಸೆಲ್ ಬೆಲೆಯನ್ನು ಹೆಚ್ಚು ಮಾಡಿದ ನಂತರದ ಮೊದಲ ಪೂರ್ಣ ಒಂದು ತಿಂಗಳ ಹಣದುಬ್ಬರದ ಅಂಕಿ–ಅಂಶವಾಗಿದೆ. ಮೇ ಮಧ್ಯ ಭಾಗದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಹೆಚ್ಚಿಸಲಾಯಿತು.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಮೇ ತಿಂಗಳಲ್ಲಿ ಶೇ 3.93ರಷ್ಟು ಇತ್ತು. ಆಹಾರ ವಸ್ತುಗಳ ಬೆಲೆ ಏರಿಕೆ ಪ್ರಮಾಣವು ಮೇ ತಿಂಗಳಲ್ಲಿ ಶೇ 4.78ರಷ್ಟು ಇದ್ದಿದ್ದು ಜೂನ್‌ನಲ್ಲಿ ಶೇ 5.32ಕ್ಕೆ ಹೆಚ್ಚಳವಾಗಿದೆ ಎಂಬುದನ್ನು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

ಬೆಳ್ಳಿ, ಚಿನ್ನ, ವಜ್ರ ಮತ್ತು ಪ್ಲಾಟಿನಂ ಆಭರಣಗಳು; ಶುಂಠಿ, ಟೊಮಾಟೊ, ಒಣದ್ರಾಕ್ಷಿ ಬೆಲೆಯು ಜೂನ್‌ನಲ್ಲಿ ಬಹಳ ಹೆಚ್ಚಳ ಆಗಿದೆ. ಆಲೂಗಡ್ಡೆ, ಬಟಾಣಿ, ಜೀರಿಗೆ ಬೆಲೆ ಏರಿಕೆಯು ಕಡಿಮೆ ಪ್ರಮಾಣದಲ್ಲಿದೆ.

ರೆಪೊ ದರದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಆರ್‌ಬಿಐ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಜೂನ್‌ನಲ್ಲಿ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡಿದ್ದ ಆರ್‌ಬಿಐ, ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರ ಪ್ರಮಾಣವು ಶೇ 5.1ಕ್ಕೆ ಹೆಚ್ಚಳ ಆಗಬಹುದು ಎಂದು ಅಂದಾಜಿಸಿತ್ತು.

Publication Date
14/07/2026

Presented by ಪ್ರಜಾವಾಣಿ

## ❖ ಅನಿಲ್ ಮೆನನ್ ಐಎಸ್‌ಎಸ್‌ಗೆ ಇಂದು ಪಯಣ

- ನಾಸಾ ಗಗನಯಾನಿ, ಭಾರತ ಮೂಲದ ಅನಿಲ್ ಮೆನನ್ ಅವರು ರಷ್ಯಾದ ಇಬ್ಬರು ಗಗನಯಾನಿಗಳೊಂದಿಗೆ ಕಜಕಸ್ತಾನದ ಬೈಕೊನೂರ್ ಕಾಸ್ಮೋಡ್ರೋಮ್ ನಿಂದ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಮಂಗಳವಾರ ಪಯಣ ಬೆಳೆಸಲಿದ್ದಾರೆ.
- ಮೆನನ್ ಜತೆಗೆ ರಷ್ಯಾದ ಗಗನ ಯಾನಿಗಳಾದ ಪಯೋಟರ್ ಡುಬ್ರೋವ್ ಮತ್ತು ಅನ್ನಾ ಕಿಕಿನಾ ಅವರು ಐಎಸ್‌ಎಸ್‌ಗೆ ತೆರಳಲಿದ್ದಾರೆ.
- 'ರೋಸ್ ಕಾಸ್ಮೋಸ್ ಸೋಯುಜ್ ಎಂಎಸ್-29' ಗಗನನೌಕೆಯು ಭಾರತೀಯ ಕಾಲಮಾನ ಪ್ರಕಾರ ಮಂಗಳವಾರ ರಾತ್ರಿ 8.17ಕ್ಕೆ ನಭಕ್ಕೆ ಹಾರಲಿದೆ. ರಾತ್ರಿ 11.56ಕ್ಕೆ ಐಎಸ್‌ಎಸ್ ತಲುಪಲಿದ್ದು, ಗಗನಯಾನಿಗಳು ಬುಧವಾರ ಮುಂಜಾನೆ ಸುಮಾರು 1.25ಕ್ಕೆ ಐಎಸ್‌ಎಸ್ ಒಳಗಡೆ ಪ್ರವೇಶಿಸಲಿದ್ದಾರೆ.

27 ಮಂದಿ ವಿದೇಶಿಯರು: ಹೈಕೋರ್ಟ್ ತೀರ್ಪು ರದ್ದುಗೊಳಿಸಿದ 'ಸುಪ್ರೀಂ'

# 'ಪೌರತ್ವ: ಪ್ರಕ್ರಿಯೆ ನ್ಯಾಯಯುತವಾಗಿರಲಿ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಪೌರತ್ವ ನಿರ್ಧರಿಸುವ ಪ್ರಕ್ರಿಯೆಯನ್ನು ನ್ಯಾಯಸಮ್ಮತ, ಕಾನೂನುಬದ್ಧ ಮತ್ತು ತರ್ಕಬದ್ಧ ರೀತಿಯಲ್ಲಿ ಕೈಗೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಒತ್ತಿ ಹೇಳಿದ್ದು, 27 ಮಂದಿಯನ್ನು ವಿದೇಶಿಯರು ಎಂದು ಘೋಷಿಸಿ ಗುವಾಹಟಿ ಹೈಕೋರ್ಟ್ ನೀಡಿರುವ ತೀರ್ಪನ್ನು ಸೋಮವಾರ ರದ್ದುಗೊಳಿಸಿದೆ.

'ಕಾನೂನಿನ ಅಡಿಯಲ್ಲಿ ಸಮಾನತೆಯ ರಕ್ಷಣೆ, ಕಾನೂನಿನ ಅಡಿಯಲ್ಲಿ ದೊರಕುವ ರಕ್ಷಣೆಯಲ್ಲಿ ಸಮಾನತೆ, ಜೀವನ ಮತ್ತು ವೈಯಕ್ತಿಕ ಸ್ವಾತಂತ್ರ್ಯವು ಭಾರತದ ಗಡಿಯೊಳಗಿನ ಪ್ರತಿಯೊಬ್ಬ ವ್ಯಕ್ತಿಗೂ ಲಭ್ಯವಿದೆ' ಎಂದು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ಹೇಳಿತು.

'ಭಾರತೀಯ ಪೌರತ್ವ ಪಡೆಯಲು ಅರ್ಹರಲ್ಲದ ವ್ಯಕ್ತಿಗಳು ಸುಳ್ಳು ದಾಖಲೆ ಮೂಲಕ ಅಂತಹ ಸ್ಥಾನಮಾನ ಪಡೆಯದಂತೆ ನೋಡಿಕೊಳ್ಳುವ ಕಾನೂನುಬದ್ಧ ಅಧಿಕಾರ ಸರ್ಕಾರಕ್ಕೆ ಇದೆ. ಅದೇ ವೇಳೆ, ಪೌರತ್ವ ನಿರ್ಧರಿಸುವ ಪ್ರಕ್ರಿಯೆ ನ್ಯಾಯಯುತವಾಗಿರಬೇಕು' ಎಂದಿತು.

ಈ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸಂಬಂಧಪಟ್ಟ ನ್ಯಾಯಮಂಡಳಿಗಳಿಗೆ ಹಿಂದಿರುಗಿಸಿದ ಪೀಠ, 'ಸಂಬಂಧಿತ ನ್ಯಾಯಮಂಡಳಿಗಳು ಪ್ರಕರಣಗಳ ವಿಚಾರಣೆಯನ್ನು ಹೊಸದಾಗಿ ನಡೆಸಬೇಕು. ಈ ವೇಳೆ, ಹೈಕೋರ್ಟ್ ಅಥವಾ ನ್ಯಾಯಮಂಡಳಿಗಳು ಈ ಹಿಂದೆ ವ್ಯಕ್ತಪಡಿಸಿರುವ ಯಾವುದೇ ಅಂಶಗಳ ಪ್ರಭಾವಕ್ಕೆ ಒಳಗಾಗಬಾರದು' ಎಂದಿತು.

'ಮೇಲ್ಮನವಿದಾರರು ಪೌರತ್ವಕ್ಕಾಗಿ ಸಲ್ಲಿಸಿರುವ ಅರ್ಜಿಯ ಅರ್ಹತೆಯನ್ನು ಈ ನ್ಯಾಯಾಲಯ ಪರಿಶೀಲಿಸಿಲ್ಲ. ಅವರು ಹೊಂದಿರುವ ಯಾವುದೇ ದಾಖಲೆಯ ನೈಜತೆ, ಪ್ರಸ್ತುತತೆ ಅಥವಾ ಸಮರ್ಪಕತೆಯ ಬಗ್ಗೆ ತನ್ನ ಅಭಿಪ್ರಾಯವನ್ನೂ ವ್ಯಕ್ತಪಡಿಸಿಲ್ಲ' ಎಂದು ಸ್ಪಷ್ಟಪಡಿಸಿದ ಪೀಠ, 'ಅವುಗಳನ್ನು ಸಂಬಂಧಪಟ್ಟ ನ್ಯಾಯಮಂಡಳಿಗಳು ಸ್ವತಂತ್ರವಾಗಿ ನಿರ್ಧರಿಸಬೇಕು' ಎಂದಿತು.

### ಗೋಹತ್ಯೆ ನಿಷೇಧ: ಹೈಕೋರ್ಟ್ ಆದೇಶಕ್ಕೆ 'ಸುಪ್ರೀಂ' ತಡೆ

ರಾಜ್ಯದಲ್ಲಿ ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಮದ್ರಾಸ್ ಹೈಕೋರ್ಟ್ ನೀಡಿರುವ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ.

ತಮಿಳುನಾಡು ಸರ್ಕಾರ ಸಲ್ಲಿಸಿದ ಮೇಲ್ಮನವಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಅವರನ್ನು ಒಳಗೊಂಡ ನ್ಯಾಯಪೀಠ, ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ನೀಡಿತು. ಈ ಕುರಿತು ಅರ್ಜಿ ವಿಚಾರಣೆ ನಡೆಸಲು ಒಪ್ಪಿಗೆ ಸೂಚಿಸಿದ ಸುಪ್ರೀಂ ಕೋರ್ಟ್, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿದೆ. ರಾಜ್ಯದಾದ್ಯಂತ ಮೇ 27ರಿಂದ ಯಾವುದೇ ಹಸು-ಕರುಗಳನ್ನು ಹತ್ಯೆ ಮಾಡದಂತೆ ತಡೆಯಲು ಮುಖ್ಯ ಕಾರ್ಯದರ್ಶಿ ಮತ್ತು ಡಿಜಿಪಿ ಅವರಿಗೆ ಹೈಕೋರ್ಟ್ ನಿರ್ದೇಶನ ನೀಡಿತ್ತು.

ನಿಗದಿತ ಸ್ಥಳಗಳಲ್ಲಿ ಮಾತ್ರ ಗೋಹತ್ಯೆಗೆ ಅನುಮತಿ ನೀಡುವಂತೆ ಹಿಂದೂ ಮಕ್ಕಳ್ ಕಚ್ಚಿ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ. ಸೂರ್ಯ ಪ್ರಶಾಂತ್ ಅವರು ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಸಿದ್ದರು. ಆದರೆ, ತಮಿಳುನಾಡಿನಲ್ಲಿ ಹಸು-ಕರುಗಳ ಹತ್ಯೆಯನ್ನು ಹೈಕೋರ್ಟ್ ನಿಷೇಧಿಸಿ ಆದೇಶ ನೀಡಿತ್ತು.

ಕೋರ್ಟ್ ಸುದ್ದಿಗಳು

**ಮುಖ್ಯಾಂಶಗಳು**

- ನ್ಯಾ. ವಿಕ್ರಮ್ ನಾಥ್ ಮತ್ತು ನ್ಯಾ. ಸಂದೀಪ್ ಮೆಹ್ತಾ ಅವರ ಪೀಠ
- ನ್ಯಾಯಮಂಡಳಿಗಳು ಪ್ರಕರಣಗಳ ವಿಚಾರಣೆ ಹೊಸದಾಗಿ ನಡೆಸಬೇಕು
- ಯಾವುದೇ ಪ್ರಭಾವಕ್ಕೆ ಒಳಗಾಗದಿರಲು ಸೂಚನೆ

## ❖ ಎಟಿಪಿ ಯಾಂಕಿಂಗ್: 2ನೇ ಸ್ಥಾನಕ್ಕೆ ಅಲೆಕ್ಸಾಂಡರ್ ಜ್ವರೇವ್

- ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ರನ್ನರ್ಸ್ ಅಪ್ ಅಲೆಕ್ಸಾಂಡರ್ ಜ್ವರೇವ್ ಅವರು ಎಟಿಪಿ ಪುರುಷರ ಬ್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ. ವಿಂಬಲ್ಡನ್ ಕಿರೀಟ ಉಳಿಸಿಕೊಂಡ ಇಟಲಿಯ ತಾರೆ ಯಾನಿಕ್ ಸಿನ್ನರ್ ಅವರು ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.
- ಅಸೋಸಿಯೇಷನ್ ಆಫ್ ಪ್ರೊಫೆಷನಲ್ಸ್ (ಎಟಿಪಿ) ಸೋಮವಾರ ರ್ಯಾಂಕಿಂಗ್ ಪಟ್ಟಿ ಪ್ರಕಟಿಸಿದೆ. ಮೂರನೇ ಕ್ರಮಾಂಕ ದಲ್ಲಿದ್ದ ಜರ್ಮನಿಯ ಆಟಗಾರ ಜ್ವರೇವ್ ಅವರು ಒಂದು ಸ್ಥಾನ ಬಡ್ತಿ ಪಡೆದಿದ್ದಾರೆ. ಸ್ಪೇನ್ ತಾರೆ ಕಾರ್ಲೋಸ್ ಅಲ್ಕರಾಜ್ ಅವರು ಮೂರನೇ ಸ್ಥಾನಕ್ಕೆ ಸರಿದಿದ್ದಾರೆ.

## ❖ ಹಡಗುಗಳ ಮೇಲೆ ಇರಾನ್ ದಾಳಿ: ಭಾರತ ಖಂಡನೆ: ಭಾರತೀಯ ನಾವಿಕ ಸಾವು




- ಒಮಾನ್‌ನ ಜಲಗಡಿಯಲ್ಲಿ ಸಾಗುತ್ತಿದ್ದ, ಯುಎಇಗೆ ಸೇರಿದ ಎರಡು ತೈಲ ಹಡಗುಗಳ ಮೇಲೆ ಇರಾನ್ ಮಂಗಳವಾರ ದಾಳಿ ನಡೆಸಿದ್ದು, ಇವುಗಳಲ್ಲಿ ಒಂದು ಹಡಗಿನಲ್ಲಿದ್ದ ಒಬ್ಬ ಭಾರತೀಯ ಸಿಬ್ಬಂದಿ ಮೃತಪಟ್ಟಿದ್ದಾರೆ. 10 ಭಾರತೀಯರಿಗೆ ಗಾಯಗಳಾಗಿವೆ. ಇಬ್ಬರ ಸ್ಥಿತಿ ಗಂಭೀರವಾಗಿದೆ.
- ಭಾರತವು ಇರಾನ್ ದಾಳಿಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದು, ತೀವ್ರವಾಗಿ ಖಂಡಿಸಿದೆ. ನವದೆಹಲಿಯಲ್ಲಿರುವ ಇರಾನ್‌ನ ಉಪ ರಾಯಭಾರಿಯನ್ನು ಕರೆಸಿ, ಈ ಸಂಬಂಧ ತನ್ನ ಪ್ರತಿಭಟನೆಯನ್ನು ದಾಖಲಿಸಿದೆ. ದಾಳಿಗಳನ್ನು ತಕ್ಷಣವೇ ನಿಲ್ಲಿಸುವಂತೆ ಒತ್ತಾಯಿಸಿದೆ. ಮಾತುಕತೆ ಮೂಲಕ ಸಂಘರ್ಷ ಅಂತ್ಯಗೊಳಿಸಿಕೊಳ್ಳುವಂತೆಯೂ ಕರೆ ನೀಡಿದೆ.
- 'ವಾಣಿಜ್ಯ ಹಡಗುಗಳು ಮತ್ತು ದೇಶಗಳ ಮೂಲಸೌಕರ್ಯಗಳನ್ನು ಗುರಿಯಾಗಿಸುವುದನ್ನು ನಿಲ್ಲಿಸಬೇಕು. ಅಂತರರಾಷ್ಟ್ರೀಯ ಸಮುದ್ರದಲ್ಲಿ ಮುಕ್ತ ಸಂಚಾರಕ್ಕೆ ಯಾವುದೇ ತಡೆ ಇರಬಾರದು. ಅಂತರರಾಷ್ಟ್ರೀಯ ಕಾನೂನುಗಳ ಅನ್ವಯ ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಡಿ' ಎಂದೂ ಭಾರತವು ಇರಾನ್‌ಗೆ ಹೇಳಿದೆ.
- 'ಯುಎಇ ಮತ್ತು ನಾವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿ ದ್ದೇವೆ. ಎರಡೂ ದೇಶಗಳ ಸಂಬಂಧಪಟ್ಟ ಅಧಿಕಾರಿಗಳು ಸಂಪರ್ಕದಲ್ಲಿದ್ದಾರೆ. ದಾಳಿಗಳಿಂದ ಪರಿಣಾಮ ಎದುರಿಸುತ್ತಿರುವ ಭಾರತೀಯ ನಾವಿಕರ ಅನುಕೂಲಕ್ಕಾಗಿ ಎಲ್ಲ ರೀತಿಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ' ಎಂದು ಭಾರತದ ವಿದೇಶಾಂಗ ಸಚಿವಾಲಯ ಹೇಳಿದೆ.
- ಈ ಭಾರತೀಯರು ಯುಎಇಗೆ ಸೇರಿದ ಹಡಗುಗಳಲ್ಲಿ ಉದ್ಯೋಗದಲ್ಲಿದ್ದರು. ಹಡುಗುಗಳ ಮೇಲೆ ದಾಳಿ ನಡೆದ ಬಗ್ಗೆ ಯುಎಇ ರಕ್ಷಣಾ ಸಚಿವಾಲಯವು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿತು. ಇದೇ ದಾಳಿಯಲ್ಲಿ ಇಬ್ಬರು ಉಕ್ರೇನ್ ಪ್ರಜೆಗಳಿಗೂ ಗಾಯಗಳಾಗಿವೆ. ಯುಎಇ ಕೂಡ ಈ ದಾಳಿಯನ್ನು ಖಂಡಿಸಿದೆ.

### ಇರಾನ್ ಎಚ್ಚರಿಕೆ

- 'ನಾವು ಪದೇಪದೇ ಎಚ್ಚರಿಕೆ ನೀಡಿದರೂ ಅದನ್ನು ನಿರ್ಲಕ್ಷಿಸಿ ಜಲಸಂಧಿಯಿಂದ ಹಾದು ಹೋಗುವ 'ಅಪರಾಧ' ಎಸಗಿದ ಎರಡು ಹಡಗುಗಳ ಮೇಲೆ ದಾಳಿ ನಡೆಸಿದ್ದೇವೆ' ಎಂದು ಇರಾನ್ ತಿಳಿಸಿದೆ. ಯುಎಇ ಮಾಹಿತಿ ನೀಡಿದ ಹಡಗುಗಳ ಕುರಿತೇ ಇರಾನ್ ಈ ಹೇಳಿಕೆ ನೀಡಿದೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ.
- 'ಅಕ್ರಮ ಮಾರ್ಗದಲ್ಲಿ ಪ್ರಚೋದನೆಗೆ ಮುಂದಾಗಲು ಅಮೆರಿಕವು ಒತ್ತಡ ಹೇರುತ್ತಿದೆ. ಸದಾ ಆಕ್ರಮಣಕಾರಿ ಯಾಗಿ ವರ್ತಿಸುವ ನಮ್ಮ ಶತ್ರುಗಳಿಗೆ ಸಹಕಾರ ನೀಡಬಾರದು. ಇದು ವಿನಾಶಕ್ಕೆ ದಾರಿ ಮಾಡಿಕೊಡುತ್ತದೆ ಮತ್ತು ಜಲಸಂಧಿಯು ಮುಕ್ತ ಸಂಚಾರಕ್ಕೆ ತೆರೆದುಕೊಳ್ಳುವುದನ್ನು ವಿಳಂಬ ಮಾಡಲಿದೆ' ಎಂದೂ ಇರಾನ್ ಎಚ್ಚರಿಸಿದೆ.

## ❖ ನಾಡಗೀತೆ: 'ಬೌದ್ಧರುದ್ಯಾನ' ಮರು ಸೇರ್ಪಡೆಗೆ ಶಿಫಾರಸು

- ಕವಿ ಕುವೆಂಪು ವಿರಚಿತ ನಾಡಗೀತೆಯಲ್ಲಿ 'ಬೌದ್ಧ' ಪದ ಮರು ಸೇರ್ಪಡೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರ ನೇತೃತ್ವದ ಸಮಿತಿ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.
- ನಾಡಗೀತೆಯಲ್ಲಿ 'ಬೌದ್ಧ' ಪದವನ್ನು ಮರು ಸೇರ್ಪಡೆ ಮಾಡುವಂತೆ ಬೌದ್ಧ ಧರ್ಮಗುರುಗಳ ಜತೆಗೆ, ಆ ಧರ್ಮದ ಸಂಘಟನೆಗಳು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದವು. ಈ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸರ್ಕಾರವು ಸಮಿತಿಯನ್ನು ರಚಿಸಿತ್ತು. ಸಮಿತಿಯು ಈ ಬಗ್ಗೆ ಸಭೆ ನಡೆಸಿ, ಪದ ಸೇರ್ಪಡೆಗೆ ಒಮ್ಮತದ ತೀರ್ಮಾನ ಕೈಗೊಂಡಿದೆ. ನಾಡಗೀತೆಯಲ್ಲಿನ 'ಪಾರಸಿಕ ಜೈನರುದ್ಯಾನ' ಎಂಬ ಸಾಲುಗಳನ್ನು, 'ಪಾರಸಿಕ ಜೈನ ಬೌದ್ಧರುದ್ಯಾನ' ಎಂದು ಮಾರ್ಪಾಡು ಮಾಡಲು ಸಮಿತಿಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವರದಿ ಸಲ್ಲಿಸಿದೆ. 'ಬೌದ್ಧ ಧರ್ಮವೂ ಪ್ರಮುಖ ಧರ್ಮವಾಗಿದೆ. ಬೌದ್ಧ ಪದ ಸೇರ್ಪಡೆಯಿಂದ ನಾಡಗೀತೆಗೆ ಮತ್ತು ಅದರ ಲಯಕ್ಕೆ ತೊಂದರೆ ಆಗುವುದಿಲ್ಲ' ಎಂದು ಪುರುಷೋತ್ತಮ ಬಿಳಿಮಲೆ ತಿಳಿಸಿದರು.
- ಈ ಸಮಿತಿಯು ಹಂಪ ನಾಗರಾಜಯ್ಯ, ಬರಗೂರು ರಾಮಚಂದ್ರಪ್ಪ, ಎಸ್.ಜಿ.ಸಿದ್ದರಾಮಯ್ಯ, ಕೆ.ವಿ.ಚಿದಾನಂದ, ಮೀನಾಕ್ಷಿ ಬಾಳಿ, ಎಂ.ಎಸ್.ಆಶಾದೇವಿ, ಸಿ.ಎಸ್.ದ್ವಾರಕಾನಾಥ್, ಮೂಡ್ನಾಕೂಡು ಚಿನ್ನಸ್ವಾಮಿ, ಕಾಳೇಗೌಡ ನಾಗವಾರ ಅವರನ್ನು ಒಳಗೊಂಡಿತ್ತು.
- ಈ ಹಿಂದೆ ಸಮಾಜ ಕಲ್ಯಾಣ ಸಚಿವರಾಗಿದ್ದ ಎಚ್.ಸಿ.ಮಹದೇವಪ್ಪ ಅವರು 2025ರ ನವೆಂಬರ್ ತಿಂಗಳಲ್ಲಿಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು, 'ಕುವೆಂಪು ರಚಿಸಿದ ನಾಡಗೀತೆಯ ಮೂಲ ಕರಡಿನಲ್ಲಿ ಬೌದ್ಧ ಪದವಿತ್ತು. ನಂತರ ಕಾರಣಾಂತರಗಳಿಂದ ತೆಗೆಯಲಾಗಿದೆ. ಆದ್ದರಿಂದ ಆ ಪದ ಸೇರ್ಪಡೆ ಮಾಡಬೇಕು' ಎಂದು ಮನವಿ ಮಾಡಿದ್ದರು. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಿದ್ದರಾಮಯ್ಯ ಅವರು ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದರು. ಅವರು ಸಮಿತಿ ರಚಿಸಿ ಆದೇಶಿಸಿದ್ದರು.

## ❖ ಆಟ ಮಕ್ಕಳ ಮೂಲಭೂತ ಹಕ್ಕು: ಹೈಕೋರ್ಟ್

- ಅಪಾರ್ಟ್‌ಮೆಂಟ್‌ನಲ್ಲಿ ಮಕ್ಕಳು ಫುಟ್‌ಬಾಲ್ ಆಡುವುದಕ್ಕೆ ಅಪಾರ್ಟ್‌ಮೆಂಟ್ ಅಸೋಸಿ ಯೇಷನ್ ನಿಷೇಧ ಹೇರಿದ್ದನ್ನು ಎತ್ತಿಹಿಡಿದಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದುಗೊಳಿಸಿರುವ ಹೈಕೋರ್ಟ್, 'ಆಟದ ಮೈದಾನವನ್ನು ನಿಯಂತ್ರಿಸುವ ಅಧಿಕಾರ ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗೆ ಇದ್ದರೂ ಸಂಪೂರ್ಣ ನಿಷೇಧ ಹೇರುವುದು ಅಸಮಂಜಸ ಮತ್ತು ಅನಿಯಂತ್ರಿತ' ಎಂದು ಸ್ಪಷ್ಟಪಡಿಸಿದೆ.
- ಸಹಕಾರ ನಗರದ ಇ ಬ್ಲಾಕ್‌ನಲ್ಲಿರುವ 'ಎಸ್ಟೀಮ್ ಗಾರ್ಡೇನಿಯಾ ಅಪಾರ್ಟ್‌ಮೆಂಟ್ ಮಾಲೀಕರ ಅಸೋಸಿಯೇಷನ್' ವಿರುದ್ಧ ಸಂಗೀತಾ ಅಗರ್‌ವಾಲ್ ಮತ್ತು ಅವರ ಪತಿ ಹೇಮಂತ್ ಅಗರ್‌ವಾಲ್ ಸಲ್ಲಿಸಿದ್ದ ನಿಯಮಿತ ಮೊದಲ ಮೇಲ್ಮನವಿಯನ್ನು ನ್ಯಾಯಮೂರ್ತಿ ಹಂಚಾಟೆ ಸಂಜೀವ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.
- 'ಆಟ ಆಡುವುದು ಮಕ್ಕಳ ಮೂಲಭೂತ ಹಕ್ಕು. ಅದನ್ನು ನಿಷೇಧಿಸುವುದು ಅವರ ಆರೋಗ್ಯ ಮತ್ತು ಸರ್ವತೋಮುಖ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ' ಎಂದು ತಿಳಿಸಿರುವ ನ್ಯಾಯಪೀಠ, 'ಮೂರು ತಿಂಗಳೊಳಗೆ ಸಾಮಾನ್ಯ ಸಭೆ ಕರೆದು, ಯಾವ ಆಟಗಳಿಗೆ ಅನುಮತಿಸಬಹುದು ಮತ್ತು ಯಾವುದನ್ನು ನಿರ್ಬಂಧಿಸಬಹುದು ಎಂಬುದನ್ನು ಬಹುಮತದ ಮೂಲಕ ನಿರ್ಧರಿಸಿ' ಎಂದು ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗೆ ನಿರ್ದೇಶಿಸಿದೆ.

Dr Rajkumar IAS/KAS Academy



# ಪ್ರವಾಹದ ಮುನ್ಸೂಚನೆಗೆ ಹೊಸ 'ಮಾದರಿ'

• ಸುಧೀರ ಎಚ್.ಎಸ್.

ಭಾರತದ ಸಿಲಿಕಾನ್ ಸಿಟಿ ಎಂದೇ ಖ್ಯಾತಿಯಾಗಿರುವ ಬೆಂಗಳೂರು ಇತ್ತೀಚಿನ ವರ್ಷಗಳಲ್ಲಿ ಮಳೆಯ ಆರ್ಭಟಕ್ಕೆ ತತ್ತರಿಸಿದೆ. ಒಮ್ಮೆ ಜೋರು ಮಳೆಯಾದರೆ ಸಾಕು, ರಸ್ತೆಗಳು ಕೆರೆಗಳಂತಾಗಿ, ವಾಹನಗಳು ಮುಳುಗಡೆಯಾಗಿ, ನಗರದ ಹಲವಾರು ತಗ್ಗುಪ್ರದೇಶಗಳು ಜಲಾವೃತಗೊಳ್ಳುತ್ತವೆ. ಒಂದು ಕಾಲದ ಸುಂದರ ಉದ್ಯಾನನಗರಿ ಇಂದು ಕಾಂಕ್ರೀಟ್ ಕಾಡಾಗಿ ಮಾರ್ಪಟ್ಟಿರುವುದೇ ಇದಕ್ಕೆ ಒಂದು ಮುಖ್ಯ ಕಾರಣ. ಮಳೆನೀರು ಇಂಗಲು ಜಾಗವಿಲ್ಲದೆ, ರಸ್ತೆ ಹಾಗೂ ಕಟ್ಟಡಗಳ ಮೇಲೆ ಹರಿದು ಹಳೆಯದಾದ ಚರಂಡಿ ವ್ಯವಸ್ಥೆಯ ಮೇಲೆ ಸಾಕಷ್ಟು ಒತ್ತಡವನ್ನು ಉಂಟುಮಾಡುತ್ತಿದೆ. ಹೀಗೆ ಮಳೆ ಬಂದ ಕೆಲವೇ ಗಂಟೆಗಳಲ್ಲಿ ನಗರ ದಿಢೀರ್ ಪ್ರವಾಹಕ್ಕೆ ಸಿಲುಕುವುದನ್ನು ವೈಜ್ಞಾನಿಕವಾಗಿ ನಿಯಂತ್ರಿಸಲು ಈಗ ಸಂಶೋಧಕರು ಒಂದು ಡಿಜಿಟಲ್ ಮಾದರಿಯನ್ನು (ಮಾಡೆಲ್) ಅಭಿವೃದ್ಧಿಪಡಿಸಿದ್ದಾರೆ.

ಬೆಂಗಳೂರಿನಲ್ಲೇ ಇರುವ ಸಿಎಸ್‌ಐಆರ್ ಫೋರ್ತ್ ಪ್ಯಾರಾಡೈಮ್ ಇನ್‌ಸ್ಟಿಟ್ಯೂಟ್ ಮತ್ತು ಅಕಾಡೆಮಿ ಆಫ್ ಸೈಂಟಿಫಿಕ್ ಆ್ಯಂಡ್ ಇನ್ನೋವೇಟಿವ್ ರಿಸರ್ಚ್ (AcSIR) ಸಂಸ್ಥೆಯ ವಿಜ್ಞಾನಿಗಳು ಜಂಟಿಯಾಗಿ ಈ ತಂತ್ರಜ್ಞಾನವನ್ನು ಸಿದ್ಧಪಡಿಸಿದ್ದಾರೆ. ನಗರದ ಅತ್ಯಂತ ಸೂಕ್ಷ್ಮ ಹಾಗೂ ತಗ್ಗು ಪ್ರದೇಶವಾದ 'ಕೋರಮಂಗಲ-ಚಲ್ಲಘಟ್ಟ ಕಣಿವೆ' (ಕೆ.ಸಿ. ವ್ಯಾಲಿ) ಭಾಗವನ್ನು ಆಧಾರವಾಗಿಟ್ಟುಕೊಂಡು ಈ ಅಧ್ಯಯನ ನಡೆಸಲಾಗಿದೆ. ಈ ಕಣಿವೆಯು ಸುಮಾರು 299 ಚದರ ಕಿಲೋಮೀಟರ್ ವ್ಯಾಪ್ತಿಯನ್ನು ಹೊಂದಿದ್ದು, ಮಡಿವಾಳ, ಬೆಳ್ಳಂದೂರು ಮತ್ತು ವರ್ತೂರು ಕೆರೆಗಳ ಸರಪಳಿಗೆ ನಿಕಟ ಸಂಪರ್ಕ ಹೊಂದಿದೆ. ಈ ಪ್ರದೇಶದ ಭೌಗೋಳಿಕ ಸ್ಥಿತಿ 'ಬಟ್ಟಲಿನ' (bowl) ಆಕಾರದಲ್ಲಿ ಇರುವುದರಿಂದ ಇಲ್ಲಿ ಪ್ರವಾಹದ ಅಪಾಯ ಹೆಚ್ಚಾಗಿರುತ್ತದೆ. ವಿಜ್ಞಾನಿಗಳು ಈ ಇಡೀ ಪ್ರದೇಶದ ಕೃತಕ ಕಂಪ್ಯೂಟರ್ ಮಾದರಿಯನ್ನು ಸೃಷ್ಟಿಸಿದ್ದಾರೆ. ಇದನ್ನು ತಾಂತ್ರಿಕ ಭಾಷೆಯಲ್ಲಿ 'ಡಿಜಿಟಲ್ ಟ್ವಿನ್' ಅಥವಾ 'ಡಿಜಿಟಲ್ ಅವಳಿ' ಎಂದು ಕರೆಯಲಾಗುತ್ತದೆ.

ಈ ಡಿಜಿಟಲ್ ಮಾದರಿಯು ಅಮೆರಿಕದ ಪರಿಸರ ಸಂರಕ್ಷಣಾ ಸಂಸ್ಥೆ ಅಭಿವೃದ್ಧಿಪಡಿಸಿದ 'ಸ್ಟಾರ್ಮ್ ವಾಟರ್ ಮ್ಯಾನೇಜ್‌ಮೆಂಟ್ ಮಾಡೆಲ್' (SWMM) ಎಂಬ ಭೌತವಿಜ್ಞಾನ ಆಧಾರಿತ ತಂತ್ರಾಂಶವನ್ನು ಬಳಸಿಕೊಳ್ಳುತ್ತದೆ. ಉಪಗ್ರಹಗಳ ನೆರವಿನಿಂದ ಕಣಿವೆಯ ಇಳಿಜಾರು, ಎತ್ತರ ಹಾಗೂ ರಸ್ತೆಗಳ ರಚನೆಯನ್ನು ನಿಖರವಾಗಿ ನಕ್ಷೆ ಮಾಡಲಾಗಿದೆ. ಈ ಮಾದರಿಯಲ್ಲಿ ಮಳೆಯ ನೀರು ಕಾಂಕ್ರೀಟ್ ರಸ್ತೆಯ ಮೇಲೆ ಎಷ್ಟು ವೇಗವಾಗಿ ಹರಿಯುತ್ತದೆ ಮತ್ತು ಮಣ್ಣಿನ ಮೇಲೆ ಬಿದ್ದರೆ ಹೇಗೆ ಇಂಗುತ್ತದೆ ಎಂಬುದನ್ನು ಲೆಕ್ಕಾಚಾರ ಮಾಡಲು ಗಣಿತದ ಸೂತ್ರಗಳನ್ನು ಬಳಸಲಾಗಿದೆ. ಚರಂಡಿಗಳಲ್ಲಿ ನೀರಿನ ಒತ್ತಡ ಹೆಚ್ಚಾದಾಗ ಎಲ್ಲೆಲ್ಲಿ ನೀರು ಉಕ್ಕಿ ಹರಿಯಬಹುದು ಎಂಬುದನ್ನು ನಿಖರವಾಗಿ ಊಹಿಸಬಲ್ಲದು.

ವಿಜ್ಞಾನಿಗಳು ತಮ್ಮ ಈ ಹೊಸ ಡಿಜಿಟಲ್ ಮಾದರಿಯನ್ನು ಪರೀಕ್ಷಿಸಲು ಬೆಂಗಳೂರಿನಲ್ಲಿ ಈ ಹಿಂದೆ ಸಂಭವಿಸಿದ ನಾಲ್ಕು ಪ್ರಮುಖ ಭೀಕರ ಪ್ರವಾಹಗಳ (2015ರಿಂದ 2018ರವರೆಗಿನ) ದತ್ತಾಂಶಗಳನ್ನು ಬಳಸಿಕೊಂಡಿದ್ದಾರೆ. ಅದರಲ್ಲೂ ವಿಶೇಷವಾಗಿ 2017ರ ಆಗಸ್ಟ್ 15ರಂದು ಕೇವಲ 24 ಗಂಟೆಗಳಲ್ಲಿ ಬಿದ್ದ 109.28 ಮಿಲಿಮೀಟರ್ ಭಾರಿ ಮಳೆಯ ದತ್ತಾಂಶವನ್ನು ಈ ಮಾದರಿಗೆ ಅಳವಡಿಸಿದಾಗ, ಅದು ನೀಡಿದ ಫಲಿತಾಂಶ ಆಶ್ಚರ್ಯಕರವಾಗಿತ್ತು. ನಗರದ ಹಲವೆಡೆ ಎಲ್ಲೆಲ್ಲಿ ನೀರು ತುಂಬಿತ್ತು ಮತ್ತು ಯಾವ ಸಮಯದಲ್ಲಿ ಪ್ರವಾಹ ಉಂಟಾಗಿತ್ತು ಎಂಬುದನ್ನು ಈ ಡಿಜಿಟಲ್ ಮಾದರಿಯು ಸಾಕಷ್ಟು ನಿಖರವಾಗಿ ತೋರಿಸಿದೆ. ಹಳೆಯ ಸಾಂಪ್ರದಾಯಿಕ ಪದ್ಧತಿಗಳಿಗೆ ಹೋಲಿಸಿದರೆ ಇದು ಹೆಚ್ಚು ಕಡಿಮೆ ಪ್ರತಿ ಸೆಕೆಂಡಿಗೆ 4 ಘನ ಮೀಟರ್ ಅಂತರದಲ್ಲಿ ನಿಖರವಾದ ಮುನ್ಸೂಚನೆಯನ್ನು ನೀಡುತ್ತದೆ. ಆದಾಗ್ಯೂ, ಈ ಮಾದರಿಯಲ್ಲಿ ಕೆಲವು ಸವಾಲುಗಳೂ ಇವೆ. ನಮ್ಮ ಬೆಂಗಳೂರಿನಲ್ಲಿ ಕಟ್ಟಡಗಳ ನಿರ್ಮಾಣ ಕಾರ್ಯಗಳು ಎಷ್ಟು ವೇಗವಾಗಿ ನಡೆಯುತ್ತಿವೆ ಎಂದರೆ, ಒಂದು ವರ್ಷದ ಹಿಂದಿನ ಉಪಗ್ರಹ ಆಧಾರಿತ ಚಿತ್ರಗಳು ಹಳೆಯದಾಗಿಬಿಡುತ್ತವೆ. ಜೊತೆಗೆ ಈ ಕಂಪ್ಯೂಟರ್ ಮಾದರಿಯು ನಗರದ ರಾಜಕಾಲುವೆಗಳು ಮತ್ತು ಚರಂಡಿಗಳು ಯಾವುದೇ ಕಸವಿಲ್ಲದೆ ಸ್ವಚ್ಛವಾಗಿವೆ ಎಂದು ಊಹಿಸಿಕೊಂಡು ಲೆಕ್ಕ ಹಾಕುತ್ತದೆ. ಆದರೆ ವಾಸ್ತವದಲ್ಲಿ, ಬೆಂಗಳೂರಿನ ಬಹುತೇಕ ಚರಂಡಿಗಳು ಪ್ಲಾಸ್ಟಿಕ್ ತ್ಯಾಜ್ಯ ಮತ್ತು ಹೂಳಿನಿಂದ ತುಂಬಿರುವುದರಿಂದ, ಮಾದರಿ ಊಹಿಸುವುದಕ್ಕಿಂತಲೂ ವೇಗವಾಗಿ ನೀರು ಉಕ್ಕಿ ಹರಿಯುವ ಸಾಧ್ಯತೆಯೂ ಇರುತ್ತದೆ.

ಈ ಹೊಸ ತಂತ್ರಜ್ಞಾನದಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಹಿಂದಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬಿಬಿಎಂಪಿ) ಇದನ್ನು ಒಮ್ಮೆ ಬಳಸಿ ನೋಡಬಹುದು. ಮಳೆ ಬರುವ ಕೆಲವು ಗಂಟೆಗಳ ಮುಂಚಿತವಾಗಿಯೇ ನಗರದ ಯಾವ ಬಡಾವಣೆಯ ಯಾವ ರಸ್ತೆಯಲ್ಲಿ ಮೊದಲು ನೀರು ನಿಲ್ಲುತ್ತದೆ ಎಂಬುದನ್ನು ಈ ಮಾದರಿ ತಿಳಿಸಿಕೊಡುತ್ತದೆ. ಇದರಿಂದಾಗಿ ಅಧಿಕಾರಿಗಳು ಮಳೆ ಬರುವ ಮುನ್ನವೇ ಸಾರ್ವಜನಿಕರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು, ಮುಂಜಾಗ್ರತೆಯಾಗಿ ನೀರು ತೆಗೆಯಲು ಪಂಪ್‌ಗಳನ್ನು ನಿಯೋಜಿಸಲು ಮತ್ತು ತುರ್ತು ನಿರ್ವಹಣಾ ತಂಡಗಳನ್ನು ಸಜ್ಜುಗೊಳಿಸಲು ಸಾಕಷ್ಟು ಸಮಯ ಸಿಗುತ್ತದೆ.

ದೀರ್ಘಾವಧಿಯ ನಗರ ಯೋಜನೆಗೂ ಇದು ಸಹಾಯವಾಗಬಲ್ಲದು. ನಗರದ ಯಾವ ಚರಂಡಿಗಳನ್ನು ವಿಸ್ತರಣೆ ಮಾಡಬೇಕು, ಎಲ್ಲಿ ಮಳೆನೀರು ಸಂಗ್ರಹ ಪದ್ಧತಿ ತರಬೇಕು ಮತ್ತು ಎಲ್ಲೆಲ್ಲಿ ಉದ್ಯಾನ ನಿರ್ಮಿಸಿದರೆ ಪ್ರವಾಹದ ತೀವ್ರತೆ ಕಡಿಮೆಯಾಗುತ್ತದೆ ಎಂಬುದನ್ನು ಈ ಮಾದರಿಯ ಮೂಲಕ ಮೊದಲೇ ಪರೀಕ್ಷಿಸಿ ನೋಡಬಹುದು. ಅನಗತ್ಯವಾಗಿ ಚರಂಡಿ ಅಭಿವೃದ್ಧಿ ಹೆಸರಿನಲ್ಲಿ ಸಾರ್ವಜನಿಕ ಹಣ ಪೋಲಾಗುವುದನ್ನು ಇದು ತಪ್ಪಿಸುತ್ತದೆ. ಒಟ್ಟಾರೆ ಇದನ್ನು ನಮ್ಮ ಸರ್ಕಾರ ಸೂಕ್ತವಾಗಿ ಬಳಸಿಕೊಂಡರೆ ಲಕ್ಷಾಂತರ ಜನರ ಜೀವ, ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಪಾಸ್ತಿ ಮತ್ತು ಬೆಂಗಳೂರಿನ ಸಾರಿಗೆ ವ್ಯವಸ್ಥೆಯನ್ನು ಪ್ರವಾಹದಿಂದ ರಕ್ಷಿಸಬಹುದಾಗಿದೆ.

ಜಾಗತಿಕ ತಾಪಮಾನದಲ್ಲಿ ಏರುಪೇರು ಮತ್ತು ಹವಾಮಾನ ವೈಪರೀತ್ಯ ಅನುಭವಿಸುತ್ತಿದ್ದಂತೆ, ಈ ವರ್ಷ 'ಎಲ್ ನಿನೊ' ಕಾರಣದಿಂದ ಮುಂಗಾರು ಮಳೆ ತಡವಾಗಿದೆ. ಮುಂಗಾರುಮಳೆ ಸರಿಯಾಗಿ ಬರುವುದೊರಳಗೆ ನಮ್ಮ ಅಧಿಕಾರಿಗಳು ಈ ಹೊಸ ಮಾಡೆಲ್ ಪ್ರಯೋಗಿಸುವರೇ!? ಕಾದು ನೋಡಬೇಕಿದೆ.





# ಸಂತಾನಹೀನತೆ ಗಂಡಸೇ ಜವಾಬ್ದಾರ!

• ಎಸ್.ಎನ್.ಹೆಗಡೆ

**ಮಾನವದಂಪತಿಗಳಿಗೆ** ಸಂತಾನಭಾಗ್ಯ ಇಲ್ಲವಾದರೆ ಬಂಜೆ ಎಂದು ಹೆಣ್ಣನ್ನೇ ದೂಷಿಸಲಾಗುತ್ತದೆ. ಬಹಳ ಹಿಂದಿನಿಂದಲೂ ಸಂತಾನಹೀನತೆಗೆ ಹೆಣ್ಣೇ ಕಾರಣ ಎಂದು ನಂಬಲಾಗಿತ್ತು. ಇತ್ತೀಚಿನವರೆಗೂ, ಕೆಲವು ಹೆಂಗಸರಿಗೆ ಗರ್ಭಧಾರಣೆ ಮಾಡುವ ಶಕ್ತಿ ಇರುವುದಿಲ್ಲವಾದ್ದರಿಂದ ಮಕ್ಕಳಾಗುವುದಿಲ್ಲ ಎಂದು ತರ್ಕಿಸಲಾಗುತ್ತಿತ್ತು. ಆದರೆ ಇತ್ತೀಚೆಗೆ ಮಿಚಿಗನ್ ವಿಶ್ವವಿದ್ಯಾಲಯದ ವೈದ್ಯಕೀಯ ಶಾಲೆಯ ಸಂಶೋಧಕರು, ದಂಪತಿಗಳ ಸಂತಾನಹೀನತೆಗೆ ಪುರುಷನೇ ಹೆಚ್ಚು ಕಾರಣ ಎಂದು ಕಂಡು ಹಿಡಿದಿದ್ದಾರೆ! ಈ ಆಶ್ಚರ್ಯಕರ ಸುದ್ದಿಯನ್ನು ಹೆಸರಾಂತ ವೈಜ್ಞಾನಿಕ ನಿಯತಕಾಲಿಕೆ 'ಕರೆಂಟ್ ಬಯಾಲಜಿ' ತನ್ನ 2026ರ ಜೂನ್ ಒಂದರ ಸಂಚಿಕೆಯಲ್ಲಿ ಪ್ರಕಟಿಸಿದೆ.

ಕುಟುಂಬವೊಂದರಲ್ಲಿ ಕೇವಲ ಹೆಣ್ಣುಮಕ್ಕಳು ಅಥವಾ ಗಂಡುಮಕ್ಕಳೇ ಜನಿಸಿದಾಗಲೂ ಹೆಣ್ಣನ್ನೇ ಜರಿಯಲಾಗುತ್ತಿತ್ತು. 20ನೆಯ ಶತಮಾನದ ಆದಿಯಲ್ಲಿ ಜೀವಿಗಳಲ್ಲಿ ಆನುವಂಶೀಯತೆಯ ಅಧ್ಯಯನ ಆರಂಭವಾಗಿ, ಜೀವಕೋಶದಲ್ಲಿರುವ ವರ್ಣತಂತುಗಳು ಅಥವಾ ಕ್ರೊಮೊಸೋಮ್‌ಗಳು ಹಾಗೂ ಅವುಗಳಲ್ಲಿರುವ ಜೀನ್‌ಗಳು ಲಿಂಗನಿರ್ಧಾರಕ್ಕೆ ಕಾರಣ ಎಂದು ಕಂಡುಹಿಡಿಯಲಾಯಿತು. ಅಂದರೆ ಹೆಣ್ಣು ಅಥವಾ ಗಂಡುಮಗು ಜನಿಸುವುದನ್ನು ಅವು ಪಿತೃಗಳಿಂದ ಪಡೆಯುವ ಕ್ರೊಮೊಸೋಮ್‌ಗಳು ನಿರ್ಧರಿಸುತ್ತವೆ ಎಂದಾಯಿತು. ಈ ಸಂಶೋಧನೆಗಳು ಗಂಡು ಅಥವಾ ಹೆಣ್ಣುಮಗು ಜನಿಸುವುದಕ್ಕೆ ಅದರ ತಂದೆ-ತಾಯಿಯರು (ಹೆಣ್ಣು ಮತ್ತು ಗಂಡು) ಸಮಾನ ಜವಾಬ್ದಾರರು ತಿಳಿಸಿದವು.

ಮಾನವನ ಪ್ರತಿಯೊಂದು ಜೀವಕೋಶದಲ್ಲಿ 46 ಕ್ರೊಮೊಸೋಮ್‌ಗಳಿರುತ್ತವೆ. ಅವುಗಳಲ್ಲಿ 44 (22 ಜೋಡಿ) ಶಾರೀರಿಕ ಗುಣಗಳನ್ನು ನಿರ್ಧರಿಸುತ್ತವೆ. ಅವುಗಳನ್ನು 'ಆಟೋಸೋಂ' ಎನ್ನುತ್ತಾರೆ. ಇವುಗಳೊಂದಿಗೆ 'ಎಕ್ಸ್' ಮತ್ತು 'ವೈ' ಎಂಬ ಎರಡು ವಿಭಿನ್ನ ಕ್ರೊಮೊಸೋಮ್‌ಗಳಿದ್ದು ಅವು ಆ ವ್ಯಕ್ತಿಯ ಲಿಂಗವನ್ನು ನಿರ್ಧರಿಸುತ್ತವೆ. ಅವುಗಳನ್ನು 'ಅಲ್ಲೊಸೋಂ' ಎನ್ನುತ್ತಾರೆ. ಹೆಣ್ಣಿನ ಜೀವಕೋಶಗಳಲ್ಲಿ 44 ಆಟೋಸೋಮ್ ಹಾಗೂ ಎರಡು ಎಕ್ಸ್ ಕ್ರೊಮೊಸೋಮ್‌ಗಳು (44 + 2ಎಕ್ಸ್ = 46) ಇರುತ್ತವೆ. ಗಂಡಿನ ಜೀವಕೋಶಗಳಲ್ಲಿ 44 ಆಟೋಸೋಮ್‌ಗಳ ಜೊತೆ ಒಂದು ಎಕ್ಸ್-ಕ್ರೊಮೊಸೋಮ್ ಹಾಗೂ ಒಂದು ವೈ-ಕ್ರೊಮೊಸೋಮ್ (44 + 1ಎಕ್ಸ್1ವೈ = 46) ಇರುತ್ತವೆ.

ಹೆಣ್ಣು ಲೈಂಗಿಕವಾಗಿ ಪ್ರಬುದ್ಧವಾದಾಗ ಆಕೆಯ ಅಂಡಾಶಯದಲ್ಲಿ ತಿಂಗಳೊಂದಕ್ಕೆ ಒಂದು ಅಂಡಾಣು ಉತ್ಪತ್ತಿಯಾಗುತ್ತದೆ. ಅಂಡಾಣುವಿನಲ್ಲಿ 22 ಆಟೊಸೋಮ್‌ಗಳ ಜೊತೆಗೆ ಒಂದು ಎಕ್ಸ್ ಕ್ರೊಮೊಸೋಮ್ (22 + 1ಎಕ್ಸ್ = 23) ಇರುತ್ತದೆ. ಗಂಡಿನ ವೃಷಣದಲ್ಲಿ ಲಕ್ಷಾಂತರ ವೀರ್ಯಾಣುಗಳು ಉತ್ಪನ್ನವಾಗುತ್ತಿದ್ದು, ಅವುಗಳಲ್ಲಿ ಅರ್ಧ, 22 ಆಟೊಸೋಮ್‌ಗಳ ಜೊತೆ ಒಂದು ವೈ ಕ್ರೊಮೊಸೋಮ್ ಅನ್ನೂ (22 + 1ವೈ = 23) ಇನ್ನರ್ಧ 22 ಆಟೋಸೋಮ್‌ಗಳ ಜೊತೆ ಒಂದು ಎಕ್ಸ್-ಕ್ರೊಮೊಸೋಮ್‌ಅನ್ನು (22 + 1ಎಕ್ಸ್ = 23) ಪಡೆಯುತ್ತವೆ. ಗಂಡು-ಹೆಣ್ಣುಗಳು ಸಂಭೋಗವಾಗುವಾಗ ಎಕ್ಸ್ ಕ್ರೊಮೊಸೋಮ್ ಇರುವ ವೀರ್ಯಾಣು ಅಂಡಾಣುವಿನೊಂದಿಗೆ ಸಂಯೋಗ ಹೊಂದಿದರೆ ಜನಿಸುವ ಮಗು ಹೆಣ್ಣಾಗುತ್ತದೆ (22 + 1ಎಕ್ಸ್ + 22 + 1ಎಕ್ಸ್ = 44 + 2ಎಕ್ಸ್ ಅಥವಾ 46). ಅಂಡಾಣು ವೈ-ಕ್ರೊಮೊಸೋಮ್ ಇರುವ ವೀಯಾಣುವಿನೊಂದಿಗೆ ಸಂಯೋಗವಾದರೆ ಜನಿಸುವ ಮಗು ಗಂಡಾಗುತ್ತದೆ (22 + 1ಎಕ್ಸ್ + 22 + 1ವೈ = 44 + 1ಎಕ್ಸ್1ವೈ ಅಥವಾ 46 ಎಕ್ಸ್‌ವೈ).

ಜೀವಕೋಶಗಳಿಗೆ ವರ್ಣಸೇಚನ ತಂತ್ರದ ಮೂಲಕ ಬಣ್ಣ ಹಚ್ಚಿ ಸೂಕ್ಷ್ಮದರ್ಶಕದ ಅಡಿಯಲ್ಲಿ ಕ್ರೊಮೊಸೋಮ್‌ಗಳನ್ನು ನೋಡಲು ಹಾಗೂ ಗುರುತಿಸಲು ಸಾಧ್ಯವಿದೆ.

1970ರ ದಶಕದಲ್ಲಿ ಈ ತಂತ್ರದ ಮೂಲಕ ಮಾನವ ಕ್ರೊಮೊಸೋಮ್‌ಗಳನ್ನು ಅಧ್ಯಯನ ಮಾಡಿದಾಗ ಎಕ್ಸ್ -ಕ್ರೊಮೊಸೋಮ್ ಗಾತ್ರದಲ್ಲಿ ವೈ-ಕ್ರೊಮೊಸೋಮ್‌ಗಿಂತ ಹಲವಾರು ಪಟ್ಟು ದೊಡ್ಡದಿರುತ್ತದೆ ಎಂದು ಕಂಡುಬಂದಿತು. ವೈ-ಕ್ರೊಮೊಸೋಮ್ ಉಳಿದೆಲ್ಲ ಕ್ರೊಮೊ ಸೋಮ್‌ಗಳಿಗಿಂತ ಚಿಕ್ಕದು. ಅಲ್ಲದೆ ಒಂದೊಂದು ಪೀಳಿಗೆಯ ನಂತರವೂ ಅದು ಸ್ವಲ್ಪ ಭಾಗವನ್ನು ಕಳೆದುಕೊಂಡು ಇನ್ನಷ್ಟು ಚಿಕ್ಕದಾಗುತ್ತದೆ ಎಂದು ಪ್ರಯೋಗಗಳು ತಿಳಿಸಿದ್ದವು.

ಲಿಂಗ ನಿರ್ಧಾರದ ವಿಧಾನವನ್ನು ಕಂಡುಹಿಡಿದಾಗ ಎಕ್ಸ್-ಕ್ರೊಮೊಸೋಮ್ ಹೆಣ್ಣುಲಿಂಗ ನಿರ್ಧಾರಕ ಹಾಗೂ ವೈ-ಕ್ರೊಮೊಸೋಮ್ ಗಂಡುಲಿಂಗ ನಿರ್ಧಾರಕ ಎಂದು ಭಾವಿಸಲಾಗಿತ್ತು. 1970ರ ದಶಕಗಳಲ್ಲಿ, ವರ್ಣಸೇಚನ ತಂತ್ರದ ಮೂಲಕ ಕೆಲವು ಆನುವಂಶಿಕ ನ್ಯೂನತೆಗಳಿರುವ ವ್ಯಕ್ತಿಗಳ ಕ್ರೊಮೊಸೋಮ್‌ಗಳನ್ನು ಅಧ್ಯಯನ ಮಾಡಿದಾಗ ಜೀವಕೋಶಗಳಲ್ಲಿ 44 ಆಟೋಸೋಮ್‌ಗಳ ಜೊತೆ ಒಂದೇ ಎಕ್ಸ್ ಕ್ರೊಮೊಸೋಮ್ (44 + ಎಕ್ಸ್) ಇರುವ ವ್ಯಕ್ತಿಗಳಲ್ಲಿ ವೈ-ಕ್ರೊಮೊಸೋಮ್ ಇಲ್ಲದಿದ್ದರೂ ಗಂಡಿನ ಲಕ್ಷಣಗಳಿರುವುದನ್ನು ಗಮನಿಸಲಾಯಿತು. ಅದೇ ರೀತಿ ಎರಡು ಎಕ್ಸ್-ವರ್ಣತಂತುಗಳ ಜೊತೆ ವೈ-ಕ್ರೊಮೊಸೋಮ್ ಇದ್ದಾಗ (44 + 2ಎಕ್‌ಸ್‌ವೈ = 4 7) ಸ್ತ್ರೀಯ ಗುಣಲಕ್ಷಣಗಳಿದ್ದುದು ಕಂಡು ಬಂತು. ಇದರಿಂದ ವೈ-ಕ್ರೊಮೋಸೋಮ್ ಗಂಡುಲಿಂಗ ನಿರ್ಧಾರಕವಲ್ಲ ಎಂದು ತೀರ್ಮಾನಿಸಲಾಯಿತು. ಗಂಡು ಮತ್ತು ಹೆಣ್ಣಿನ ಎಕ್ಸ್ ಮತ್ತು ವೈ-ಕ್ರೊಮೋಸೋಮ್‌ಗಳ ಡಿಎನ್‌ಎ ಸರಣಿಯನ್ನು ಅಧ್ಯಯನ ಮಾಡಿದಾಗ ಹೆಣ್ಣು ಮತ್ತು ಗಂಡು ಎರಡು ಲಿಂಗಗಳನ್ನೂ ಎಕ್ಸ್ ಕ್ರೊಮೋಸೋಮ್‌ನಲ್ಲಿರುವ ಜೀನ್‌ಗಳೇ ನಿರ್ಧರಿಸುತ್ತವೆಂದು ತಿಳಿದುಬಂತು. ಆಗ ಗಾತ್ರದಲ್ಲಿ ಚಿಕ್ಕದಾದ ವೈ ಕ್ರೊಮೋಸೋಮ್‌ನಲ್ಲಿ ಯಾವುದೇ ಜೀನ್ ಇರುವುದಿಲ್ಲ, ಅದೊಂದು ನಿಷ್ಕ್ರಿಯ ಕ್ರೊಮೊಸೋಮ್ ಎಂದು ಊಹಿಸಲಾಯಿತು.

ಮಾನವನೂ ಸೇರಿದಂತೆ ಎಲ್ಲ ಜೀವಿಗಳಲ್ಲಿ ಜೀನ್‌ಗಳು ವರ್ಣತಂತುವಿನ ಮೇಲೆ ನಿಶ್ಚಿತ ಸ್ಥಳಗಳಲ್ಲಿ ಅಡಕವಾಗಿರುತ್ತವೆ ಎಂದು ಕಂಡುಹಿಡಿಯಲಾಗಿತ್ತು. 1940ರ ದಶಕದಲ್ಲಿ ಬಾರ್ಬರಾ ಮೆಕ್‌ಲಿಂಟಾಕ್ ಎಂಬಾಕೆ ಕೆಲವು ಜೀನ್‌ಗಳು ಒಂದು ಕ್ರೊಮೊಸೋಮ್‌ನಿಂದ ಇನ್ನೊಂದು ಕ್ರೊಮೊಸೋಮ್‌ಗೆ ಜಿಗಿಯಬಲ್ಲವು ಎಂದು ತೋರಿಸಿದ್ದರು; ಅವರು ತಮ್ಮ ಈ ಸಂಶೋಧನೆಗೆ 1983ರಲ್ಲಿ ನೊಬೆಲ್ ಪ್ರಶಸ್ತಿ ಪಡೆದಿದ್ದರು.

ಮಿಚಿಗನ್‌ನ ಸಂಶೋಧಕರು ಮೆಕ್ಲಿಂಟಾಕ್‌ರ ಈ ಸಂಶೋಧನೆಯನ್ನು ಬಳಸಿಕೊಂಡರು. ಇಲಿ ಮತ್ತು ಜಿಂಕೆಯ ಜೀವಕೋಶಗಳನ್ನು ಬಳಸಿಕೊಂಡು ಪ್ರಯೋಗಾಲಯದಲ್ಲಿ ಅವುಗಳನ್ನು ಕೃತಕ ಪರಿಸರದಲ್ಲಿ ಬೆಳೆಸಿ ಅವುಗಳ ಕ್ರೊಮೊಸೋಮ್‌ನಲ್ಲಿರುವ ಜೀನ್ ಸರಣಿಯನ್ನು ಅಧ್ಯಯನ ಮಾಡಿದರು. ಸಂತಾನಹೀನತೆಯ ಜೀನ್‌ಗಳು ಕೂಡ ಲಿಂಗ ನಿರ್ಧಾರಕ ಜೀನ್‌ಗಳಂತೆಯೇ ಎಕ್ಸ್-ವರ್ಣತಂತುವಿನಲ್ಲಿಯೇ ಅಡಕವಾಗಿರುತ್ತವೆಂದೂ, ಅವು ಎಕ್ಸ್-ಕ್ರೊಮೊಸೋಮ್‌ನಲ್ಲಿದ್ದಾಗ ಆ ಜೀವಿಯ ಸಂತಾನಹೀನತೆಯ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ ಎಂದು ಕಂಡುಹಿಡಿದರು.

ವೈ-ಕ್ರೊಮೊಸೋಮ್ ಒಂದೊಂದು ಪೀಳಿಗೆಯ ನಂತರವೂ ತನ್ನ ಸ್ವಲ್ಪ ಭಾಗವನ್ನು ಕಳೆದುಕೊಳ್ಳುತ್ತದೆ ಎಂದು ಕಂಡುಹಿಡಿಯಲಾಗಿತ್ತಷ್ಟೆ. ಹೀಗೆ ಪ್ರತಿಯೊಂದು ಪೀಳಿಗೆಯಲ್ಲೂ ಅದರ ಸ್ವಲ್ಪ ಭಾಗ ಊನವಾಗುತ್ತಿದ್ದರೆ ಮುಂದೊಂದು ದಿನ ವೈ ಕ್ರೊಮೊಸೋಮ್ ಸಂಪೂರ್ಣ ವಿನಾಶವಾಗಬಹುದಲ್ಲವೇ? ಮಿಚಿಗನ್ ಸಂಶೋಧಕರು ವೈ ಕ್ರೊಮೊಸೋಮ್ ತನ್ನ ಗಾತ್ರವನ್ನು ಹೇಗೆ ಪುನರ್‌ರಚಿಸಿಕೊಳ್ಳುತ್ತದೆ ಎಂದು ಕಂಡುಹಿಡಿಯಲು ಪ್ರಯತ್ನಿಸಿದರು. ತನ್ಮೂಲಕ ಅವರು ಸಂತಾನಹೀನತೆಗೆ ಸಂಬಂಧಿಸಿದ ಈ ಆಶ್ಚರ್ಯಕರ ಸಂಗತಿಯನ್ನು ಬಯಲು ಮಾಡಲು ಸಾಧ್ಯವಾಯಿತು. ಎಕ್ಸ್-ಕ್ರೊಮೊಸೋಮ್‌ನಲ್ಲಿ ಅಡಕವಾಗಿರುವ ಸಂತಾನಹೀನತೆಗೆ ಕಾರಣವಾದ ಜೀನ್‌ಗಳು ಮೊದಲು ಶಾರೀರಿಕ ಗುಣನಿರ್ಧಾರಕ ಕ್ರೊಮೊಸೋಮ್‌ಗಳ ಮೇಲೆ ಜಿಗಿಯುತ್ತವೆ ಎಂದು ತೋರಿಸಿದರು.

ಅನಂತರ ವೈ-ವರ್ಣತಂತು ಈ ಜೀನ್‌ಗಳನ್ನು ತನ್ನೆಡೆಗೆ ಸೆಳೆದುಕೊಂಡು ತನ್ನ ಗಾತ್ರವನ್ನು ಹೆಚ್ಚಿಸಿಕೊಳ್ಳುತ್ತದೆ. ಹೀಗೆ ವೈ-ಕ್ರೊಮೊಸೋಮ್ ತನ್ನ ಗಾತ್ರ ಹೆಚ್ಚಿಸಿಕೊಳ್ಳಲು ಸಂತಾನಹೀನತೆಗೆ ಕಾರಣವಾದ ಜೀನ್‌ಗಳನ್ನು ಪಡೆದು, ಅವು ಆತನ ವೈ-ಕ್ರೊಮೊಸೋಮ್‌ನಲ್ಲಿ ಅಡಕವಾದಾಗ ಆ ಪುರುಷ ಸಂತಾನಹೀನತೆಗೆ ಕಾರಣನಾಗುತ್ತಾನೆ; ಮುಂದೆ ಆತನ ಪೀಳಿಗೆಯಲ್ಲಿ ಸಂತಾನಹೀನತೆ ಉಂಟಾಗುತ್ತದೆ ಎಂಬುದು ಮಿಚಿಗನ್ ಸಂಶೋಧಕರ ಅಭಿಪ್ರಾಯ. ಅಂದರೆ ಸಂತಾನಹೀನತೆಗೆ ಹೆಣ್ಣಿಗಿಂತ ಗಂಡೇ ಹೆಚ್ಚು ಜವಾಬ್ದಾರ ಎಂದಾಯಿತಲ್ಲವೇ! ❖

# ವಿಳಂಬ, ವಿರೋಧದ ನಡುವೆ ರೋಪ್ ವೇ

**ರಾಜ್ಯ ಪ್ರವಾಸೋದ್ಯಮ ಇಲಾಖೆಯು 13 ಪ್ರವಾಸಿ ತಾಣಗಳಲ್ಲಿ ರೋಪ್ ವೇ ನಿರ್ಮಾಣ ಯೋಜನೆಯನ್ನು ತ್ವರಿತಗೊಳಿಸಲು ತೀರ್ಮಾನಿಸಿದೆ. ನಂದಿಬೆಟ್ಟಕ್ಕೆ ರೋಪ್ ವೇ ನಿರ್ಮಾಣಕ್ಕೆ ಈಗಾಗಲೇ ಅನುಮತಿ ಸಿಕ್ಕಿದ್ದು, 4.37 ಎಕರೆ ಜಮೀನನ್ನು ಅರಣ್ಯ ಇಲಾಖೆಯಿಂದ ಪಡೆಯಬೇಕಾಗಿದೆ. ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ನಿರ್ಮಾಣ ಮಾಡುವ ಪ್ರಸ್ತಾವ ದಶಕಗಳಿಂದ ಇದೆ. ತೀವ್ರ ವಿರೋಧದ ಕಾರಣಕ್ಕೆ ಯೋಜನೆ ಸ್ಥಗಿತಗೊಂಡಿದೆ. ಈಗ ಇಲಾಖೆಯು ಸರ್ಕಾರಿ, ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ರೋಪ್‌ವೇ ಯೋಜನೆಗಳು ಅರಣ್ಯ ಇಲಾಖೆ, ಪುರಾತತ್ವ ಇಲಾಖೆಗಳಿಗೆ ಸೇರಿದ ಸ್ಥಳಗಳಲ್ಲಿ ಬರುತ್ತವೆ. ಕೆಲವೆಡೆ ಯೋಜನೆಯನ್ನು ಜನರು ವಿರೋಧಿಸಿದರೆ, ಕೆಲವೆಡೆ ಬೆಂಬಲಿಸುತ್ತಿದ್ದಾರೆ. ಪ್ರವಾಸೋದ್ಯಮ ಸಚಿವ ಕೆ.ಜೆ.ಜಾರ್ಜ್ ಅವರು ಪ್ರಸ್ತಾಪಿಸಿರುವ 13 ಸ್ಥಳಗಳಲ್ಲಿನ ಯೋಜನೆಗಳ ಸದ್ಯದ ಸ್ಥಿತಿಗತಿಯ ಮಾಹಿತಿ ಇಲ್ಲಿದೆ**



## ಅರಣ್ಯ ಇಲಾಖೆಯಿಂದ ಸಿಗದ ಅನುಮತಿ

**ಹುಬ್ಬಳ್ಳಿ** ನೃಪತುಂಗ ಬೆಟ್ಟದಲ್ಲಿ ರೋಪ್ ವೇ ನಿರ್ಮಾಣಕ್ಕೆ ಬೆಟ್ಟದಲ್ಲೇ ಎರಡು ಕಡೆ ಜಾಗ ಗುರುತಿಸಲಾಗಿದೆ. ಕಾರ್ಯಸಾಧ್ಯತಾ ವರದಿ ಸಿದ್ಧವಾಗಿದೆ. ಜಾಗ ಹಸ್ತಾಂತರ ಮತ್ತು ನಿರಾಕ್ಷೇಪಣಾ ಪತ್ರಕ್ಕಾಗಿ ಅರಣ್ಯ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಆದರೆ, ಅಲ್ಲಿಂದ ಅನುಮತಿ ಸಿಗದ ಕಾರಣ ಯೋಜನೆಗೆ ಹಿನ್ನಡೆ ಆಗಿದೆ.

ಈ ಮೊದಲು ನೃಪತುಂಗ ಬೆಟ್ಟದಿಂದ ಉಣಕಲ್ ಕೆರೆವರೆಗೆ ರೋಪ್ ವೇ ನಿರ್ಮಿಸುವ ಉದ್ದೇಶವಿತ್ತು. ಆ ಮಾರ್ಗದಲ್ಲಿ ಚರ್ಚ್, ಐತಿಹಾಸಿಕ ಕಟ್ಟಡಗಳು, ರೈಲು ಮಾರ್ಗ ಇರುವುದರಿಂದ ಈ ಯೋಜನೆ ಕಾರ್ಯಸಾಧುವಲ್ಲ ಎಂದು ಕೈಬಿಡಲಾಗಿದೆ. 70.35 ಎಕರೆ ವಿಸ್ತೀರ್ಣವುಳ್ಳ ನೃಪತುಂಗ ಬೆಟ್ಟವನ್ನು ಏರಿದರೆ, ಇಡೀ ಹುಬ್ಬಳ್ಳಿಯ ನೋಟವನ್ನು ಕಣ್ತುಂಬಿಕೊಳ್ಳಬಹುದು. ಬೇವು, ನೀಲಗಿರಿ, ಶ್ರೀಗಂಧ, ಜಾಲಿ ಸೇರಿ ಕಾಡು ಜಾತಿಯ ಸಾವಿರಾರು ಮರಗಳು ಬೆಟ್ಟದಲ್ಲಿ ಇವೆ. ಹಣ್ಣಿನ ಮರಗಳೂ ಇರುವ ಕಾರಣ ವಿವಿಧ ಜಾತಿಯ ಪಕ್ಷಿಗಳು ಇಲ್ಲಿ ಬರುತ್ತವೆ.





## ಸಿಗಬೇಕಿದೆ ಪುರಾತತ್ವ ಇಲಾಖೆ ಸಮ್ಮತಿ

**ಬಳ್ಳಾರಿಯ** ಐತಿಹಾಸಿಕ ಏಕಶಿಲಾ ಬೆಟ್ಟಕ್ಕೆ ರೋಪ್ ವೇ ಅಳವಡಿಸುವ ಚರ್ಚೆ ಮೂರ್ನಾಲ್ಕು ವರ್ಷಗಳಿಂದಲೂ ಚಾಲ್ತಿಯಲ್ಲಿದೆ. 2025ರ ಮಾರ್ಚ್‌ನಲ್ಲಿ ಸ್ಥಳಕ್ಕೆ ಭೇಟಿ ನೀಡಿದ್ದ 'ಮೇ.ರೈಟ್ಸ್' ಎಂಬ ಸಂಸ್ಥೆ ಕಾರ್ಯಸಾಧ್ಯತೆಯನ್ನು ಪರಿಶೀಲನೆ ಮಾಡಿತ್ತು. ಅದಕ್ಕೂ ಹಿಂದೆ ಮುಂಬೈ ಮೂಲದ ತಜ್ಞರ ತಂಡವೊಂದು ಡ್ರೋನ್ ಸಮೀಕ್ಷೆ ನಡೆಸಿತ್ತು. ಬಳ್ಳಾರಿ ಕೋಟೆಯು ಟಿಪ್ಪು ಸುಲ್ತಾನ್ ಕಾಲಕ್ಕಿಂತಲೂ ಹಳತಾಗಿದ್ದು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ಸೇರಿದೆ. ಅಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕಿದ್ದರೆ ಇಲಾಖೆಯ ಪೂರ್ವಾನುಮತಿ ಕಡ್ಡಾಯ. ಬಳ್ಳಾರಿ ಬೆಟ್ಟಕ್ಕೆ ರೋಪ್ ವೇ ಅಳವಡಿಕೆಗೆ ಸ್ಥಳೀಯರ ವಿರೋಧವೇನೂ ಇಲ್ಲ. ಆದರೆ, ಅನುಮತಿ ಸಿಗುವುದೇ ವಿಳಂಬವಾಗುತ್ತಿದೆ ಎಂಬುದು ಅಧಿಕಾರಿಗಳ ಹೇಳಿಕೆ. ಯೋಜನೆಗಾಗಿ ಮಣ್ಣು ಪರೀಕ್ಷೆಯೂ ನಡೆದಿದೆ.



## ಗೋಕಾಕ ಜಲಪಾತ: ಮತ್ತೆ ಸರ್ವೆ

**ಬೆಳಗಾವಿ** ಜಿಲ್ಲೆಯ ಗೋಕಾಕ ಜಲಪಾತ ಕಣ್ತುಂಬಿಕೊಳ್ಳಲು ದೇಶದ ವಿವಿಧೆಡೆಯಿಂದ ಪ್ರವಾಸಿಗರ ದಂಡು ಹರಿದುಬರುತ್ತದೆ. ಇಲ್ಲಿ ಮಳೆಗಾಲದಲ್ಲಿ ಎತ್ತರದಿಂದ ನೀರು ಧುಮ್ಮಿಕ್ಕುವ ದೃಶ್ಯ ಕಣ್ತುಂಬಿಕೊಳ್ಳುವುದೇ ಹಬ್ಬ. ರೋಪ್‌ವೇ ಮೂಲಕ ಇನ್ನಷ್ಟು ಪ್ರವಾಸಿಗರನ್ನು ಸೆಳೆಯಲು ಇಲ್ಲಿ 2025ರಲ್ಲೇ ಸರ್ವೆ ಆಗಿತ್ತು.

ಆದರೆ, ಹಳೇ ಮಾದರಿಯ ರೋಪ್‌ವೇ ಅನುಸರಿಸುವುದು ಬೇಡ. ವಿದೇಶದಲ್ಲಿನ ಅತ್ಯಾಧುನಿಕ ಮಾದರಿಯಲ್ಲಿ ರೋಪ್‌ವೇ ನಿರ್ಮಿಸಬೇಕು ಎಂಬ ಬೇಡಿಕೆ ಬಂತು. ಹಾಗಾಗಿ ಆ ಮಾದರಿಯಲ್ಲಿ ಮತ್ತೊಮ್ಮೆ ಈಗ ಸರ್ವೆ ನಡೆಯುತ್ತಿದೆ. ಶೀಘ್ರ ಆ ವರದಿಯೂ ನಮ್ಮ ಕೈಸೇರಲಿದೆ ಎಂಬುದು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳ ಮಾಹಿತಿ.

## ಪರಿಸರವಾದಿಗಳ ವಿರೋಧ

**ಚಿಕ್ಕಮಗಳೂರು** ಜಿಲ್ಲೆಯಲ್ಲಿರುವ, ರಾಜ್ಯದ ಅತಿ ಎತ್ತರದ ಶಿಖರ ಮುಳ್ಳಯ್ಯನಗಿರಿಗೆ ರೋಪ್ ವೇ ನಿರ್ಮಿಸುವ ಯೋಜನೆ ಸರ್ಕಾರದ ಮುಂದೆ ಪ್ರಸ್ತಾವದ ಹಂತದಲ್ಲೇ ಇದೆ.

ಚಂದ್ರದ್ರೋಣ ಪರ್ವತ ಶ್ರೇಣಿಯಲ್ಲಿ ಮುಳ್ಳಯ್ಯನಗಿರಿ, ಸೀತಾಳಯ್ಯನಗಿರಿ, ಬಾಬಾಬುಡನ್‌ಗಿರಿ, ದೇವೀರಮ್ಮ ಬೆಟ್ಟಗಳ ಸಾಲುಗಳಿವೆ. ಈ ತಾಣಕ್ಕೆ ಪ್ರವಾಸಿಗರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಈ ತಾಣವನ್ನು ಇನ್ನಷ್ಟು ರಮಣೀಯವಾಗಿ ಪ್ರವಾಸಿಗರಿಗೆ ಪರಿಚಯಿಸುವುದು ಪ್ರವಾಸೋದ್ಯಮ ಇಲಾಖೆಯ ಉದ್ದೇಶ. 2023ರಲ್ಲಿ ಮುಳ್ಳಯ್ಯನಗಿರಿಗೆ ಭೇಟಿ ನೀಡಿದ್ದ ತಜ್ಞರ ತಂಡ ಐದು ಸ್ಥಳಗಳನ್ನು ಗುರುತು ಮಾಡಿದೆ. ಮುಳ್ಳಯ್ಯನಗಿರಿ, ಕವಿಕಲ್ ಗಂಡಿ, ದತ್ತಪೀಠ ಟವರ್ ಪಾಯಿಂಟ್, ಮಾಣಿಕ್ಯಧಾರಾ ಜಲಪಾತ, ಗಿರಿಯಿಂದ ಕೆಳಗೆ ಕಾಣಿಸುವ ರಸ್ತೆಯ ಜಂಕ್ಷನ್ ಸೇರಿ ಐದು ಕಡೆ ಸ್ಥಳ ಪರಿಶೀಲನೆ ನಡೆಸಿತ್ತು. ಸೀತಾಳಯ್ಯನಗಿರಿಯಿಂದ ಕೈಮರ ತನಕ ಪಿಪಿಪಿ (ಖಾಸಗಿ ಸಹಭಾಗಿತ್ವ) ಮಾದರಿಯಲ್ಲಿ ಈ ಯೋಜನೆ ಅನುಷ್ಠಾನ ಮಾಡುವುದಾಗಿ 2026ರ ಬಜೆಟ್‌ನಲ್ಲಿ ಮತ್ತೊಮ್ಮೆ ಹೇಳಿದೆ. ನಂತರ ರೋಪ್ ವೇ ನಿರ್ಮಾಣ ಸಂಬಂಧ ಯಾವುದೇ ಪ್ರಕ್ರಿಯೆ ಮುಂದುವರಿದಿಲ್ಲ. ಈ ಯೋಜನೆಗೆ ಪರಿಸರವಾದಿಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಅನುಷ್ಠಾನಕ್ಕೆ ಮುಂದಾದರೆ ಕಾನೂನು ಹೋರಾಟ ನಡೆಸುವ ಎಚ್ಚರಿಕೆಯನ್ನೂ ನೀಡಿದ್ದಾರೆ.



## ಜೀವವೈವಿಧ್ಯದ ತಾಣದಲ್ಲಿ ನಿರ್ಮಾಣ

**ಕೊಡಗು** ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಮಲ್ಲಳ್ಳಿ ಜಲಪಾತದ ವ್ಯಾಪ್ತಿಯಲ್ಲಿ ₹550 ಕೋಟಿ ವೆಚ್ಚದ ರೋಪ್ ವೇ ಯೋಜನೆಗೆ ಅನುಮತಿ ಪಡೆಯುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಅರಣ್ಯ ಇಲಾಖೆಯ ಪರಿವೇಶ್ ತಂತ್ರಾಂಶದಲ್ಲಿ ಅರ್ಜಿ ಹಾಕಲಾಗಿದ್ದು, ಇಲಾಖೆಯ ಅನುಮತಿ ದೊರೆತ ಕೂಡಲೇ ಕಾಮಗಾರಿ ಆರಂಭವಾಗಲಿದೆ. ಇದು ಒಂದರಿಂದ ಒಂದೂವರೆ ಕಿ.ಮೀ ಉದ್ದದ ರೋಪ್ ವೇ ಆಗಿದ್ದು, ಬೆಟ್ಟದ ಮೇಲಿಂದ ಕೆಳಗೆ, ಕೆಳಗಿಂದ ಮೇಲೆ ಹೋಗುವಂತಹ ವ್ಯವಸ್ಥೆ ಇರಲಿದೆ. ಪ್ರಯಾಣದ ಅವಧಿ 20 ನಿಮಿಷ.

ಯೋಜನೆಯು ಉತ್ತರ ಕೊಡಗಿನ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲಿದೆ ಎಂಬ ನಿರೀಕ್ಷೆ ಸ್ಥಳೀಯರದ್ದು. ಆದರೆ, ಈ ಪ್ರದೇಶವು ಅಪಾರವಾದ ಅರಣ್ಯ ಸಂಪತ್ತನ್ನು ಮಾತ್ರವಲ್ಲ, ಅಪರೂಪದ ಜೀವವೈವಿಧ್ಯವನ್ನು ಹೊಂದಿರುವ ತಾಣ. ಇಲ್ಲಿ ಈ ಯೋಜನೆ ಬೇಡವೇ ಬೇಡ ಎಂಬುದು ಪರಿಸರವಾದಿಗಳ ಒತ್ತಾಯ.



## ಹೈಟೆನ್ಷನ್ ವಿದ್ಯುತ್ ಮಾರ್ಗ ಅಡ್ಡಿ


**ಬೆಳಗಾವಿ** ಜಿಲ್ಲೆಯ ಸವದತ್ತಿ ತಾಲ್ಲೂಕಿನ ಯಲ್ಲಮ್ಮನಗುಡ್ಡದಲ್ಲಿ ರೋಪ್ ವೇ ನಿರ್ಮಾಣಕ್ಕೆ ಎರಡು ಬಾರಿ ಸರ್ವೆ ಮಾಡಲಾಗಿತ್ತು. ಆದರೆ, ಗುರುತಿಸಲಾಗಿದ್ದ ಜಾಗದಲ್ಲಿ ಹೈಟೆನ್ಷನ್ ವಿದ್ಯುತ್ ಮಾರ್ಗ ಇದ್ದುದರಿಂದ ಮತ್ತು ಕೇಂದ್ರ ಸರ್ಕಾರವು ಗುಡ್ಡದ ಪರಿಸರದಲ್ಲಿ ಬೇರೆ ಬೇರೆ ಯೋಜನೆ ಅನುಷ್ಠಾನಕ್ಕೆ ತರುತ್ತಿರುವುದರಿಂದ ಅವುಗಳೊಂದಿಗೆ ಈ ಯೋಜನೆಯನ್ನೂ ಮಾಡುವ ಕಾರಣಕ್ಕೆ ರೋಪ್‌ವೇ ನಿರ್ಮಾಣ ವಿಳಂಬವಾಗಿದೆ ಎಂಬುದು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳ ಮಾತು.

'ಈಗ ಗುಡ್ಡದ ಪರಿಸರದಲ್ಲಿ ಖಾಸಗಿ ಕಂಪನಿಯವರು ಮೂರನೇ ಬಾರಿ ಸರ್ವೆ ಮಾಡಿದ್ದಾರೆ' ಎಂದು ಅವರು ಹೇಳುತ್ತಾರೆ.

## ಯುನೆಸ್ಕೊ ನಿಯಮಗಳೇ ತೊಡಕು

**ಹನುಮ** ಜನಿಸಿದ ನಾಡು ಎನ್ನುವ ಐತಿಹ್ಯ ಹೊಂದಿರುವ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಚಿಕ್ಕರಾಂಪುರದ ಅಂಜನಾದ್ರಿ ಬೆಟ್ಟವನ್ನು ಭಕ್ತರು ಸುಲಭವಾಗಿ ಹತ್ತಲು ರೋಪ್ ವೇ ಬದಲು ಕೇಬಲ್ ರೈಲು ಸೌಲಭ್ಯ ಕಲ್ಪಿಸಲು ಸಿದ್ಧತೆ ನಡೆಯುತ್ತಿದ್ದು, ಇದಕ್ಕೆ ಯುನೆಸ್ಕೊ ನಿಯಮಗಳೇ ಅಡ್ಡಿಯಾಗುತ್ತಿವೆ.

ಅಂಜನಾದ್ರಿ ಬೆಟ್ಟವು ಯುನೆಸ್ಕೊದ ವಿಶ್ವ ಪಾರಂಪರಿಕ ತಾಣವಾಗಿರುವ ಹಂಪಿಯ ಬಫರ್ ವಲಯದಲ್ಲಿ ಬರುವುದರಿಂದ ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ಅಭಿವೃದ್ಧಿ ಮಾಡಬೇಕಾಗಿದೆ. ಈ ಮೊದಲು ಪಿಪಿಪಿ ಮಾದರಿಯಲ್ಲಿ 450 ಮೀಟರ್ ಉದ್ದದ ರೋಪ್ ವೇ ಮಾಡಿ ಇದರಲ್ಲಿ ಒಂದು ಗಂಟೆಗೆ 800 ಭಕ್ತರು ಅಂಜನಾದ್ರಿ ದರ್ಶನ ಪಡೆಯಲು ವ್ಯವಸ್ಥೆ ಮಾಡುವ ಯೋಜನೆ ರೂಪಿಸಲಾಗಿತ್ತು. ಈಗ ಕೇಬಲ್ ರೈಲು ಬಗ್ಗೆ ಕಾರ್ಯಸಾಧ್ಯತಾ ವರದಿ ತಯಾರಿಸಿ ಕೊಡಲಾಗಿದ್ದು, ಇದಕ್ಕೂ ಯುನೆಸ್ಕೊ ಆಕ್ಷೇಪ ವ್ಯಕ್ತಪಡಿಸಿ ಹಲವು ಪ್ರಶ್ನೆಗಳನ್ನು ಕೇಳಿದೆ. ಕೇಬಲ್ ರೈಲು ಅಳವಡಿಸಿದರೆ ಅಷ್ಟೊಂದು ತೂಕ ತಡೆಯುವ ಸಾಮರ್ಥ್ಯ ಬೆಟ್ಟ ಹೊಂದಿದೆಯೇ ಎನ್ನುವುದರ ಬಗ್ಗೆಯೂ ಅಧ್ಯಯನ ನಡೆಯುತ್ತಿದೆ. ಬೆಟ್ಟ ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿರುವ ಕಾರಣ ಆ ಇಲಾಖೆಯ ಅನುಮತಿಯೂ ಅಗತ್ಯವಾಗಿದೆ.




ಮಾಹಿತಿ: ಬ್ಯೂರೊಗಳಿಂದ

## ಮಧುಗಿರಿ ಬೆಟ್ಟ: ಇನ್ನೂ ಪ್ರಸ್ತಾವದ ಹಂತದಲ್ಲಿ

**ತುಮಕೂರಿನಿಂದ** 43 ಕಿ.ಮೀ. ದೂರದಲ್ಲಿರುವ ಮಧುಗಿರಿ ಬೆಟ್ಟ ಸಾಹಸಪ್ರಿಯ ಚಾರಣಿಗರ ನೆಚ್ಚಿನ ತಾಣ. ಕಡಿದಾದ ಬೆಟ್ಟವನ್ನು ಏರಿ ಕೋಟೆಯ ತುದಿ ತಲುಪಿದರೆ ರಮಣೀಯ ದೃಶ್ಯಗಳನ್ನು ಕಾಣಬಹುದು. ಅತಿದೊಡ್ಡ ಏಕಶಿಲಾ ಬೆಟ್ಟಕ್ಕೆ ರೋಪ್ ವೇ ನಿರ್ಮಾಣ ಮಾಡಬೇಕು ಎಂಬುದು ಇಲ್ಲಿನ ಜನರ ಹಲವು ವರ್ಷಗಳ ಬೇಡಿಕೆಯಾಗಿತ್ತು. ಈಗ ರಾಜ್ಯ ಸರ್ಕಾರ ರೋಪ್ ವೇ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಮುಂದಾಗಿರುವುದು ಜನರಿಗೆ ಸಂತಸ ತರಿಸಿದೆ.

ಬೆಟ್ಟದ ಕೆಳ ಭಾಗದಲ್ಲಿ ನಾಲ್ಕು ಗುಹೆ, 11 ಸುಂದರ ಗೋಡೆ, ಭೀಮನ ದೊಣೆ, ನವಿಲು ದೊಣೆ, ಕುದುರೆ ಲಾಯ, ಶಸ್ತ್ರಾಸ್ತ್ರ ಸಂಗ್ರಹ ಉಗ್ರಾಣ, ಅರಮನೆ, ಕಲ್ಲಿನ ಕೋಟೆ, ಗುಮ್ಮಟ, ಕಣಜಗಳು ಸೇರಿದಂತೆ ಅನೇಕ ತಾಣಗಳಿವೆ. ಪ್ರವೇಶದ್ವಾರ 25 ಅಡಿ ಎತ್ತರ ಮತ್ತು 17 ಅಡಿ ಅಗಲವಿದೆ. ಬೆಟ್ಟವು ತುಂಬಾ ಕಡಿದಾಗಿದ್ದು, ಮಹಿಳೆಯರು, ಮಕ್ಕಳು, ವೃದ್ಧರು ಏರುವುದು ಕಷ್ಟಸಾಧ್ಯ. 2015-16ನೇ ಸಾಲಿನ ಬಜೆಟ್‌ನಲ್ಲಿ ರೋಪ್ ವೇ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಬೆಟ್ಟದ ಬಳಿ 9 ಎಕರೆ ಜಾಗವನ್ನು ಮೀಸಲಿಡಲಾಗಿತ್ತು. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್ಐ) ಅಧಿಕಾರಿಗಳು ಸ್ಥಳ ವೀಕ್ಷಣೆ ಮಾಡಿ ಹೋಗಿದ್ದಾರೆ. ಏಕಶಿಲಾ ಬೆಟ್ಟಕ್ಕೆ ರೋಪ್ ವೇ ಆದರೆ ಜಿಲ್ಲೆಯ ಪ್ರವಾಸೋದ್ಯಮದ ಚಹರೆ ಬದಲಾಗಲಿದೆ. ಬೆಂಗಳೂರು ಸಮೀಪದಲ್ಲಿರುವುದರಿಂದ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಬಹುದು ಎಂಬ ಲೆಕ್ಕಾಚಾರ ಪ್ರವಾಸೋದ್ಯಮ ಇಲಾಖೆಯದ್ದು.



## ಯಾದಗಿರಿ: ಸ್ಥಳ ಪರಿಶೀಲನೆ

**ಯಾದಗಿರಿ** ಜಿಲ್ಲೆಯ ಐತಿಹಾಸಿಕ ಯಾದಗಿರಿ ಕೋಟೆ ಹಾಗೂ ಧಾರ್ಮಿಕ ಕ್ಷೇತ್ರವಾದ ಮೈಲಾಪುರದ ಮೈಲಾರಲಿಂಗೇಶ್ವರ ದೇವಸ್ಥಾನಕ್ಕೆ ರೋಪ್ ವೇ ನಿರ್ಮಾಣಕ್ಕಾಗಿ ರೈಟ್ಸ್ ಸಂಸ್ಥೆ ತಂಡ ಮೂರು ಬಾರಿ ಸ್ಥಳ ಪರಿಶೀಲನೆ ಮಾಡಿದೆ. ಈ ಹಿಂದೆ, ಯಾದಗಿರಿ ಕೋಟೆಗೆ ರೋಪ್ ವೇ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿತ್ತು.

ಆದರೆ, ಆ ಕಾಮಗಾರಿ ಏಕೆ ಮುಂದುವರಿಯಲಿಲ್ಲ ಎಂಬುದರ ಬಗ್ಗೆ ಅಧಿಕಾರಿಗಳಿಗೂ ಮಾಹಿತಿ ಇಲ್ಲ. ಎರಡೂ ಬೆಟ್ಟಗಳಿಗೆ ಯಾವ ಸ್ಥಳದಲ್ಲಿ ರೋಪ್ ವೇ ನಿರ್ಮಾಣ ಮಾಡಬೇಕು, ರಸ್ತೆ ಮತ್ತು ವಿದ್ಯುತ್ ಸಂಪರ್ಕದಂತಹ ಮಾಹಿತಿಯನ್ನು ರೈಟ್ಸ್ ಸಂಸ್ಥೆ ತಂಡದವರು ಕಲೆ ಹಾಕಿಕೊಂಡು ಹೋಗಿದ್ದಾರೆ ಎಂದು ಹೇಳುತ್ತಾರೆ ಅಧಿಕಾರಿಗಳು.

ಯಾದಗಿರಿ ಕೋಟೆಯು ಐದು ಸುತ್ತುಗಳನ್ನು ಒಳಗೊಂಡಿದ್ದು, ಕಲ್ಯಾಣ ಚಾಲುಕ್ಯರ, ಯಾದವರ, ಚೋಳರ, ಬಹಮನಿ ಸುಲ್ತಾನರ, ಆದಿಲ್‌ಶಾಹಿ ಹಾಗೂ ಹೈದರಾಬಾದ್ ನಿಜಾಮರ ಆಡಳಿತಕ್ಕೆ ಒಳಪಟ್ಟಿತ್ತು. ಮೈಲಾಪುರದ ಬೆಟ್ಟದ ಮೇಲಿನ ಮೈಲಾರಲಿಂಗೇಶ್ವರ ಗುಹಾಂತರ ದೇವಸ್ಥಾನಕ್ಕೆ ಕರ್ನಾಟಕ ಮಾತ್ರವಲ್ಲದೆ ನೆರೆಯ ಮಹಾರಾಷ್ಟ್ರ, ತೆಲಂಗಾಣ, ಆಂಧ್ರ ಪ್ರದೇಶದಿಂದಲೂ ಲಕ್ಷಾಂತರ ಭಕ್ತರು ಬರುತ್ತಾರೆ. ಮಕರ ಸಂಕ್ರಾಂತಿಯ ಜಾತ್ರೆಗೆ ಲಕ್ಷಾಂತರ ಭಕ್ತರು ಸೇರುತ್ತಾರೆ.

## ಗದಗದಲ್ಲಿ ಮಿಶ್ರ ಪ್ರತಿಕ್ರಿಯೆ

**ಗದಗ** ಜಿಲ್ಲೆಯ ಗಜೇಂದ್ರಗಡದಲ್ಲಿರುವ ಕಾಲಕಾಲೇಶ್ವರ ದೇವಸ್ಥಾನ ಹಾಗೂ ಶಿರಹಟ್ಟಿಯಲ್ಲಿರುವ ಹೊಲಾಳಮ್ಮ ದೇವಸ್ಥಾನಕ್ಕೆ ರೋಪ್ ವೇ ನಿರ್ಮಿಸಲು ಖಾಸಗಿ ಸಂಸ್ಥೆಯು 6 ತಿಂಗಳ ಹಿಂದೆಯೇ ಸರ್ವೆ ನಡೆಸಿದೆ. ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ. ಮೂರು ಹಂತದಲ್ಲಿ ಯೋಜನೆ ಅನುಷ್ಠಾನಕ್ಕೆ ಯೋಜಿಸಲಾಗಿದೆ. ಎರಡು ಯೋಜನೆಗಳಿಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

'ಕಾಲಕಾಲೇಶ್ವರ ದೇವಸ್ಥಾನವು ಗುಹಾಂತರ ದೇವಾಲಯವಾಗಿದೆ. ರೋಪ್ ವೇ ಮಾಡಲು ಗುಡ್ಡ ಅಗೆಯಬೇಕಿದ್ದು, ನೈಸರ್ಗಿಕ ಸೌಂದರ್ಯ ಹಾಳಾಗುತ್ತದೆ. ದೇವಸ್ಥಾನದ ಸಮೀಪದವರೆಗೆ ಕಚ್ಚಾ ರಸ್ತೆ ಇದೆ. ಅಲ್ಲಿಂದ 30 ಮೆಟ್ಟಿಲಷ್ಟೇ ಹತ್ತಬೇಕಿದೆ. ರೋಪ್ ವೇ ಬದಲು ರಸ್ತೆ ಅಭಿವೃದ್ಧಿ ಮಾಡಲಿ.' ಎಂಬುದು ದೇವಸ್ಥಾನ ಟ್ರಸ್ಟಿ ಮಂಗಲಾ ಘೋರ್ಪಡೆ ದೇಶಮುಖ್ ಅಭಿಪ್ರಾಯ.



'ಹೊಲಾಳಮ್ಮ ದೇವಸ್ಥಾನವು ಮುಜರಾಯಿ ಇಲಾಖೆಯದ್ದು. ರೋಪ್ ವೇ ಮಾಡಿದರೆ ಹೆಚ್ಚಿನ ಅಭಿವೃದ್ಧಿ ಆಗುತ್ತದೆ' ಎಂದು ದೇವಸ್ಥಾನ ಟ್ರಸ್ಟ್ ಸಮಿತಿ ಅಧ್ಯಕ್ಷ ದಾಮೋಜಿ ತೆಗ್ಗಿಹಳ್ಳಿ ಹೇಳಿದರು.

## ದೇವರಗುಡ್ಡ ಭಕ್ತರ ಹರ್ಷ

**ಹಾವೇರಿ** ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ದೇವರಗುಡ್ಡದ ಮಾಲತೇಶ ದೇವಸ್ಥಾನವು ಪುರಾತನ ಹಿನ್ನೆಲೆ ಹೊಂದಿದ್ದು, ನಿತ್ಯವೂ ನೂರಾರು ಭಕ್ತರು ಕ್ಷೇತ್ರಕ್ಕೆ ಭೇಟಿ ನೀಡುತ್ತಾರೆ. ದೇವರ ದರ್ಶನಕ್ಕೆ ನಡೆದುಕೊಂಡು ಹೋಗಬೇಕು. ಜಾತ್ರೆ ಹಾಗೂ ವಿಶೇಷ ದಿನಗಳ ಸಂದರ್ಭದಲ್ಲಿ ವೃದ್ಧರು, ಗುಡ್ಡ ಏರಲು ಕಷ್ಟಪಡುತ್ತಾರೆ. ಹೀಗಾಗಿ, ಗುಡ್ಡದಲ್ಲಿ ರೋಪ್ ವೇ ಮಾಡಬೇಕೆಂಬುದು ಹಲವು ವರ್ಷಗಳ ಬೇಡಿಕೆಯಾಗಿತ್ತು. ಗುಡ್ಡ ಪ್ರದೇಶದಲ್ಲಿರುವ ಈ ಕ್ಷೇತ್ರದಲ್ಲಿ ರೋಪ್ ವೇ ನಿರ್ಮಿಸಲು ರಾಜ್ಯ ಸರ್ಕಾರ ಮುಂದಾಗಿರುವುದಕ್ಕೆ ಭಕ್ತರು ಹರ್ಷ ವ್ಯಕ್ತಪಡಿಸಿದ್ದಾರೆ.

ಕೆಲವು ವರ್ಷಗಳ ಹಿಂದೆ ಬೆಟ್ಟದಲ್ಲಿ ವಿವಿಧ ಅಭಿವೃದ್ಧಿ ಕೆಲಸಕ್ಕೂ ಚಾಲನೆ ನೀಡಲಾಗಿತ್ತು. ಆದರೆ, ಭಕ್ತರ ನಿರ್ಗಮನದ ಮೇಲ್ಸೇತುವೆ ಕಾಮಗಾರಿ ಅರ್ಧಕ್ಕೆ ನಿಂತು ಎರಡು ವರ್ಷವಾಗಿದೆ. ಇದರಿಂದಾಗಿ ಭಕ್ತರು ದಟ್ಟಣೆಯಲ್ಲಿ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಈಗ ರೋಪ್ ವೇ ನಿರ್ಮಾಣದ ಬಗ್ಗೆಯೂ ರಾಜ್ಯ ಸರ್ಕಾರ ಒಲವು ತೋರಿದೆ.

## ಪದಬಂಧ 15


ಅ.ನಾ.ಪ್ರಹ್ಲಾದರಾವ್

**ಎಡದಿಂದ ಬಲಕ್ಕೆ**

1. ತಿರುಮಲೆಯಲ್ಲಿ ಬೆಳ್ಳಂಬೆಳಗು ಭಕ್ತಾದಿಗಳಿಗೆ ಸಿಗುವ ಸೇವೆ (7)
3. ಅವಸರದಿಂದ ಹರಕು ಬಟ್ಟೆಯಲ್ಲಿ ಕಟ್ಟಿ ತಂದ ಸರಂಜಾಮು (3)
5. ಲಾವಣಿ ಹೇಳುವ ಕಣಿ ಕೇಳುವ ವ್ಯಾಪಾರಿ (3)
6. ಇವನ ಪುತ್ರ ಯಮನಾದರೆ ಇವನು ಸೂರ್ಯ (2)
7. ನಡೆಯುತ್ತಲೇ ಇರುವ ಜನರೆಲ್ಲರ ಹುಟ್ಟು (3)
8. ಸಮುದ್ರಮಥನದಲ್ಲಿ ಶಿವ ವಿಶೇಷವಾಗಿ ಸೇವಿಸಿದ ನಂಜು (2)
10. ತೂಕ ಮಾಡುತ್ತಾ ಬಂದ ರಾಶಿ (2)
12. ಸಕಲ ಕಡೆ ಅಲ್ಲವಾದರೂ ಹಲವು ಕಡೆಯ ಜಗಳ (3)
14. ಸುರೇಖ ನೆಮ್ಮದಿಯಿಂದ ಅನುಭವಿಸಿದ ಸಂತೋಷ (2)
15. ಶತಭಿಶ ನಕ್ಷತ್ರವಾಗಿ ಬಂದ ವರುಣನ ಸತಿ (3)
16. ಮಳೆಯಾಗಿಯೂ ಸುರಿಯುವ ನಕ್ಷತ್ರದಲ್ಲಿ ಬಂದ ಸುಬ್ರಹ್ಮಣ್ಯ (3)
17. ಮುದ್ರೆ ಹಾಕುತ್ತಾ ಕಡಲತಡಿಯಲ್ಲಿ ಬದುಕುವ ಈತನೇ ಮೇಲು (7)

**ಮೇಲಿನಿಂದ ಕೆಳಕ್ಕೆ**

1. ಕುಳಿತುಕೊಳ್ಳಲು ಸಂತಸ ನೀಡುವ ಪೀಠ (4)
2. ಗಡ್ಡ ಬಿಟ್ಟು ಬ್ಯಾಗು ಧರಿಸಿದ ಆಧುನಿಕ ಕಾವ್ಯ ರಚನೆಗಾರ (4)
4. ಜಾತಕದಲ್ಲಿ ದೋಷ ತಂದು ಕೊಡುವ ಅಂಗಾರಕ (2)
5. ಅವನ ಮನೆಯ ಪಕ್ಕದಲ್ಲಿನ ಉದ್ಯಾನ (2)
6. ಇನಿಯನ ಸಮಯ ಗೆಳತಿಗೂ ಬೇಕು ಸ್ವಲ್ಪ (3)
9. ಆರು ವದನಗಳ ಶಿವಪುತ್ರ ಷಡಾನನ (3)
11. ಜ್ವಾಲಾಮುಖಿಯಿಂದ ಪ್ರವಹಿಸುವ ಖನಿಜಯುಕ್ತ ಬಿಸಿ ದ್ರವ (4)
12. ಕಲ್ಯಾಣಿಯ ಬಳಿ ಕುಳಿತ ಹೆಂಗಸು ಹೇಳಿದ ಭವಿಷ್ಯ (2)
13. ಹೋಮದಲ್ಲಿ ದೇವತೆಗಳಿಗೆ ಆಹುತಿಯಾಗಿ ನೀಡುವ ಚರು (2)
14. ದೇವಾಲಯದ ಗರ್ಭಗುಡಿಯ ಮುಂದಿನ ಅಂಕಣ (4)



Publication Date
15/07/2026

# ಭಾರತ–ಬ್ರಿಟನ್ ಎಫ್‌ಟಿಎ ಇಂದಿನಿಂದ

## ಭಾರತದ ಸರಕುಗಳಿಗೆ ಸುಂಕರಹಿತವಾಗಿ ಬ್ರಿಟನ್ ಮಾರುಕಟ್ಟೆ ಪ್ರವೇಶ ಅವಕಾಶ

ನವದೆಹಲಿ (ಪಿಟಿಐ): ಭಾರತ ಮತ್ತು ಬ್ರಿಟನ್ ನಡುವಿನ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದವು (ಸಿಇಟಿಎ) ಬುಧವಾರದಿಂದ (ಜುಲೈ 15) ಜಾರಿಗೆ ಬರಲಿದೆ. ಈ ಒಪ್ಪಂದಕ್ಕೆ ಎರಡೂ ದೇಶಗಳು ಕಳೆದ ವರ್ಷದ ಜುಲೈ 25ರಂದು ಸಹಿ ಹಾಕಿದ್ದವು.

ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಅನುಷ್ಠಾನಕ್ಕೆ ತರುತ್ತಿರುವ ಆರನೆಯ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಇದು. ಮಾರಿಷಸ್, ಯುಎಇ, ಆಸ್ಟ್ರೇಲಿಯಾ, ಯುರೋಪಿನ ಮುಕ್ತ ವ್ಯಾಪಾರ ಸಂಘಟನೆ (ಇಎಫ್‌ಟಿಎ) ಮತ್ತು ಒಮಾನ್ ಜೊತೆ ಮುಕ್ತ ವ್ಯಾಪಾರ ಒಪ್ಪಂದ ಈವರೆಗೆ ಜಾರಿಗೆ ಬಂದಿವೆ.

ಬ್ರಿಟನ್ ಜೊತೆಗಿನ ಒಪ್ಪಂದದ ಕಾರಣದಿಂದಾಗಿ ಭಾರತದ ಸರಿಸುಮಾರು ಶೇ 99ರಷ್ಟು ಸರಕುಗಳಿಗೆ ಬ್ರಿಟನ್ ಮಾರುಕಟ್ಟೆಗೆ ಸುಂಕರಹಿತವಾಗಿ ಪ್ರವೇಶ ಲಭ್ಯವಾಗಲಿದೆ.

**ಭಾರತದ ಗ್ರಾಹಕರಿಗೆ ಹಾಗೂ ಉದ್ದಿಮೆಗಳಿಗೆ ಏನು ಪ್ರಯೋಜನ?:** ಕಾರ್ಮಿಕರ ಶ್ರಮ ಹೆಚ್ಚಿನ ಮಟ್ಟದಲ್ಲಿ ಅಗತ್ಯವಿರುವ ಜವಳಿ, ವಸ್ತ್ರ, ಪಾದರಕ್ಷೆ, ನೆಲಹಾಸು, ಸಂಸ್ಕರಿಸಿದ ಆಹಾರ, ಧಾನ್ಯಗಳು ತರಕಾರಿಗಳು, ಹಣ್ಣು ಮತ್ತು ಸಂಬಾರ ಪದಾರ್ಥಗಳು, ಮೀನು, ಮಾಂಸ, ಸಂಸ್ಕರಿಸಿದ ಉತ್ಪನ್ನಗಳು ಇನ್ನು ಮುಂದೆ ಭಾರತದಿಂದ ಬ್ರಿಟನ್ ಮಾರುಕಟ್ಟೆಯನ್ನು ಶೂನ್ಯ ಸುಂಕದೊಂದಿಗೆ ಪ್ರವೇಶಿಸಲಿವೆ.

ಬ್ರಿಟನ್ನಿನ ಯಂತ್ರೋಪಕರಣಗಳು, ಎಲೆಕ್ಟ್ರಾನಿಕ್ಸ್ ಉಪಕರಣಗಳು, ಚಾಕಲೇಟ್, ಲಘು ಪಾನೀಯಗಳು, ಸೌಂದರ್ಯ ವರ್ಧಕಗಳು ಮತ್ತಿತರ ಉತ್ಪನ್ನಗಳಿಗೆ ಭಾರತದ ಮಾರುಕಟ್ಟೆಯಲ್ಲಿ ಬೆಲೆ ಕಡಿಮೆ ಆಗುವ ನಿರೀಕ್ಷೆ ಇದೆ.

### ಬೆಳ್ಳಿ ಸುಂಕ ಇಳಿಕೆ



ಬ್ರಿಟನ್ನಿನಿಂದ ಭಾರತಕ್ಕೆ ಆಮದು ಆಗುವ ಬೆಳ್ಳಿಯ ಮೇಲಿನ ಸುಂಕವನ್ನು ಭಾರತವು ಹತ್ತು ವರ್ಷಗಳಲ್ಲಿ ಶೂನ್ಯಕ್ಕೆ ತಗ್ಗಿಸಲಿದೆ.

### ಕಾರುಗಳಿಗೆ ಕಡಿಮೆ ಸುಂಕ

ಬ್ರಿಟನ್ನಿನಲ್ಲಿ ಪೂರ್ತಿಯಾಗಿ ತಯಾರಾದ ಕಾರುಗಳು ಹಾಗೂ ಟ್ರಕ್ಕುಗಳ ಮೇಲಿನ ಆಮದು ಸುಂಕ ಶೇ 110ರಷ್ಟು ಇರುವುದನ್ನು ಹಂತ ಹಂತವಾಗಿ ಶೇ 10ಕ್ಕೆ ತಗ್ಗಿಸಲು ಭಾರತ ಒಪ್ಪಿದೆ. ಪೆಟ್ರೋಲ್ ಹಾಗೂ ಡೀಸೆಲ್ ವಾಹನಗಳಿಗೆ ಆರಂಭದಿಂದಲೇ ವಿನಾಯಿತಿ ಸಿಗಲಿದೆ. ಇ.ವಿ., ಹೈಬ್ರಿಡ್ ಹಾಗೂ ಜಲಜನಕ ಚಾಲಿತ ಕಾರುಗಳಿಗೆ ಆರನೆಯ ವರ್ಷದಿಂದ ಕೆಲವು ಅನುಕೂಲಗಳು ಸಿಗಲಿವೆ.

ಭಾರತದ ಇ.ವಿ., ಹೈಬ್ರಿಡ್ ಹಾಗೂ ಜಲಜನಕ ಚಾಲಿತ ಕಾರುಗಳಿಗೆ ಬ್ರಿಟನ್ನಿನಲ್ಲಿ ಕೋಟಾ ಮಿತಿಯಲ್ಲಿ ಶೂನ್ಯ ಸುಂಕದ ಪ್ರಯೋಜನ ಸಿಗಲಿದೆ. ಇವುಗಳಿಗೆ ಈವರೆಗೆ ಅಲ್ಲಿ ಶೇ 10ರಷ್ಟು ಸುಂಕ ವಿಧಿಸಲಾಗುತ್ತಿತ್ತು.

### ಮದ್ಯದ ಬೆಲೆ ಇಳಿಕೆ ನಿರೀಕ್ಷೆ

ಬ್ರಿಟನ್ನಿನಿಂದ ಆಮದು ಆಗುವ ಪ್ರೀಮಿಯಂ ಗುಣಮಟ್ಟದ ಮದ್ಯದ (ಬ್ರ್ಯಾಂಡಿ, ರಮ್, ಜಿನ್, ವೊಡ್ಕಾ, ಟಕಿಲಾ ಇತ್ಯಾದಿ) ಮೇಲಿನ ಸುಂಕ ಕಡಿಮೆ ಆಗಲಿದೆ. ಸ್ಕಾಚ್ ವಿಸ್ಕಿ ಮೇಲಿನ ಸುಂಕವು ಶೇ 150ರಷ್ಟು ಇರುವುದು ಆರಂಭದಲ್ಲಿ ಶೇ 75ಕ್ಕೆ ಇಳಿಯಲಿದೆ. ಹತ್ತನೆಯ ವರ್ಷದ ಹೊತ್ತಿಗೆ ಶೇ 40ಕ್ಕೆ ಇಳಿಕೆ ಆಗಲಿದೆ.

ಬ್ರಿಟನ್ನಿನಿಂದ ಭಾರತಕ್ಕೆ ಆಮದು ಆಗುವ ತಾಜಾ ಸೇಬು, ವಾಲ್ನಟ್, ಚಿನ್ನದ ಗಟ್ಟಿ, ಸ್ಮಾರ್ಟ್‌ಫೋನ್‌ಗಳಿಗೆ ಭಾರತ ವಿನಾಯಿತಿ ನೀಡಿಲ್ಲ.

### ಐ.ಟಿ. ಕಂಪನಿಗಳಿಗೆ ಅನುಕೂಲ

ಬ್ರಿಟನ್ನಿನಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಭಾರತೀಯ ಕಂಪನಿಗಳು, ಅಲ್ಲಿನ ಕೆಲಸಗಳಿಗೆ ಭಾರತದಿಂದ ನೌಕರರನ್ನು ಕರೆದೊಯ್ದಾಗ, ಐದು ವರ್ಷಗಳವರೆಗೆ ಅಲ್ಲಿ ಸಾಮಾಜಿಕ ಭದ್ರತಾ ಕೊಡುಗೆ ನೀಡುವ ಅಗತ್ಯ ಇರುವುದಿಲ್ಲ. ಈ ಕ್ರಮದಿಂದಾಗಿ ಇನ್ಫೊಸಿಸ್, ಟಿಸಿಎಸ್‌ನಂತಹ ಐ.ಟಿ ಸೇವಾ ಕಂಪನಿಗಳಿಗೆ ಅನುಕೂಲ ಆಗಲಿದೆ ಎನ್ನಲಾಗಿದೆ.



### ರಾಜ್ಯಕ್ಕೆ ಏನು ಲಾಭ?

**ಬೆಂಗಳೂರು:** ಭಾರತ–ಬ್ರಿಟನ್ ನಡುವಿನ ಒಪ್ಪಂದದಿಂದಾಗಿ ಚಿಕ್ಕಮಗಳೂರಿನ ಕಾಫಿ, ಬ್ಯಾಡಗಿಯ ಮೆಣಸು, ಇಂಡಿಯ ನಿಂಬೆಹಣ್ಣು, ಮೈಸೂರಿನ ರೇಷ್ಮೆ, ಕರಾವಳಿಯ ಸೀಗಡಿಗೆ ಕೂಡ ಉತ್ತಮವಾದ ರಫ್ತು ಮಾರುಕಟ್ಟೆ ಲಭ್ಯವಾಗಲಿದೆ.

ಇವುಗಳ ಜೊತೆಗೆ ಧಾರವಾಡದ ಪೇಡಾ, ಕೊಡಗಿನ ಸಂಬಾರ ಪದಾರ್ಥಗಳು ಕೂಡ ಬ್ರಿಟನ್ನಿನ ಮಾರುಕಟ್ಟೆಗೆ ಸುಂಕ ಇಲ್ಲದೆ ಪ್ರವೇಶ ಪಡೆಯಲಿವೆ. ರಾಜ್ಯದ ಎಣ್ಣೆಕಾಳುಗಳು, ಕಾಳುಮೆಣಸು, ಏಲಕ್ಕಿ, ಸಿರಿಧಾನ್ಯಗಳು, ಗೋಡಂಬಿ, ತೆಂಗಿನಕಾಯಿ, ಮಾವು ಕೂಡ ಅಲ್ಲಿಗೆ ಸುಂಕರಹಿತವಾಗಿ ಪ್ರವೇಶಿಸಲಿವೆ.

> ಒಪ್ಪಂದವು ಭಾರತದ ಜವಳಿ, ಚರ್ಮೋದ್ಯಮ, ಸಾಗರ ಉತ್ಪನ್ನಗಳು, ಹವಳ ಮತ್ತು ಆಭರಣ, ಎಂಜಿನಿಯರಿಂಗ್ ಉತ್ಪನ್ನಗಳು, ರಾಸಾಯನಿಕ ವಲಯಗಳಿಗೆ ಗಣನೀಯ ಪ್ರಯೋಜನ ತಂದುಕೊಡುವ ನಿರೀಕ್ಷೆ ಇದೆ
>
> **ನಿರ್ಮಲ್ ಕೆ. ಮಿಂದಾ,** ಅಸೋಚಾಂ ಅಧ್ಯಕ್ಷ

Publication Date
15/07/2026

Presented by ಪ್ರಜಾವಾಣಿ

## ❖ ಸಗಟು ಹಣದುಬ್ಬರ ಹೆಚ್ಚಳ

- ಸಗಟು ಹಣದುಬ್ಬರ ಪ್ರಮಾಣವು ಜೂನ್‌ನಲ್ಲಿ ಶೇ 9.87ಕ್ಕೆ ಏರಿಕೆ ಆಗಿದೆ. ಮೇ ತಿಂಗಳಲ್ಲಿ ಇದು ಶೇ 9.68ರಷ್ಟು ಇತ್ತು. ಆಹಾರ ಹಾಗೂ ಆಹಾರೇತರ ವಸ್ತುಗಳ ಬೆಲೆಯಲ್ಲಿನ ಏರಿಕೆಯು ಒಟ್ಟಾರೆ ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗಿದೆ.
- ಸಗಟು ಹಣದುಬ್ಬರ ಪ್ರಮಾಣದಲ್ಲಿ ಆಗಿರುವ ಏರಿಕೆಯು ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನ ಪರಿಣಾಮವನ್ನು ಬಿಂಬಿಸುತ್ತಿದೆ.
- ಖನಿಜ ತೈಲಗಳು, ಆಹಾರ ವಸ್ತುಗಳು, ಮೂಲ ಲೋಹಗಳ ತಯಾರಿಕೆ, ರಾಸಾಯನಿಕಗಳು ಹಾಗೂ ರಾಸಾಯನಿಕ ಉತ್ಪನ್ನಗಳ ತಯಾರಿಕೆಯು ಸಗಟು ಹಣದುಬ್ಬರ ಏರಿಕೆಗೆ ಪ್ರಮುಖ ಕೊಡುಗೆ ನೀಡಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.
- ಚಿಲ್ಲರೆ ಹಣದುಬ್ಬರ ಪ್ರಮಾಣವು ಜೂನ್‌ನಲ್ಲಿ ಶೇ 4.38ಕ್ಕೆ ಏರಿಕೆ ಆಗಿದೆ. ಆರ್‌ಬಿಐ ರೆಪೊ ದರದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಚಿಲ್ಲರೆ ಹಣದುಬ್ಬರದ ಪ್ರಮಾಣವನ್ನು ಪರಿಗಣಿಸುತ್ತದೆ.

# ಇರಾನ್– ಅಮೆರಿಕ ಸಂಘರ್ಷ ತೀವ್ರ

ದುಬೈ (ಎಎಫ್‌ಪಿ): ಇರಾನ್ ಮತ್ತು ಅಮೆರಿಕ ಯುದ್ಧವು ಮತ್ತಷ್ಟು ತೀವ್ರಗೊಳ್ಳುತ್ತಿದೆ. ಜೋರ್ಡಾನ್‌ನಲ್ಲಿರುವ ಅಮೆರಿಕದ ವಾಯು ನೆಲೆ ಮೇಲೆ ಇರಾನ್ ಮಂಗಳವಾರ ದಾಳಿ ನಡೆಸಿದೆ. ಇದಕ್ಕೂ ಮೊದಲು ಅಮೆರಿಕವು ಇರಾನ್‌ನ ದಕ್ಷಿಣ ಭಾಗದ ನಗರಗಳ ಮೇಲೆ ಐದು ತಾಸುಗಳವರೆಗೆ ನಿರಂತರ ದಾಳಿ ನಡೆಸಿತ್ತು.

ಯುದ್ಧವು ಮತ್ತೊಮ್ಮೆ ಆರಂಭಗೊಂಡಿದ್ದರಿಂದ ಕಳೆದ ನಾಲ್ಕು ವಾರಗಳ ಲೆಕ್ಕಾಚಾರದಲ್ಲಿ ತೈಲ ಬೆಲೆಗಳು ಏರಿಕೆ ಕಂಡಿವೆ. ಅಮೆರಿಕವು ಕಳೆದ ಮೂರು ದಿನಗಳಿಂದ ನಿರಂತರವಾಗಿ ಇರಾನ್ ಮೇಲೆ ದಾಳಿ ನಡೆಸುತ್ತಿದೆ. ಇದಕ್ಕೆ ಪ್ರತಿಯಾಗಿ ಮಂಗಳವಾರ ಬಹರೇನ್, ಜೋರ್ಡನ್ ಮೇಲೆ ಇರಾನ್ ದಾಳಿ ನಡೆಸಿದೆ. ಜೊತೆಗೆ, ಯುಎಇಗೆ ಸೇರಿದ ಎರಡು ಹಡುಗಳು ಮೇಲೆಯೂ ದಾಳಿ ನಡೆಸಿದೆ.

'ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಮುಕ್ತ ಸಂಚಾರಕ್ಕೆ ನಾವು ರಕ್ಷಣೆ ನೀಡುತ್ತೇವೆ. ನಮ್ಮ ಸೇನೆಯನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಈ ಎಲ್ಲ ಬೆಳವಣಿಗೆಗಳ ಕಾರಣದಿಂದ, ಅಮೆರಿಕ ಮತ್ತು ಇರಾನ್ ಮಧ್ಯೆ ನಡೆಯುತ್ತಿದ್ದ ಶಾಂತಿ ಮಾತುಕತೆಗೆ ತೀವ್ರ ಹಿನ್ನಡೆಯಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ತನ್ನ ಹಡಗುಗಳ ಮೇಲೆ ದಾಳಿ ನಡೆಸಿದ್ದನ್ನು ಖಂಡಿಸಿರುವ ಯುಎಇ, 'ನಮ್ಮ ಸೇನೆಯು ಸನ್ನದು ಸ್ಥಿತಿಯಲ್ಲಿವೆ. ಯಾವುದೇ ಪ್ರಚೋದನೆಗೆ ಉತ್ತರಿಸಲು ನಾವು ಸಿದ್ಧರಿದ್ದೇವೆ' ಎಂದು ಹೇಳಿದೆ.

## 'ಬಾಬ್ ಅಲ್ ಮಂದೆಬ್' ಮುಚ್ಚುವ ಬೆದರಿಕೆ

ಯೆಮನ್‌ನಲ್ಲಿರುವ ಹೂಥಿ ಬಂಡುಕೋರರನ್ನು ಬಳಸಿ 'ಬಾಬ್ ಅಲ್ ಮಂದೆಬ್' ಜಲಸಂಧಿಯನ್ನು ಮುಚ್ಚಲು ಇರಾನ್ ಯೋಜನೆ ರೂಪಿಸಿದೆ ಎನ್ನಲಾಗಿದೆ. 'ಬಾಬ್ ಅಲ್ ಮಂದೆಬ್' ಮುಚ್ಚಲು ನಮ್ಮ ಸೇನೆ ಸನ್ನದ್ಧವಾಗಿದೆ' ಎಂದು ಯೆಮನ್‌ನ ಹಿರಿಯ ಅಧಿಕಾರಿಯೊಬ್ಬರು ಸೋಮವಾರ ಎಚ್ಚರಿಸಿದ್ದಾರೆ.

ಯೆಮನ್ ಮತ್ತು ಜಿಬೂಟಿ ನಡುವೆ ಇರುವ ಈ ಜಲಸಂಧಿಯು ಕೆಂಪುಸಮುದ್ರ ಮತ್ತು ಆಡೆನ್ ಕೊಲ್ಲಿಯನ್ನು ಜೋಡಿಸುತ್ತದೆ. ಹಿಂದೂ ಮಹಾಸಾಗರದಿಂದ ಕೆಂಪು ಸಮುದ್ರಕ್ಕೆ ಪ್ರವೇಶಿಸಲು ಇರುವ ಏಕೈಕ ಮಾರ್ಗ ಇದಾಗಿದೆ. ಏಷ್ಯಾ ಮತ್ತು ಯುರೋಪ್ ನಡುವಿನ ವ್ಯಾಪಾರಕ್ಕೆ ಸೇತುವೆಯಾಗಿರುವ ಈ ಜಲಸಂಧಿಯ ಮೂಲಕ ಜಗತ್ತಿನ ಶೇ 12ರಷ್ಟು ಇಂಧನ ಸಾಗಣೆ ನಡೆಯುತ್ತದೆ.

**ಮತ್ತೊಂದು ಪ್ರಮುಖ ದಾಳಿ ನಡೆಸಿದ್ದೇವೆ. ಇರಾನ್‌ನ ಬಂದರುಗಳಿಗೆ ಅಮೆರಿಕವು ಮತ್ತೊಮ್ಮೆ ದಿಗ್ಬಂಧನ ಹೇರಲಿದೆ. ಉಳಿದ ದೇಶಗಳ ಹಡುಗುಗಳು ಹೊರ್ಮುಜ್‌ನಲ್ಲಿ ಮುಕ್ತವಾಗಿ ಸಂಚರಿಸಬಹುದು**

**ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ

Publication Date
15/07/2026

Presented by ಪ್ರಜಾವಾಣಿ

# ಎನ್‌ಸಿಇಆರ್‌ಟಿಗೆ 'ಸುಪ್ರೀಂ' ನೋಟಿಸ್

## ತ್ರಿಭಾಷಾ ನೀತಿ: ಪ್ರತಿಕ್ರಿಯೆ ಸಲ್ಲಿಸಲು ಕೇಂದ್ರ ಸರ್ಕಾರ, ಸಿಬಿಎಸ್‌ಇಗೂ ಸೂಚನೆ

ಪ್ರಜಾವಾಣಿ ವಾರ್ತೆ/ ಪಿಟಿಐ

**ನವದೆಹಲಿ:** ಒಂಬತ್ತನೇ ತರಗತಿ ವಿದ್ಯಾರ್ಥಿಗಳಿಗೆ ಕಡ್ಡಾಯಗೊಳಿಸಲಾದ ತ್ರಿಭಾಷಾ ನೀತಿ ಪ್ರಶ್ನಿಸಿ ಹೊಸದಾಗಿ ಸಲ್ಲಿಕೆಯಾದ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಹಾಗೂ ಕೇಂದ್ರ ಪ್ರೌಢಶಿಕ್ಷಣ ಮಂಡಳಿಗೆ (ಸಿಬಿಎಸ್‌ಇ) ಸುಪ್ರೀಂ ಕೋರ್ಟ್ ಮಂಗಳವಾರ ಕೇಳಿದೆ.



'ಹತ್ತು ದಿನಗಳ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸಬೇಕು' ಎಂದು ಹೇಳಿರುವ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿ. ಮೋಹನ ಅವರಿರುವ ಪೀಠವು, ಜುಲೈ 29ರಂದು ವಿಚಾರಣೆಗೆ ಎತ್ತಿಕೊಳ್ಳುವುದಾಗಿ ತಿಳಿಸಿದೆ.

'ಪಠ್ಯಪುಸ್ತಕಗಳ ತೀವ್ರ ಕೊರತೆ ಸಮಸ್ಯೆ ಒಂದೆಡೆಯಾದರೆ ಹಠಾತ್ ಆಗಿ ಹೊಸ ನೀತಿಯನ್ನು ಅನುಷ್ಠಾನಕ್ಕೆ ತರುತ್ತಿರುವುದು ಕೂಡ ಹೊರೆಯಾಗಿದೆ. ಶಿಕ್ಷಣ ಹಕ್ಕು ಕಾಯ್ದೆಗೆ ವಿರುದ್ದವಾದ ಸುತ್ತೋಲೆಯನ್ನು ಜಾರಿಗೊಳಿಸ ಲಾಗುತ್ತಿದೆ' ಎಂದು ಅರ್ಜಿದಾರರ ಪರವಾಗಿ ವಕೀಲ ಆನಂದ್ ಗ್ರೋವರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಇಂಗ್ಲಿಷ್, ಫ್ರೆಂಚ್ ಕಲಿಯುತ್ತಿದ್ದ 14 ವರ್ಷದ ಮಗುವಿಗೆ ಒಮ್ಮಿಂದೊಮ್ಮೆಗೇ ತಮಿಳು ಕಲಿಯುವಂತೆ ಹೇಳಲಾಗುತ್ತಿದೆ. ಶಿಕ್ಷಕರು ಹಾಗೂ ಮೂಲಸೌಲಭ್ಯಗಳನ್ನು ಹೇಗೆ ಹೊಂದಿಸುವುದು' ಎಂದು ವಕೀಲ ಮುಕುಲ್ ರೋಹಟಗಿ ಪ್ರಶ್ನಿಸಿದ್ದಾರೆ.

## 'ಶಾಲಾ ಮಟ್ಟದ ಪರೀಕ್ಷೆ ಬರೆಯುವುದು ಕಡ್ಡಾಯ'

ನವದೆಹಲಿ: ವಿದ್ಯಾರ್ಥಿಗಳು 2027–28ನೇ ಸಾಲಿನಿಂದ 10ನೇ ತರಗತಿ ತೇರ್ಗಡೆ ಪ್ರಮಾಣಪತ್ರ ಪಡೆಯ ಬೇಕಾದರೆ ಮೂರನೇ ಭಾಷೆಯಲ್ಲಿ ಶಾಲಾ ಹಂತದಲ್ಲಿ ನಡೆಯುವ ಪರೀಕ್ಷೆ ಬರೆಯುವುದು ಕಡ್ಡಾಯ ಎಂದು ಸಿಬಿಎಸ್‌ಇ ಸ್ಪಷ್ಟಪಡಿಸಿದೆ.

'ಸದ್ಯ 7, 8 ಮತ್ತು 9ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು 10ನೇ ತರಗತಿ ಬೋರ್ಡ್ ಪರೀಕ್ಷೆಯಲ್ಲಿ ಮೂರನೇ ಭಾಷೆಯ ಪರೀಕ್ಷೆ ಬರೆಯಬೇಕಿಲ್ಲ' ಎಂದು ಮಂಡಳಿಯು ಈ ಹಿಂದೆ ತಿಳಿಸಿತ್ತು. ಗೊಂದಲ ಪರಿಹರಿಸುವ ನಿಟ್ಟಿನಲ್ಲಿ ಪರಿಷ್ಕೃತ ಸೂಚನೆ ನೀಡಿದೆ.

'2026–27ನೇ ಸಾಲಿನಲ್ಲಿ 9ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು 10ನೇ ತರಗತಿಗೆ ಬಂದಾಗ ಮೂರನೇ ಭಾಷಾ ಪರೀಕ್ಷೆಯನ್ನು ಬರೆಯುವ ಅಗತ್ಯವಿಲ್ಲ. ಆದರೆ, ಶಾಲಾ ಹಂತದಲ್ಲಿ ನಡೆಯುವ ಪರೀಕ್ಷೆಗಳನ್ನು ಬರೆಯುವುದು ಕಡ್ಡಾಯ' ಎಂದು ಈಗ ತಿಳಿಸಿದೆ.

ಹೊಸ ಸ್ಪಷ್ಟನೆಯ ಪ್ರಕಾರ, ಮೂರನೇ ಭಾಷೆಯ ಮೌಲ್ಯಮಾಪನವು ಶಾಲೆಗಳ ಜವಾಬ್ದಾರಿಯಾಗಿರುತ್ತದೆ.

2026–27ರಲ್ಲಿ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಸದ್ಯ ಚಾಲ್ತಿಯಲ್ಲಿರುವ ವ್ಯವಸ್ಥೆಯಲ್ಲಿಯೇ ಮುಂದುವರಿಯಲಿದ್ದು, ಮೂರನೇ ಭಾಷೆ ಓದುವ ಅಗತ್ಯವಿಲ್ಲ.

Publication Date
15/07/2026

Presented by ಪ್ರಜಾವಾಣಿ

## ❖ ಸೆಮಿಕಂಡಕ್ಟರ್, ಮೊಬೈಲ್ ತಯಾರಿಕೆಗೆ ಒತ್ತು

ಭಾರತದಲ್ಲಿ ಮೊಬೈಲ್ ಫೋನ್ ತಯಾರಿಕೆ ಹೆಚ್ಚಿಸಲು, ಭಾರತದ ಸೆಮಿ ಕಂಡಕ್ಟರ್ ತಯಾರಿಕೆಯನ್ನು ವಿಸ್ತರಿಸಲು ಕೇಂದ್ರ ಸಚಿವ ಸಂಪುಟವು 21.9 ಲಕ್ಷ ಕೋಟಿ ಮೊತ್ತವನ್ನು ನಿಗದಿ ಮಾಡಿದೆ.

# ಸೆಮಿಕಂಡಕ್ಟರ್, ಮೊಬೈಲ್ ತಯಾರಿಕೆಗೆ ಒತ್ತು

### ಹೊಸ ಯೋಜನೆಗಳಿಗೆ ₹1.9 ಲಕ್ಷ ಕೋಟಿ ನಿಗದಿಗೆ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ

ನವದೆಹಲಿ (ಪಿಟಿಐ): ಭಾರತದಲ್ಲಿ ಮೊಬೈಲ್ ಫೋನ್ ಉತ್ಪಾದನೆಯನ್ನು ಹೆಚ್ಚು ಮಾಡಲು, ಭಾರತದ ಸೆಮಿಕಂಡಕ್ಟರ್ ತಯಾರಿಕಾ ವ್ಯವಸ್ಥೆಯನ್ನು ವಿಸ್ತರಿಸಲು ಹಾಗೂ ದೇಶವನ್ನು ಜಾಗತಿಕ ಮಟ್ಟದ ಎಲೆಕ್ಟ್ರಾನಿಕ್ಸ್ ತಯಾರಿಕಾ ಕೇಂದ್ರವನ್ನಾಗಿ ರೂಪಿಸಲು ಕೇಂದ್ರ ಸಚಿವ ಸಂಪುಟವು ₹1.9 ಲಕ್ಷ ಕೋಟಿ ಮೊತ್ತವನ್ನು ನಿಗದಿ ಮಾಡಿದೆ.

ಸೆಮಿಕಂಡಕ್ಟರ್ ವಿನ್ಯಾಸ ಹಾಗೂ ಅವುಗಳ ತಯಾರಿಕೆಯನ್ನು ಹೆಚ್ಚು ಮಾಡಲು ಸೆಮಿಕಾನ್ 2.0 ಹೆಸರಿನ ₹1.2 ಲಕ್ಷ ಕೋಟಿ ಮೊತ್ತದ ಯೋಜನೆಗೆ ಕೇಂದ್ರ ಸಚಿವ ಸಂಪುಟವು ಬುಧವಾರ ಒಪ್ಪಿಗೆ ನೀಡಿದೆ. ಇದರ ಜೊತೆಯಲ್ಲೇ, ಮೊಬೈಲ್ ಫೋನ್‌ಗಳನ್ನು ದೇಶದಲ್ಲಿ ತಯಾರಿಸುವುದನ್ನು ಉತ್ತೇಜಿಸುವ ₹62,500 ಕೋಟಿ ಮೊತ್ತದ 'ಮೊಬೈಲ್ ಫೋನ್ ತಯಾರಿಕಾ ಯೋಜನೆ'ಗೆ

**ಮುಖ್ಯಾಂಶಗಳು**

- ಮೊಬೈಲ್ ಫೋನ್ ತಯಾರಿಕಾ ಯೋಜನೆಗೆ ₹62,500 ಕೋಟಿ
- 60 ಸಾವಿರ ನೇರ ಉದ್ಯೋಗ, ₹39 ಲಕ್ಷ ಕೋಟಿ ಮೊತ್ತದ ಮೊಬೈಲ್ ಫೋನ್ ತಯಾರಿಕೆ
- ದೇಶದಲ್ಲಿ ಬಳಕೆಯಲ್ಲಿರುವ ಶೇ 99.2ರಷ್ಟು ಮೊಬೈಲ್‌ಗಳು ಭಾರತದಲ್ಲೇ ತಯಾರಾಗಿವೆ

(ಎಂಪಿಎಂಎಸ್) ಕೂಡ ಸಂಪುಟ ಸಮ್ಮತಿ ನೀಡಿದೆ.

'ಯೋಜನೆಯು ಪೂರ್ಣಗೊಳ್ಳುವ ಹೊತ್ತಿನಲ್ಲಿ ನಾವು ದೇಶಿ ಚಿಪ್‌ಗಳ ತಯಾರಿಕೆಯಲ್ಲಿ



ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ಭಾರತದಲ್ಲಿ ತಯಾರಿಸಿದ ಸೆಮಿಕಂಡಕ್ಟರ್ ಚಿಪ್‌ಗಳನ್ನು ಸುದ್ದಿಗೋಷ್ಠಿಯಲ್ಲಿ ತೋರಿಸಿದರು —ಪಿಟಿಐ ಚಿತ್ರ

ಸ್ವಾವಲಂಬನೆ ಸಾಧಿಸಲಿದ್ದೇವೆ' ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಹೊಸ ಯೋಜನೆಯು ಅಂದಾಜು ₹4 ಲಕ್ಷ ಕೋಟಿ ಮೊತ್ತದ ಹೂಡಿಕೆಗಳನ್ನು ಆಕರ್ಷಿಸಲಿದೆ, ಯೋಜನೆಯ ಅವಧಿಯಲ್ಲಿ ಅಂದಾಜು ₹2 ಲಕ್ಷ ಕೋಟಿ ಮೌಲ್ಯದ ಸೆಮಿಕಂಡಕ್ಟರ್‌ಗಳ ತಯಾರಿಕೆ ಆಗಲಿದೆ ಎಂದು ಕೇಂದ್ರ ನಿರೀಕ್ಷಿಸಿದೆ.

ಎಂಪಿಎಂಎಸ್ ಯೋಜನೆಯ ಅಡಿಯಲ್ಲಿ ಪ್ರಸಕ್ತ ಹಣಕಾಸು ವರ್ಷದಿಂದ 2030–31ನೆಯ ವರ್ಷದವರೆಗೆ ತಯಾರಕರಿಗೆ ಉತ್ಪಾದನೆ ಆಧಾರಿತ ಉತ್ತೇಜನ ಒದಗಿಸಲಾಗುತ್ತದೆ. ಈ ಯೋಜನೆಯು 60 ಸಾವಿರ ನೇರ ಉದ್ಯೋಗ ಸೃಷ್ಟಿಸಲಿದೆ, ₹39 ಲಕ್ಷ ಕೋಟಿ ಮೊತ್ತದ ಮೊಬೈಲ್ ಫೋನ್ ತಯಾರಿಕೆಗೆ ಕಾರಣವಾಗಲಿದೆ ಹಾಗೂ ರಫ್ತು ವಹಿವಾಟನ್ನು ಗಣನೀಯವಾಗಿ ಹೆಚ್ಚಿಸಲಿದೆ ಎಂದು ಕೂಡ ಸರ್ಕಾರ ನಿರೀಕ್ಷಿಸಿದೆ.

ದೇಶದಲ್ಲಿ ಈಗ ಬಳಕೆಯಾಗುತ್ತಿರುವ ಮೊಬೈಲ್ ಫೋನ್‌ಗಳ ಪೈಕಿ ಶೇ 99.2ರಷ್ಟು ಇಲ್ಲಿಯೇ ತಯಾರಾದವುಗಳಾಗಿವೆ. ಸಂಖ್ಯೆಯ ಲೆಕ್ಕದಲ್ಲಿ ವಿಶ್ವದಲ್ಲಿ ಅತಿಹೆಚ್ಚು ಮೊಬೈಲ್ ಫೋನ್‌ಗಳು ತಯಾರಾಗುತ್ತಿರುವ ದೇಶಗಳ ಪಟ್ಟಿಯಲ್ಲಿ ಭಾರತ ಎರಡನೆಯ ಸ್ಥಾನದಲ್ಲಿದೆ.

ಸೆಮಿಕಂಡಕ್ಟರ್ ಹಾಗೂ ಮೊಬೈಲ್ ತಯಾರಿಕಾ ಯೋಜನೆಗಳು ಮಹತ್ವದ ತಂತ್ರಜ್ಞಾನ ಕ್ಷೇತ್ರಗಳಲ್ಲಿ ದೇಶದ ತಯಾರಿಕಾ ಸಾಮರ್ಥ್ಯವನ್ನು ಹೆಚ್ಚಿಸುವ, ಆಮದು ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶ ಹೊಂದಿವೆ.

ದೇಶದ ಸೆಮಿಕಂಡಕ್ಟರ್ ಯೋಜನೆಯು ಸೆಮಿಕಂಡಕ್ಟರ್ ವಲಯದಲ್ಲಿನ ಮುಂದಿನ ಹಂತದ ಅಭಿವೃದ್ಧಿಯ ಮೇಲೆ ಗಮನ ಹರಿಸುತ್ತದೆ. ಪ್ರಮುಖ ಅಂಶಗಳಿಗೆ ಗಣನೀಯವಾದ ಉತ್ತೇಜನ ಒದಗಿಸುವ ಮೂಲಕ ಇದು ಸೆಮಿಕಂಡಕ್ಟರ್‌ಗಳಿಗೆ ಸಂಬಂಧಿಸಿದ ಸಂಶೋಧನೆಗಳಲ್ಲಿ ಕೂಡ ದೇಶವನ್ನು ಮುಂಚೂಣಿ ಸ್ಥಾನಕ್ಕೆ ತರುವ ಸಾಧ್ಯತೆಗಳನ್ನು ಒಳಗೊಂಡಿದೆ ಎಂದು ಇವೈ ಇಂಡಿಯಾ ಕಂಪನಿಯ ತಜ್ಞೆ ಆಯಿಶಾ ಅಲಿ ಹುಸೈನಿ ಹೇಳಿದ್ದಾರೆ.

Publication Date
16/07/2026

Presented by

# ಸುಧಾಮೂರ್ತಿಗೆ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಧಾರವಾಡ: 'ಭಾರತೀಯ ತಂತ್ರಜ್ಞಾನ ಸಂಸ್ಥೆಯು (ಐಐಟಿ) ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಅವರನ್ನು ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಿದೆ' ಎಂದು ಐಐಟಿ ನಿರ್ದೇಶಕ ವೆಂಕಪ್ಪಯ್ಯ ಆರ್. ದೇಸಾಯಿ ತಿಳಿಸಿದರು.

'ಧಾರವಾಡದ ಐಐಟಿ ಸ್ಥಾಪನೆಯಾಗಿ 10 ವರ್ಷವಾಗಿದೆ. ಈ ವರ್ಷದಿಂದ ಗೌರವ ಡಾಕ್ಟರೇಟ್ ನೀಡಲು ನಿರ್ಧರಿಸಲಾಗಿದೆ. ಜುಲೈ 18ರಂದು ನಡೆಯುವ 7ನೇ ಘಟಿಕೋತ್ಸವದಲ್ಲಿ ಸುಧಾಮೂರ್ತಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಎಕ್ಸಿಕ್ಯೂಟಿವ್ ಎಂ.ಟೆಕ್ ಕೋರ್ಸ್



ಸುಧಾಮೂರ್ತಿ

ಆರಂಭಿಸುತ್ತೇವೆ. ಕೋವಿಡ್ ಅವಧಿಯಲ್ಲಿ ಈ ಕೋರ್ಸ್ ಸ್ಥಗಿತವಾಗಿತ್ತು. ಡೇಟಾ ಸೈನ್ಸ್ ಆ್ಯಂಡ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಎಕ್ಸಿಕ್ಯೂಟಿವ್ ಎಂ.ಟೆಕ್ ಕೋರ್ಸ್ ಜನವರಿಗೆ ಆರಂಭವಾಗಲಿದೆ' ಎಂದರು.

Publication Date
16/07/2026

Presented by ಪ್ರಜಾವಾಣಿ

# ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು, ಅಧಿಕಾರ ಹಂಚಿಕೆ: ಹಿಂದಡಿ ಇಟ್ಟ ರಾಜ್ಯ

# ‘ನಗರೀಕರಣ ಶೇ 46; ಅನುದಾನ ಶೇ 25’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ನಗರೀಕರಣದ ಪ್ರಮಾಣ ಶೇ 46ರಷ್ಟು ಇದ್ದರೂ ಹಣಕಾಸು ಹಂಚಿಕೆ ಶೇ 25ರಷ್ಟು ಮಾತ್ರ ಇದೆ. ಸ್ಥಳೀಯಾಡಳಿತ ಸಂಸ್ಥೆಗಳಿಗೆ ಹಣಕಾಸು ಮತ್ತು ಅಧಿಕಾರ ಹಂಚಿಕೆ ಮಾಡುವಲ್ಲಿ ಒಂದು ಕಾಲದಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿದ್ದ ಕರ್ನಾಟಕವು ಈಗ ವಿರುದ್ಧ ದಿಕ್ಕಿನಲ್ಲಿದೆ ಎಂದು ಜನಾಗ್ರಹ ಸಂಘಟನೆ ಹೇಳಿದೆ.

ಐದನೇ ರಾಜ್ಯ ಹಣಕಾಸು ಆಯೋಗದ ವರದಿ ಮತ್ತು ಅದಕ್ಕೆ ರಾಜ್ಯ ಸರ್ಕಾರದ ಪ್ರತಿಕ್ರಿಯೆ ನೋಡಿದಾಗ ರಾಜ್ಯದ ನಗರಗಳು ವೇಗವಾಗಿ ಬೆಳೆಯುತ್ತಿದ್ದರೂ ನಗರ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ಹಂಚಿಕೆ ಕಡಿಮೆಯಾಗುತ್ತಿರುವುದು ಕಂಡುಬಂದಿದೆ ಎಂದು ಸಂಘಟನೆಯ ಸಂತೋಷ್ ಮತ್ತು ಮನೀಷಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಸ್ತುತ ಪ್ರತಿ ಇಬ್ಬರಲ್ಲಿ ಸರಿ ಸುಮಾರು ಒಬ್ಬರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದರೂ ಅಗತ್ಯ ಸಾರ್ವಜನಿಕ ಸೇವೆಗಳನ್ನು ಒದಗಿಸಲು ನಗರ ಮತ್ತು ಪಟ್ಟಣಗಳು ಕಡಿಮೆ ಹಣಕಾಸು ಸ್ವಾಯತ್ತತೆ, ಕಡಿಮೆ ಹೊಂದಿಕೊಳ್ಳುವ ನಿಧಿ ಮತ್ತು ಅತ್ಯಲ್ಪ ಸಂಪನ್ಮೂಲಗಳನ್ನು ಹೊಂದಿವೆ ಎಂದು ಮಾಹಿತಿ ನೀಡಿದರು.

ರಾಜ್ಯದ ಒಟ್ಟು ಆದಾಯದ ಶೇ 60ರಷ್ಟನ್ನು ಸ್ಥಳೀಯ ಆಡಳಿತಗಳಿಗೆ ನೀಡಲು ಆಯೋಗ ಶಿಫಾರಸು ಮಾಡಿದೆ. ಇದು ಇದುವರೆಗಿನ ಅತ್ಯಂತ ಹೆಚ್ಚಿನ ಪ್ರಮಾಣದ ಶಿಫಾರಸಾಗಿದೆ. ಇದರಲ್ಲಿ, ಶೇ 25 ನಗರ ಪ್ರದೇಶಗಳಿಗೆ ಮತ್ತು ಶೇ 75 ಗ್ರಾಮೀಣ ಪ್ರದೇಶಗಳಿಗೆ ಹಂಚಿಕೆ ಮಾಡಲು ತಿಳಿಸಲಾಗಿದೆ. ನಗರದಲ್ಲಿರುವ ಶೇ 46ರಷ್ಟು ಜನಸಂಖ್ಯೆಗೆ ಅನುದಾನ ಬಹಳ ಕಡಿಮೆ ಹಂಚಿಕೆಯಾಗಿದೆ ಎಂದು ವಿವರಿಸಿದರು.

ಸ್ಥಳೀಯ ಆಡಳಿತಗಳಿಗೆ ಮೀಸಲಿಟ್ಟ ಹಣದ ಸರಿಸುಮಾರು ಮೂರನೇ ಒಂದು ಭಾಗವು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಾದ ಅನ್ನಭಾಗ್ಯ ಮತ್ತು ಗೃಹಲಕ್ಷ್ಮಿ ಯೋಜನೆಗಳಿಗೆ ಹಂಚಿಕೆಯಾಗಿದೆ. ಅದೇ ರೀತಿ, ಸಿಎಜಿ ಮತ್ತು ಹಿಂದಿನ ರಾಜ್ಯ ಹಣಕಾಸು ಆಯೋಗಗಳ ಸಲಹೆಗಳಿಗೆ ವಿರುದ್ಧವಾಗಿ, ನಗರ ಸ್ಥಳೀಯ ಸಂಸ್ಥೆಗಳಿಗೆ ಮೀಸಲಾಗಿದ್ದ ಸಂಪನ್ಮೂಲಗಳಿಂದ ₹8,023 ಕೋಟಿಗಳನ್ನು ಅರೆ-ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ದೂರಿದರು.

ರಾಜ್ಯದ 327 ನಗರ ಮತ್ತು ಪಟ್ಟಣಗಳ ಪೈಕಿ ಮೂರನೇ ಎರಡರಷ್ಟು ಸ್ಥಳೀಯ ಆಡಳಿತಗಳಿಗೆ ಚುನಾಯಿತ ಸದಸ್ಯರೇ ಇಲ್ಲದೆ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ 18 ಮಹಾನಗರ ಪಾಲಿಕೆಗಳ ಪೈಕಿ 13 ಪಾಲಿಕೆಗಳೂ ಇದರಲ್ಲಿ ಸೇರಿವೆ ಎಂದು ಹೇಳಿದರು.

**₹2,244**
ಕರ್ನಾಟಕದ ತಲಾವಾರು ಅನುದಾನ

**₹6,251**
ಕೇರಳದ ತಲಾವಾರು ಅನುದಾನ

**₹988 ಕೋಟಿ**
2016–17ರಲ್ಲಿದ್ದ ನಿರ್ಬಂಧರಹಿತ ಅನುದಾನ

**₹75 ಕೋಟಿ**
2026–27ರಲ್ಲಿ ಇಟ್ಟಿರುವ ನಿರ್ಬಂಧರಹಿತ ಅನುದಾನ

**87%**
ಹತ್ತು ವರ್ಷಗಳಲ್ಲಿ ಕುಸಿದಿರುವ ನಿರ್ಬಂಧರಹಿತ ಅನುದಾನದ ಪ್ರಮಾಣ

## ಅನುದಾನ ಹಂಚಿಕೆಯಲ್ಲಿ ಹಿಂದೆ

ಹಣಕಾಸು ಹಂಚಿಕೆಯಲ್ಲಿ ನೆರೆ ರಾಜ್ಯಗಳಿಗಿಂತ ಕರ್ನಾಟಕ ಹಿಂದುಳಿದಿದೆ. ಆಯೋಗದ ಶಿಫಾರಸನ್ನು ಸರ್ಕಾರ ಒಪ್ಪಿಕೊಂಡಿದ್ದರೂ ಹಂಚಿಕೆ ಮಾಡುವಾಗ ಇನ್ನಷ್ಟು ಕಡಿಮೆ ಮಾಡಿದೆ. ಶಿಫಾರಸಿನಂತೆ ₹34,052 ಕೋಟಿ ನೀಡಬೇಕು. ಆದರೆ, 2026–27ನೇ ಸಾಲಿನಲ್ಲಿ ಕೇವಲ ₹4,972 ಕೋಟಿ ಹಂಚಿಕೆ ಮಾಡಲಾಗಿದೆ ಎಂದು ಜನಾಗ್ರಹ ಸಂಘಟನೆ ಹೇಳಿದೆ.

## ಮುಖ್ಯಾಂಶಗಳು

- ಒಟ್ಟು ಆದಾಯದ ಶೇ 60ರಷ್ಟನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡಲು ಶಿಫಾರಸು
- ಮೀಸಲಿಟ್ಟ ಹಣದ ಮೂರನೇ ಒಂದು ಭಾಗ ‘ಗ್ಯಾರಂಟಿ’ಗಳಿಗೆ ಹಂಚಿಕೆ

Publication Date
16/07/2026

Presented by

**ಭಾರತದಲ್ಲಿ ಅಣು ವಿದ್ಯುತ್ ಉತ್ಪಾದನೆ**

**7** ದೇಶದಲ್ಲಿರುವ ಅಣು ವಿದ್ಯುತ್ ಸ್ಥಾವರಗಳು


**24** ದೇಶದಲ್ಲಿರುವ ಸ್ಥಾವರಗಳಲ್ಲಿ ವಿದ್ಯುತ್ ಉತ್ಪಾದಿಸುತ್ತಿರುವ ಪರಮಾಣು ರಿಯಾಕ್ಟರ್‌ಗಳು

**8,780** ಮೆಗಾವಾಟ್ ಸದ್ಯ ಭಾರತದ ಪರಮಾಣು ವಿದ್ಯುತ್ ಉತ್ಪಾದನಾ ಸಾಮರ್ಥ್ಯ

**8,000** ಮೆಗಾವಾಟ್ ನಿರ್ಮಾಣ ಹಂತದಲ್ಲಿರುವ 10 ಪರಮಾಣು ವಿದ್ಯುತ್ ರಿಯಾಕ್ಟರ್‌ಗಳ ಉತ್ಪಾದನಾ ಸಾಮರ್ಥ್ಯ

**1** ಲಕ್ಷ ಮೆಗಾವಾಟ್ 2047ರ ಹೊತ್ತಿಗೆ ಭಾರತವು ಪರಮಾಣು ವಿದ್ಯುತ್ ಉತ್ಪಾದನೆಗೆ ನಿಗದಿಪಡಿಸಿಕೊಂಡಿರುವ ಗುರಿ

**₹20** ಸಾವಿರ ಕೋಟಿ ಸಣ್ಣ ಮಾದರಿ ಪರಮಾಣು ರಿಯಾಕ್ಟರ್‌ಗಳನ್ನು ಅಭಿವೃದ್ಧಿ ಪಡಿಸಲು 2025–26ರ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಹಂಚಿಕೆ ಮಾಡಿರುವ ಹಣ



# ಅಣು ವಿದ್ಯುತ್: ಭಾರತಕ್ಕೆ ಆಸ್ಟ್ರೇಲಿಯಾ ‘ಸಹಕಾರ’

ಭಾರತ ಮತ್ತು ಆಸ್ಟ್ರೇಲಿಯಾ, ನಾಗರಿಕ ಪರಮಾಣು ಸಹಕಾರಕ್ಕೆ ಪರಸ್ಪರ ಸಮ್ಮತಿಸಿವೆ. ಭಾರತಕ್ಕೆ ಯುರೇನಿಯಂ ರಫ್ತು ಮಾಡಲು ಆಸ್ಟ್ರೇಲಿಯಾ ಒಪ್ಪಿಕೊಂಡಿದೆ. ಇದರಿಂದ ದೇಶದಲ್ಲಿ ಪರಮಾಣು ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಭಾರತಕ್ಕೆ ಅನುಕೂಲವಾಗಲಿದೆ. ದಶಕದ ಹಿಂದೆಯೇ ಈ ಸಂಬಂಧ ಒಪ್ಪಂದ ನಡೆದಿತ್ತಾದರೂ, ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ. ಈಗ ಎರಡೂ ದೇಶಗಳು ಪರಮಾಣು ಸಹಕಾರಕ್ಕೆ ಮುಂದಾಗಿದ್ದು, ಇದು ದೇಶದ ವಿದ್ಯುತ್ ಉತ್ಪಾದನೆ, ಉದ್ಯಮ ರಂಗಗಳಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗಲಿದೆ

ಪ್ರಜಾವಾಣಿ ವಾರ್ತೆ

ಭಾರತ-ಆಸ್ಟ್ರೇಲಿಯಾದ ಮೂರನೇ ವಾರ್ಷಿಕ ಶೃಂಗಸಭೆ ಭಾರತದ ಮಟ್ಟಿಗೆ ಫಲಪ್ರದವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಆಸ್ಟ್ರೇಲಿಯಾದ ಪ್ರಧಾನಿ ಆ್ಯಂಟನಿ ಅಲ್ಬನೀಸ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿ, ಯುರೇನಿಯಂ ಪೂರೈಕೆಗೆ ಸಂಬಂಧಿಸಿದಂತೆ ಮಹತ್ವದ ಒಪ್ಪಂದವನ್ನು ಸಾಕಾರಗೊಳಿಸಿದ್ದಾರೆ. ಇದು ಎರಡೂ ದೇಶಗಳ ನಡುವಿನ ಸಹಕಾರದಲ್ಲಿ ಹೊಸ ಅಧ್ಯಾಯ ಆರಂಭಿಸಲಿದೆ ಎಂದು ಉಭಯ ಸರ್ಕಾರಗಳು ಪ್ರತಿಪಾದಿಸಿವೆ.

ಭಾರತವು 2014ರ ಸೆಪ್ಟೆಂಬರ್‌ನಲ್ಲಿ ಆಸ್ಟ್ರೇಲಿಯಾದೊಂದಿಗೆ ನಾಗರಿಕ ಪರಮಾಣು ಸಹಕಾರ ಒಪ್ಪಂದಕ್ಕೆ ಸಹಿ ಹಾಕಿತ್ತು. ಅದು 2015ರ ನವೆಂಬರ್‌ನಿಂದ ಜಾರಿಯಾಗಿತ್ತು. ಅದರ ಅನ್ವಯ ಆಸ್ಟ್ರೇಲಿಯಾವು ಭಾರತಕ್ಕೆ ಯುರೇನಿಯಂ ಪೂರೈಸಲು ಒಪ್ಪಿಕೊಂಡಿತ್ತು.

ಆದರೆ, ಆಸ್ಟ್ರೇಲಿಯಾದ ಜಂಟಿ ಸ್ಥಾಯಿ ಸಮಿತಿಯು ಒಪ್ಪಂದದ ಬಗ್ಗೆ ಆಕ್ಷೇಪವೆತ್ತಿತು. ಭಾರತವು ಪರಮಾಣು ಬಳಕೆಯ ನಿಯಂತ್ರಣ, ಪರಿಶೀಲನೆ ಮತ್ತು ಕಾರ್ಯಸ್ಥಗಿತಕ್ಕೆ ಸಂಬಂಧಿಸಿದ ನಿಯಮಗಳಿಗೆ ಒಪ್ಪಿಕೊಳ್ಳುವವರೆಗೂ ಒಪ್ಪಂದವನ್ನು ಜಾರಿ ಮಾಡಬಾರದು ಎಂದು ಸೂಚಿಸಿತು. ಇದರೊಂದಿಗೆ ರಾಜಕೀಯ ಮತ್ತು ಕಾನೂನಾತ್ಮಕ ಅಡೆತಡೆಗಳೂ ಸೇರಿಕೊಂಡು, ಒಪ್ಪಂದ ನನೆಗುದಿಗೆ ಬಿದ್ದಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಆಸ್ಟ್ರೇಲಿಯಾಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದಾಗ, ಆಸ್ಟ್ರೇಲಿಯಾದ ಪ್ರಧಾನಿ ಅಲ್ಬನೀಸ್ ಅವರೊಂದಿಗೆ ನಡೆಸಿದ ಮಾತುಕತೆಯ ನಂತರ ಒಪ್ಪಂದಕ್ಕೆ ಮರುಜೀವ ಬಂದಿದೆ. ಶಾಂತಿಯುತ ಉದ್ದೇಶಗಳಿಗೆ ಯುರೇನಿಯಂ ಅನ್ನು ಭಾರತಕ್ಕೆ ರಫ್ತು ಮಾಡಲು ಆಸ್ಟ್ರೇಲಿಯಾ ಒಪ್ಪಿಕೊಂಡಿದೆ.



ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟನಿ ಅಲ್ಬನೀಸ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ

ಆಸ್ಟ್ರೇಲಿಯಾವು ಜಗತ್ತಿನಲ್ಲೇ (ಕಜಕಸ್ತಾನ, ಕೆನಡಾ ಮತ್ತು ನಮೀಬಿಯಾ ನಂತರದ) ನಾಲ್ಕನೇ ಅತಿ ದೊಡ್ಡ ಯುರೇನಿಯಂ ಉತ್ಪಾದಕ ರಾಷ್ಟ್ರವಾಗಿದೆ. ಜಗತ್ತಿನ ಒಟ್ಟು ಯುರೇನಿಯಂ ನಿಕ್ಷೇಪದಲ್ಲಿ ದೇಶದ ಪಾಲು ಶೇ 28 ರಷ್ಟು

**ಜಾಗತಿಕ ರಾಜಕಾರಣ:** ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಸಂಬಂಧವು ಇತ್ತೀಚಿನ ವರ್ಷಗಳಲ್ಲಿ ಉತ್ತಮಗೊಂಡಿದೆ. ಅದಕ್ಕೆ ಪರೋಕ್ಷ ಕಾರಣ ಚೀನಾ. ಎರಡೂ ರಾಷ್ಟ್ರಗಳು ಚೀನಾದ ಉದ್ಯಮ, ಆರ್ಥಿಕತೆ ಮತ್ತು ರಕ್ಷಣಾ ವಲಯಕ್ಕೆ ಸಬಂಧಿಸಿದ ಬೆಳವಣಿಗೆಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಿವೆ; ಚೀನಾವನ್ನು ಹೊರತುಪಡಿಸಿ ಉಳಿದ ರಾಷ್ಟ್ರಗಳ ಜತೆ ಆರ್ಥಿಕತೆ ಮತ್ತು ಇತರ ವಲಯಗಳಿಗೆ ಸಂಬಂಧಿಸಿದ ಕೊಡುಕೊಳುವಿಕೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿವೆ. ಈ ಹಿನ್ನೆಲೆಯಲ್ಲಿಯೇ ಪರಮಾಣು ಸಹಕಾರ ಒಪ್ಪಂದವೂ ಜಾರಿಯಾಗುತ್ತಿದೆ ಎನ್ನಲಾಗುತ್ತಿದೆ.

ಇದೇ ವೇಳೆ, ಪರಮಾಣು ಪೂರೈಕೆದಾರರ ಗುಂಪಿನಲ್ಲಿ (ಎನ್‌ಎಸ್‌ಜಿ) ಭಾರತದ ಸದಸ್ಯತ್ವವನ್ನೂ ಬೆಂಬಲಿಸುವುದಾಗಿ ಶೃಂಗಸಭೆಯಲ್ಲಿ ಆಸ್ಟ್ರೇಲಿಯಾ ಹೇಳಿದೆ. ಎನ್‌ಎಸ್‌ಜಿ 48ಯು ಪರಮಾಣು ಪೂರೈಕೆ ರಾಷ್ಟ್ರಗಳ ಗುಂಪಾಗಿದ್ದು, ಇದು ಅಣ್ವಸ್ತ್ರ ಪ್ರಸರಣ ತಡೆದು ಶಾಂತಿಯುತ ಬಳಕೆಗಾಗಿ ಪರಮಾಣು ಸಾಧನ-ಸಾಮಗ್ರಿ, ತಾಂತ್ರಿಕತೆ ಒದಗಿಸುವ ಸಂಬಂಧ ಮಾನದಂಡಗಳನ್ನು ರೂಪಿಸಿ, ಜಾರಿಗೊಳಿಸುತ್ತದೆ.

ಜಾಗತಿಕ ಮಟ್ಟದಲ್ಲಿ ಪರಮಾಣು ಒಪ್ಪಂದ ಮತ್ತು ಅಣ್ವಸ್ತ್ರಗಳಿಗೆ ಸಂಬಂಧಿಸಿದಂತೆ ವಿವಿಧ ದೇಶಗಳು/ಗುಂಪುಗಳ ನಡುವೆ ಹಿತಾಸಕ್ತಿ ಸಂಘರ್ಷ ನಡೆಯುತ್ತಿದೆ. ಯುರೇನಿಯಂ, ಅಣು ಸ್ಥಾವರ ಇತ್ಯಾದಿಗಳನ್ನು ಯಾರು ಹೊಂದಬಹುದು, ಯಾರು ಹೊಂದಬಾರದು ಎನ್ನುವುದನ್ನು ಅವು ನಿರ್ಧರಿಸುತ್ತವೆ. ಚೀನಾ ಸೇರಿದಂತೆ ದೊಡ್ಡ ರಾಷ್ಟ್ರಗಳ ಪರಮಾಣು ನೀತಿಗಳನ್ನು ಭಾರತ ವಿರೋಧಿಸುತ್ತಲೇ ಬರುತ್ತಿದೆ.

ಇಂಥ ಸಂದರ್ಭದಲ್ಲಿ ಆಸ್ಟ್ರೇಲಿಯಾ, ಭಾರತಕ್ಕೆ ಶಾಂತಿಯುತ ಉದ್ದೇಶಗಳಿಗಾಗಿ ಪರಮಾಣು ಸಹಕಾರ ನೀಡುತ್ತಿರುವುದು ಮಹತ್ವದ ವಿಚಾರ. ಪ್ರಸ್ತುತ ಅಮೆರಿಕ, ಫ್ರಾನ್ಸ್, ರಷ್ಯಾದಂತಹ ಕೆಲವೇ ಪ್ರಬಲ ರಾಷ್ಟ್ರಗಳು ಪರಮಾಣು ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿವೆ.

ಭಾರತವು ಈ ದಿಸೆಯಲ್ಲಿ ಭವಿಷ್ಯದಲ್ಲಿ ಗಮನಾರ್ಹ ಸಾಧನೆ ಮಾಡಲು ಆಸ್ಟ್ರೇಲಿಯಾದೊಂದಿಗಿನ ಒಪ್ಪಂದ ನೆರವಾಗಲಿದೆ ಎನ್ನಲಾಗುತ್ತಿದೆ.

ಆಧಾರ: ಪಿಟಿಐ, ಎಎಫ್‌ಪಿ, ಪಿಐಬಿ, ನ್ಯೂಕ್ಲಿಯರ್ ನ್ಯೂಸ್‌ವೈರ್, ಭಾರತದಲ್ಲಿರುವ ಆಸ್ಟ್ರೇಲಿಯಾ ರಾಯಭಾರ ಕಚೇರಿ



ಯುರೇನಿಯಂ


## ಹೊಸ ಒಪ್ಪಂದದಿಂದ ದೇಶಕ್ಕೇನು ಲಾಭ?

ಪರಮಾಣು ವಿದ್ಯುತ್ ಉತ್ಪಾದನೆಗೆ ಅಗತ್ಯವಾಗಿರುವ ಯುರೇನಿಯಂ ನಿಕ್ಷೇಪ ಇಲ್ಲಿ ಸಾಕಷ್ಟು ಇಲ್ಲದಿರುವುದರಿಂದ ಭಾರತ ಅದಕ್ಕಾಗಿ ಹೊರದೇಶಗಳನ್ನೇ ಅವಲಂಬಿಸಿದೆ. ರಷ್ಯಾ, ಫ್ರಾನ್ಸ್, ಕೆನಡಾ–ಭಾರತದ ಪರಮಾಣು ಪಾಲುದಾರ ರಾಷ್ಟ್ರಗಳಾಗಿವೆ. ನಾಗರಿಕ ಬಳಕೆಯ ಉದ್ದೇಶಕ್ಕೆ ಕೆನಡಾವು ಭಾರತಕ್ಕೆ ನಿರಂತರವಾಗಿ ಯುರೇನಿಯಂ ಪೂರೈಸುತ್ತಿದೆ. ಹೆಚ್ಚು ಯುರೇನಿಯಂ ಹೊಂದಿರುವ ರಾಷ್ಟ್ರಗಳಲ್ಲಿ ಒಂದಾಗಿರುವ ಆಸ್ಟ್ರೇಲಿಯಾವು ದೀರ್ಘ ಅವಧಿಗೆ ಯುರೇನಿಯಂ ಪೂರೈಸಲು ಒಪ್ಪಿಗೆ ನೀಡಿರುವುದರಿಂದ ಭಾರತದ ಇಂಧನ ಭದ್ರತೆ ಕಾಪಾಡಿಕೊಳ್ಳಲು ಅನುಕೂಲವಾಗಲಿದೆ.

- ನಾಗರಿಕ ಪರಮಾಣು ಸಹಕಾರ ಒಪ್ಪಂದಗಳಿಗೆ ಸಹಿ ಹಾಕಿದ ರಾಷ್ಟ್ರಗಳಿಗೆ ಮಾತ್ರ ಯುರೇನಿಯಂ ಪೂರೈಕೆ ಮಾಡುವ ನೀತಿಯನ್ನು ಆಸ್ಟ್ರೇಲಿಯಾ ಅನುಸರಿಸುತ್ತಿದೆ. ಈಗ ನಡೆಸಿರುವ ಒಪ್ಪಂದದ ಪ್ರಕಾರ, ಅದು ಶಾಂತಿಯುತ ಬಳಕೆಗಾಗಿ ಯುರೇನಿಯಂ ಅನ್ನು ಭಾರತಕ್ಕೆ ರಫ್ತು ಮಾಡಲಿದೆ
- ಆಸ್ಟ್ರೇಲಿಯಾದ ಖಾಸಗಿ ಕಂಪನಿಗಳು ಭಾರತದ ಸರ್ಕಾರಿ ಸ್ವಾಮ್ಯದ, ಖಾಸಗಿ ಕಂಪನಿಗಳಿಗೂ ಯುರೇನಿಯಂ ಪೂರೈಸಲು ಒಪ್ಪಂದ ಅವಕಾಶ ಕಲ್ಪಿಸಲಿದೆ
- ಅಂತರರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿಯ ಮೇಲುಸ್ತುವಾರಿಯಲ್ಲಿ ಯುರೇನಿಯಂ ರಫ್ತು ನಡೆಯಲಿದೆ
- ಈಗಿನ ಒಪ್ಪಂದವು ಈಗಾಗಲೇ ನಡೆದಿರುವ ನಾಗರಿಕ ಪರಮಾಣು ಸಹಕಾರ ಒಪ್ಪಂದದ ಅನುಷ್ಠಾನ ಮತ್ತು ಸರ್ಕಾರ ಮತ್ತು ನಾಗರಿಕ ಪರಮಾಣು ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಉದ್ದಿಮೆಗಳ ನಡುವೆ ದೀರ್ಘಕಾಲದ ಸಹಕಾರಕ್ಕೆ ಸಂಬಂಧಿಸಿದಂತೆ ಸುಸ್ಥಿರ ಚೌಕಟ್ಟನ್ನು ಒದಗಿಸಲಿದೆ

## ಅಣು ವಿದ್ಯುತ್: ಮಹತ್ವದ ಗುರಿ

ವಿದ್ಯುತ್ ಉತ್ಪಾದನೆಗಾಗಿ ಕಲ್ಲಿದ್ದಲು ಹಾಗೂ ಇತರ ಪಳೆಯುಳಿಕೆ ಇಂಧನಗಳನ್ನು ಇನ್ನೂ ಗಣನೀಯ ಪ್ರಮಾಣದಲ್ಲಿ ಬಳಸುತ್ತಿರುವ ಭಾರತವು, ಪರಿಸರಸ್ನೇಹಿ ಇಂಧನದತ್ತ ಮುಖಮಾಡುತ್ತಿದೆ. 2070ರ ಹೊತ್ತಿಗೆ ಇಂಗಾಲ ಹೊರಸೂಸುವಿಕೆಯನ್ನು ಶೂನ್ಯಕ್ಕೆ ಇಳಿಸುವ ಗುರಿಯನ್ನು ಅದು ಹೊಂದಿದೆ. ಇದಕ್ಕಾಗಿ ಪರಿಸರಸ್ನೇಹಿ ಇಂಧನ ಸಂಪನ್ಮೂಲಗಳನ್ನು ಬಳಸಲು ಯೋಜಿಸುತ್ತಿದೆ. ನೀರನ್ನು ಬಳಸಿ ಉತ್ಪಾದಿಸುವ ವಿದ್ಯುತ್‌ನ ನಂತರದಲ್ಲಿ ಅತ್ಯಂತ ಪರಿಸರಸ್ನೇಹಿ ವಿದ್ಯುತ್ ಎಂದರೆ ಪರಮಾಣು ತಂತ್ರಜ್ಞಾನದಲ್ಲಿ ಉತ್ಪಾದಿಸಲಾಗುವ ವಿದ್ಯುತ್. ಹೀಗಾಗಿ, ಪರಮಾಣು ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಲು ಭಾರತ ಬಯಸುತ್ತಿದೆ.



2047ರ ಹೊತ್ತಿಗೆ ಪರಮಾಣು ತಂತ್ರಜ್ಞಾನದಲ್ಲಿ 100 ಗಿಗಾವಾಟ್ (1 ಲಕ್ಷ ಮೆಗಾವಾಟ್) ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೊಂದುವ ಗುರಿಯನ್ನು ಹಾಕಿಕೊಂಡಿದೆ.

ಈ ಗುರಿ ಸಾಧನೆಗೆ ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ. ಪರಮಾಣು ವಿದ್ಯುತ್ ಕ್ಷೇತ್ರದಲ್ಲಿ ಖಾಸಗಿಯವರಿಗೆ ಅವಕಾಶ ನೀಡುವುದಕ್ಕಾಗಿ ಶಕ್ತಿ ಕಾಯ್ದೆ–2025 ಅನ್ನು ರೂಪಿಸಿದೆ. ಇದರ ಅಡಿಯಲ್ಲಿ ಖಾಸಗಿ ಕಂಪನಿಗಳು ಅಣು ವಿದ್ಯುತ್ ಸ್ಥಾವರ ಸ್ಥಾಪನೆ ಮಾಡಿ ವಿದ್ಯುತ್ ಉತ್ಪಾದಿಸಬಹುದು. ಸ್ವದೇಶಿ ತಂತ್ರಜ್ಞಾನದಲ್ಲಿ ಸಣ್ಣ ಮಾದರಿ ರಿಯಾಕ್ಟರ್‌ಗಳನ್ನು (ಎಸ್‌ಎಂಆರ್) ಅಭಿವೃದ್ಧಿ ಪಡಿಸಲು ಯೋಜನೆಯನ್ನು ಹಾಕಿಕೊಂಡಿದ್ದು, 2025–26ರ ಬಜೆಟ್‌ನಲ್ಲಿ ಈ ಉದ್ದೇಶಕ್ಕೆ ₹20 ಸಾವಿರ ಕೋಟಿಯನ್ನು ಹಂಚಿಕೆ ಮಾಡಿದೆ. 2033ರ ವೇಳೆಗೆ ಕನಿಷ್ಠ ಐದು ಎಸ್‌ಎಂಆರ್‌ಗಳನ್ನು ಸ್ಥಾಪಿಸುವ ಲೆಕ್ಕಾಚಾರದಲ್ಲಿದೆ.

Publication Date
16/07/2026

Presented by

## ❖ 'ಸರ್ಕಾರದ ವಿರುದ್ಧ ಘೋಷಣೆ ದೇಶದ್ರೋಹ ಎನ್ನಲಾಗದು'

- ಚುನಾಯಿತ ಪ್ರಜಾಪ್ರಭುತ್ವದಲ್ಲಿ ಸರ್ಕಾರ ಅಥವಾ ಅದರ ಅಂಗ ಸಂಸ್ಥೆಯ ವಿರುದ್ಧ ಘೋಷಣೆ ಕೂಗಿದ್ದಾರೆ ಎಂದ ಮಾತ್ರಕ್ಕೆ ನಾಗರಿಕರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಲು ಸಾಧ್ಯವಿಲ್ಲ ಎಂದು ಹರಿಯಾಣ ಹೈಕೋರ್ಟ್ ಹೇಳಿದೆ.
- ಅತ್ಯಾಚಾರ ಪ್ರಕರಣದಲ್ಲಿ ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್ ಸಿಂಗ್‌ಗೆ 2017ರಲ್ಲಿ ಶಿಕ್ಷೆ ಪ್ರಕಟವಾದ ಬಳಿಕ ನಡೆದ ಘಟನೆಗೆ ಸಂಬಂಧಿಸಿ ನಾಲ್ವರು ಆರೋಪಿಗಳನ್ನು ಬಿಡುಗಡೆ ಮಾಡಿರುವ ವಿಚಾರಣಾ ನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿದಿರುವ ನ್ಯಾಯಾಲಯವು, 'ಸರ್ಕಾರದ ವಿರುದ್ಧ ಘೋಷಣೆ ಕೂಗುವುದು ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಒಂದು ಮಾರ್ಗ ಮಾತ್ರ. ಅದನ್ನೇ ದ್ವೇಷ ಅಥವಾ ತಿರಸ್ಕಾರ ಎಂದು ಹೇಳಲಾಗದು' ಎಂದು ಅಭಿಪ್ರಾಯಪಟ್ಟಿದೆ.
- 'ಹಿಂಸಾತ್ಮಕ ಪ್ರತಿಭಟನೆಯು ಗಲಭೆಗೆ ಕಾರಣವಾಗಬಹುದು. ಆದರೆ ಅಂತಹ ಪ್ರತಿಭಟನೆಯು ಸರ್ಕಾರದ ವಿರುದ್ಧ ದ್ವೇಷ, ತಿರಸ್ಕಾರ ಹುಟ್ಟಿಸುವಂಥ ಕೃತ್ಯ ಎಂದು ಗ್ರಹಿಸಲಾಗುವುದಿಲ್ಲ' ಎಂದು ಅದು ಹೇಳಿದೆ.
- ಶಿಕ್ಷೆ ಪ್ರಕಟವಾದ ಬಳಿಕ ಸೇರಿದ ಗುಂಪು, ಹರಿಯಾಣದ ಕೈಥಲ್‌ನಲ್ಲಿ ವಿದ್ಯುತ್ ವಿತರಣಾ ಇಲಾಖೆಯ ಕಚೇರಿಗೆ ಹಾನಿ ಮಾಡಿತ್ತು. ಪ್ರಕರಣದ ಆರೋಪಿಗಳನ್ನು ವಿಚಾರಣಾ ನ್ಯಾಯಾಲಯವು 2019ರಲ್ಲಿ ಬಿಡುಗಡೆ ಮಾಡಿತ್ತು. ಈ ತೀರ್ಪನ್ನು ಪ್ರಶ್ನಿಸಿ ಸರ್ಕಾರವು ಮೇಲ್ಮನವಿ ಸಲ್ಲಿಸಿತ್ತು.
- 'ಸರ್ಕಾರದ ವಿರುದ್ಧದ ಹತಾಶೆ, ಅತೃಪ್ತಿ, ಅಕ್ರೋಶಗಳನ್ನು ಅವಿಶ್ವಾಸ ಅಥವಾ ದ್ವೇಷ ಎಂದು ಪರಿಗಣಿಸಲಾಗದು. ಆರೋಪವು ಗಂಭೀರ ಮತ್ತು ಶಿಕ್ಷೆಯು ಕಠಿಣವಾಗಿರುವ ಸಂದರ್ಭದಲ್ಲಿ, ಅಂಥ ಪ್ರಕರಣಗಳಲ್ಲಿ ಅಡಕವಾಗಿರುವ ಅಂಶಗಳು ಮತ್ತು ಹಿನ್ನೆಲೆ ಅಷ್ಟು ತೀವ್ರವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ' ಎಂದು ಹೇಳಿದೆ.

# ಶೇ 500ರ ಬದಲಿಗೆ ಶೇ 100ರಷ್ಟು ಸುಂಕ

ವಾಷಿಂಗ್ಟನ್ (ಎಪಿ): ಅಮೆರಿಕದ ಸೆನೆಟರ್ ಲಿಂಡ್ಸೆ ಗ್ರಹಾಂ ಅವರು ರೂಪಿಸಿದ್ದ ರಷ್ಯಾ ನಿರ್ಬಂಧಗಳ ಮಸೂದೆಯು ಅವರ ನಿಧನದ ನಂತರ ಮುನ್ನೆಲೆಗೆ ಬಂದಿದೆ.

ಮಸೂದೆಗೆ ಶ್ವೇತ ಭವನದಿಂದ ಅನುಮೋದನೆ ಪಡೆಯುವ ನಿಟ್ಟಿನಲ್ಲಿ ಲಿಂಡ್ಸೆ ಅವರು ಸಾಧಿಸಿದ ಪ್ರಗತಿಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಲು ಮತ್ತು ಆ ಮೂಲಕ ಅವರಿಗೆ ಗೌರವ ಸಲ್ಲಿಸಲು ಸೆನೆಟರ್‌ಗಳು ಪ್ರಯತ್ನ ಮುಂದುವರಿಸಿದ್ದಾರೆ.

ರಷ್ಯಾದಿಂದ ತೈಲ, ಅನಿಲ ಮತ್ತಿತರ ವಸ್ತುಗಳನ್ನು ಆಮದು ಮಾಡಿಕೊಳ್ಳುವ ರಾಷ್ಟ್ರಗಳ ಸರಕುಗಳ ಮೇಲೆ ಭಾರಿ ಸುಂಕ ವಿಧಿಸುವ ಮಸೂದೆ ಜಾರಿಗೆ ತರಲು ಕೆಲವು ಸೆನೆಟರ್‌ಗಳು ಒಂದು ವರ್ಷದಿಂದ ವಾದ ಮುಂದಿಡುತ್ತಾ ಬಂದಿದ್ದಾರೆ. ರಫ್ತಿನಿಂದ ರಷ್ಯಾ ಗಳಿಸುವ ಹಣ ಉಕ್ರೇನ್ ಮೇಲಿನ ಯುದ್ಧಕ್ಕೆ ಬಳಕೆ ಆಗುತ್ತಿದೆ ಎಂಬುದು ಮಸೂದೆ ರೂಪುಗೊಳ್ಳಲು ಪ್ರಮುಖ ಕಾರಣ.

**ಪರಿಷ್ಕರಣೆ:** ಮೂಲ ಮಸೂದೆಯ ವ್ಯಾಪ್ತಿಯು ತುಂಬಾ ವಿಶಾಲವಾಗಿದ್ದು, ಉಕ್ರೇನ್‌ಗೆ ನೆರವು ನೀಡಿದ ಅಮೆರಿಕದ ಆಪ್ತ ರಾಷ್ಟ್ರಗಳ ಆರ್ಥಿಕತೆಗೂ ನಷ್ಟ ಮಾಡಬಲ್ಲದು ಎಂಬುದು ಕೆಲವು ಸೆನೆಟರ್‌ಗಳ ಆತಂಕ. ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿ, ಕೆಲವು ಸಂದರ್ಭಗಳಲ್ಲಿ ನಿರ್ಬಂಧಗಳನ್ನು ಸಡಿಲಗೊಳಿಸುವ ಅಧಿಕಾರ ಅಧ್ಯಕ್ಷರಿಗೆ ಇರಬೇಕು ಎಂಬುದು ಶ್ವೇತ ಭವನದ ಆಶಯ. ಈ ಎರಡೂ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಸೂದೆಯನ್ನು ಪರಿಷ್ಕರಿಸಲಾಗಿದೆ.

ಪರಿಷ್ಕೃತ ಮಸೂದೆಯು, ರಷ್ಯಾದಿಂದ ತೈಲ ಅಥವಾ ನೈಸರ್ಗಿಕ ಅನಿಲ ಖರೀದಿಸುವ ಅಗ್ರ ಐದು ರಾಷ್ಟ್ರಗಳ ಮೇಲೆ ಕಡಿಮೆ ಪ್ರಮಾಣದ ನಿರ್ಬಂಧ ಹೇರಬೇಕೆಂದು ಶಿಫಾರಸು ಮಾಡಿದೆ. ಈ ಪಟ್ಟಿಯಲ್ಲಿ ಭಾರತ ಮತ್ತು ಚೀನಾ ಕೂಡ ಸೇರಿವೆ. ಅಲ್ಲದೆ, ಸುಂಕವನ್ನು ಪ್ರಸ್ತಾವಿತ ಶೇ 500ರ ಬದಲಾಗಿ ಶೇ 100ಕ್ಕೆ ತಗ್ಗಿಸುತ್ತದೆ. ಜೊತೆಗೆ, ತಮ್ಮ ಒಟ್ಟು ಆಮದಿನಲ್ಲಿ ಶೇ 15ಕ್ಕಿಂತ ಕಡಿಮೆ ನೈಸರ್ಗಿಕ ಅನಿಲವನ್ನು ರಷ್ಯಾದಿಂದ ತರಿಸಿಕೊಳ್ಳುವ ಮತ್ತು ಅದನ್ನು ಇನ್ನಷ್ಟು ಕಡಿಮೆ ಮಾಡಲು ಕ್ರಮ ಕೈಗೊಳ್ಳುವ ರಾಷ್ಟ್ರಗಳಿಗೆ ವಿನಾಯಿತಿಯನ್ನೂ ನೀಡಲಾಗಿದೆ.

'ಈ ಮಸೂದೆಗೆ ಗ್ರಹಾಂ ಅವರ ಹೆಸರನ್ನೇ ಇಡಬೇಕು ಎನ್ನುವುದಕ್ಕೆ ನಾನು ಬೆಂಬಲ ವ್ಯಕ್ತಪಡಿಸುತ್ತೇನೆ. ಏಕೆಂದರೆ ಇದು ಅವರ ಹೆಜ್ಜೆಗುರುತು' ಎಂದು ಸೆನೆಟರ್ ರಿಚರ್ಡ್ ಬ್ಲುಮೆಂಥಾಲ್ ಹೇಳಿದ್ದಾರೆ.

### 'ಮಸೂದೆ ಏಕಪಕ್ಷೀಯ'

ಬೀಜಿಂಗ್ (ಎಎಫ್‌ಪಿ): 'ರಷ್ಯಾದ ಇಂಧನ ಖರೀದಿಸುವವರ ಮೇಲೆ ನಿರ್ಬಂಧ ಹೇರುವ ಅಮೆರಿಕದ ಮಸೂದೆಯನ್ನು ನಾವು ಬಲವಾಗಿ ವಿರೋಧಿಸುತ್ತೇವೆ' ಎಂದು ಚೀನಾ ಬುಧವಾರ ಹೇಳಿದೆ.

Publication Date
16/07/2026

Presented by ಪ್ರಜಾವಾಣಿ

## ❖ ಏಷ್ಯನ್ 19 ಮತ್ತು 23 ವರ್ಷದೊಳಗಿನವರ ಚಾಂಪಿಯನ್‌ಷಿಪ್: ಬಾಕ್ಸಿಂಗ್: ಭಾರತಕ್ಕೆ 5 ಚಿನ್ನ, 10 ಬೆಳ್ಳಿ

- ಭಾರತದ ಸ್ಪರ್ಧಿಗಳು, ಬುಧವಾರ ಮುಕ್ತಾಯ ಗೊಂಡ ಏಷ್ಯನ್ 19 ಮತ್ತು 23 ವರ್ಷದೊಳಗಿನವರ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು. ಈ ಎರಡು ವಯೋ ವರ್ಗಗಳಲ್ಲಿ ಒಟ್ಟು ಐದು ಚಿನ್ನ, 10 ರಜತ ಮತ್ತು 4 ಕಂಚಿನ ಪದಕಗಳನ್ನು ಗೆದ್ದುಕೊಂಡರು.
- 19 ವರ್ಷದೊಳಗಿನವರ ಮಹಿಳೆಯರ ವಿಭಾಗದಲ್ಲಿ ಭಾರತ ಎರಡು ಚಿನ್ನ, ಆರು ಬೆಳ್ಳಿ ಗೆದ್ದುಕೊಂಡಿತು. ಇದು, ದೇಶದಲ್ಲಿ ಬಾಕ್ಸಿಂಗ್ ಕ್ರೀಡೆಯು ಸಾಧಿಸುತ್ತಿರುವ ಪ್ರಗತಿಗೆ ಕನ್ನಡಿಯಾಯಿತು.
- ಚಂದ್ರಿಕಾ ಭೋರೇಶ್ ಪೂಜಾರಿ (51 ಕೆ.ಜಿ) ಅವರು ಫೈನಲ್‌ನಲ್ಲಿ 5:0 ಯಿಂದ ಉಜ್ಬೇಕಿಸ್ತಾನದ ನಝುಕಾತ್ ಮರ್ಡಾನೋವಾ ಅವರನ್ನು ಸೋಲಿಸಿದರು. ಪ್ರಾಚಿ ಅವರು ದಿರಾ ಅರ್ತಿಕಾ (ಇಂಡೊ ನೇಷ್ಯಾ) ಅವರನ್ನು ಮಣಿಸಿ ಸ್ವರ್ಣ ಪದಕ ಕೊರಳಿಗೇರಿಸಿಕೊಂಡರು.
- 23 ವರ್ಷದೊಳಗಿನ ಮಹಿಳೆಯರ ವಿಭಾಗದಲ್ಲೂ ಭಾರತದ ಸ್ಪರ್ಧಿಗಳು ಸ್ಫೂರ್ತಿಯುತ ಪ್ರದರ್ಶನ ನೀಡಿ ಒಂದು ಚಿನ್ನ. ನಾಲ್ಕು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳನ್ನು ಬಾಚಿಕೊಂಡರು. ನಿಶಾ (54 ಕೆ.ಜಿ) ಅವರು ಚಿನ್ನದ ಪದಕದ ಸ್ಪರ್ಧೆಯಲ್ಲಿ 5:0 ಯಿಂದ ಜಪಾನ್‌ನ ಕೋಯಿನ್ ಕೊಕುಪು ಅವರನ್ನು ಸೋಲಿಸಿದರು.
- ನಿಕಿತಾ ಚಾಂದ್ (60 ಕೆ.ಜಿ), ಕಾಜಲ್ (65 ಕೆ.ಜಿ) ಮತ್ತು ಮುಸ್ಕಾನ್ (75 ಕೆ.ಜಿ) ಅವರು ಫೈನಲ್‌ನಲ್ಲಿ ತೀವ್ರ ಹೋರಾಟ ನೀಡಿದರೂ ಸೋತು ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.



# ಏಕದಿನ ವಿಶ್ವಕಪ್‌ನಲ್ಲಿ 'ಸೂಪರ್ ಸೆವೆನ್'

## ಟಿ20 ವಿಶ್ವಕಪ್ ಟೂರ್ನಿಯಲ್ಲಿ ಸೂಪರ್ ಟೆನ್ ಹಂತ

ಎಡಿನ್‌ಬರೊ (ಪಿಟಿಐ) : ಮುಂಬರುವ ವಿಶ್ವಕಪ್ ಟೂರ್ನಿಗಳ ಸ್ವರೂಪದಲ್ಲಿ ಅಲ್ಪ ಬದಲಾವಣೆಯನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮಾಡಿದೆ.

ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ 2027ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಸೂಪರ್ ಸಿರೀಸ್ ಮತ್ತು ಸೂಪರ್ 7 ಹಂತಗಳನ್ನು ಮಾಡಲಾಗಿದೆ.

'ಐಸಿಸಿ ಪುರುಷರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ 14 ತಂಡಗಳು ಸ್ಪರ್ಧಿಸಲಿವೆ. ಮೂರು ಹಂತಗಳಲ್ಲಿ ಸ್ಪರ್ಧೆಗಳನ್ನು ರೂಪಿಸಲಾಗಿದೆ. ಟೂರ್ನಿಯನ್ನು ರೋಚಕಗೊಳಿಸಲು ಈ ಯೋಜನೆ ಮಾಡಲಾಗಿದೆ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೊದಲ ಸುತ್ತಿನಲ್ಲಿ ಸೂಪರ್ ಸಿರೀಸ್ ನಡೆಯಲಿದೆ. ರೌಂಡ್ ರಾಬಿನ್ ಲೀಗ್ ನಲ್ಲಿ ಅರ್ಹತೆ ಪಡೆದ 14 ತಂಡಗಳಲ್ಲಿ ಕೊನೆಯ ಮೂರು ಬಳಗಗಳು ಸೂಪರ್ ಸಿರೀಸ್‌ನಲ್ಲಿ ಆಡುತ್ತವೆ. ಈ ಸುತ್ತಿನಲ್ಲಿ ಅಗ್ರಸ್ಥಾನ ಪಡೆದ ತಂಡವು ಎರಡನೇ ಹಂತಕ್ಕೆ ಸಾಗಲಿದೆ.

ಎರಡನೇ ಹಂತದಲ್ಲಿ 12 ತಂಡಗಳು ಒಟ್ಟು 30 ಪಂದ್ಯಗಳಲ್ಲಿ ಆಡುತ್ತವೆ. ರೌಂಡ್ ರಾಬಿನ್ ಮಾದರಿಯಲ್ಲಿ ಪಂದ್ಯಗಳೂ ನಡೆಯುತ್ತವೆ. ಈ ಹಂತದಲ್ಲಿ ಎರಡು ಗುಂಪುಗಳಲ್ಲಿ ತಂಡಗಳನ್ನು ವಿಂಗಡಿಸಲಾಗುವುದು. ಪ್ರತಿ ಗುಂಪಿನಲ್ಲಿ ಆರು ತಂಡಗಳು ಇರುತ್ತವೆ. ಗುಂಪಿನಲ್ಲಿ ಅಗ್ರ ಮೂರು ಸ್ಥಾನ ಪಡೆಯುವ ತಂಡಗಳು ಸೂಪರ್ 7ಕ್ಕೆ ಅರ್ಹತೆ ಪಡೆಯುತ್ತವೆ. ಉಭಯ ತಂಡಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಇನ್ನೊಂದು ತಂಡಕ್ಕೂ ಅರ್ಹತೆ ನೀಡಲಾಗುವುದು. ಈ ಹಿಂದೆ ಸೂಪರ್ ಸಿಕ್ಸ್ ಹಂತ ಇತ್ತು. ಈಗ ಸೂಪರ್ ಸೆವೆನ್ ಮಾದರಿ ಪರಿಚಯಿಸಲಾಗುತ್ತಿದೆ.

ಮೂರನೇ ಹಂತದಲ್ಲಿ 7 ತಂಡಗಳಿವೆ. 21 ಪಂದ್ಯಗಳು ರೌಂಡ್‌ರಾಬಿನ್ ಮಾದರಿಯಲ್ಲಿ ನಡೆಯುತ್ತವೆ. ಅದರಲ್ಲಿ ಅಗ್ರ ನಾಲ್ಕು ಸ್ಥಾನ ಪಡೆದ ತಂಡಗಳು ಸೆಮಿಫೈನಲ್‌ಗೆ ಪ್ರವೇಶಿಸುತ್ತವೆ. ನಾಲ್ಕರ ಹಂತದಲ್ಲಿ ಗೆದ್ದ ತಂಡಗಳು ಫೈನಲ್‌ನಲ್ಲಿ ಮುಖಾ-ಮುಖಿಯಾಗುತ್ತವೆ.

**ಟಿ20 ಮಾದರಿಯಲ್ಲಿ ಸೂಪರ್ 10:** 2028ರಲ್ಲಿ ಆಸ್ಟ್ರೇಲಿಯಾ–ನ್ಯೂಜಿಲೆಂಡ್ ಜಂಟಿ ಆತಿಥ್ಯದಲ್ಲಿ ಟಿ20 ವಿಶ್ವಕಪ್ ಟೂರ್ನಿ ನಡೆಯಲಿದೆ. ಇದರಲ್ಲಿ ಸೂಪರ್ 8ರ ಬದಲಿಗೆ ಸೂಪರ್ 10 ಮಾದರಿಗೆ ಬದಲಾಯಿಸಲಾಗಿದೆ.

ಟೂರ್ನಿಯಲ್ಲಿ 20 ತಂಡಗಳನ್ನು ಐದು ಗುಂಪುಗಳಲ್ಲಿ ವಿಭಜಿಸಲಾಗುವುದು. ಪ್ರತಿ ಗುಂಪಿನಲ್ಲಿ 4 ತಂಡಗಳಿರಲಿದ್ದು, ಅಗ್ರ ಎರಡು ತಂಡಗಳು ಸೂಪರ್ ಟೆನ್ ಹಂತಕ್ಕೆ ಪ್ರವೇಶಿಸುತ್ತವೆ. ಇದರಲ್ಲಿ ತಲಾ 5 ತಂಡಗಳ ಎರಡು ಗುಂಪುಗಳು ಇರುತ್ತವೆ. ರೌಂಡ್‌ರಾಬಿನ್ ಸುತ್ತಿನಲ್ಲಿ ಈ ತಂಡಗಳು ಆಡಲಿವೆ. ಒಟ್ಟು 20 ಪಂದ್ಯಗಳು ಈ ಹಂತದಲ್ಲಿ ಇರುತ್ತವೆ. ಎರಡೂ ಗುಂಪುಗಳಲ್ಲಿ ಪ್ರಥಮ ಸ್ಥಾನ ಪಡೆದ ತಂಡಗಳು ನೇರ ಸೆಮಿಫೈನಲ್ ಪ್ರವೇಶಿಸುತ್ತವೆ. ಎರಡು ಮತ್ತು ಮೂರನೇ ಸ್ಥಾನದ ತಂಡಗಳು ಎಲಿಮಿನೇಟರ್ ಪ್ರವೇಶಿಸಲಿವೆ. ಅಲ್ಲಿ ಗೆದ್ದ ಎರಡು ತಂಡಗಳು ಸೆಮಿಗೆ ಪ್ರವೇಶ ಪಡೆಯುತ್ತವೆ.

Publication Date
16/07/2026

Presented by

## ❖ ಹೊರ್ಮುಜ್ ವಿಚಾರವಾಗಿ ಅಮೆರಿಕ-ಇರಾನ್ ಮಧ್ಯೆ ತೀವ್ರಗೊಂಡ ಸಂಘರ್ಷ: ಸೇತುವೆ ಮೇಲೆ ಅಮೆರಿಕ ದಾಳಿ

- ಹೊರ್ಮುಜ್ ಜಲಸಂಧಿ ಮೇಲಿನ ನಿಯಂತ್ರಣದ ವಿಚಾರವಾಗಿ ಅಮೆರಿಕ ಮತ್ತು ಇರಾನ್ ಮಧ್ಯೆ ಸಂಘರ್ಷ ತೀವ್ರಗೊಂಡಿದ್ದು, ಉಭಯ ದೇಶಗಳು ಪರಸ್ಪರ ದಾಳಿಯನ್ನು ವಿಸ್ತರಿಸಿವೆ.
- ಇರಾನ್ ವಿರುದ್ಧದ ವೈಮಾನಿಕ ದಾಳಿಯನ್ನು ಅಮೆರಿಕ ತೀವ್ರಗೊಳಿಸಿದೆ. ದಕ್ಷಿಣ ಇರಾನ್‌ನಲ್ಲಿನ ಸೇತುವೆಗಳು, ವಿದ್ಯುತ್ ಮೂಲಸೌರ್ಕಯಗಳು ಮತ್ತುಚಾಬಹಾರ್ ಬಂದರಿನ ಟವರ್ (ಗೋಪುರ) ಅನ್ನು ಗುರಿಯಾಗಿಸಿ ಶುಕ್ರವಾರ ಬೆಳಿಗ್ಗೆ ದಾಳಿ ನಡೆಸಿದೆ. ದಾಳಿಯಲ್ಲಿ ಕನಿಷ್ಠ 7 ಮಂದಿ ಮೃತಪಟ್ಟಿದ್ದಾರೆ.
- ಬಂದರಿನ ಗೋಪುರವು ಕೇವಲ ವಾಣಿಜ್ಯ ಸಂಚಾರದ ಕಣ್ಗಾವಲಿಗೆ ಬಳಕೆಯಾಗುತ್ತಿತ್ತು ಎಂದು ಇರಾನ್ ತಿಳಿಸಿದೆ. ಇರಾನ್ ಈ ಬಂದರನ್ನು ಭಾರತದ ಬೆಂಬಲದೊಂದಿಗೆ ನಿರ್ವಹಿಸುತ್ತಿದೆ.
- ಬಂದರ್ ಖಮೀರ್ ನಗರದ ಮೇಲೆ ದಾಳಿ ನಡೆದಿದೆ. ಬಂದರ್ ಅಬ್ಬಾಸ್ ನಗರದ ವಿಮಾನ ನಿಲ್ದಾಣ ಮತ್ತು ರೈಲು ನಿಲ್ದಾಣಗಳ ಮೇಲೂ ದಾಳಿ ನಡೆದಿದೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ.
- ಹೊರ್ಮುಜ್ ಜಲಸಂಧಿಯ ಮೇಲಿನ ಇರಾನ್ ಹಿಡಿತವನ್ನು ಸಡಿಲ ಗೊಳಿಸಲು ಒತ್ತಡ ಹೇರುವ ಸಲುವಾಗಿ ಇರಾನ್‌ನ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದರು. ಇದರ ಭಾಗವಾಗಿ ಅಮೆರಿಕ ಸೇನೆಯು ವೈಮಾನಿಕ ದಾಳಿಗಳನ್ನು ತೀವ್ರಗೊಳಿಸಿದೆ.
- ಸೇನಾ ಶಸ್ತ್ರಾಸ್ತ್ರಗಳ ಸಾಗಣೆ ಮತ್ತು ದೇಶದ 9 ಕೋಟಿ ಜನರಿಗೆ ಅಗತ್ಯವಿರುವ ವಸ್ತುಗಳ ಪೂರೈಕೆಗೆ ಅಡ್ಡಿಪಡಿಸುವ ಉದ್ದೇಶದಿಂದ ದಾಳಿಯನ್ನು ಅಮೆರಿಕ ಇನ್ನಷ್ಟು ತೀವ್ರಗೊಳಿಸುವ ಸಾಧ್ಯತೆ ಇದೆ. ಅಮೆರಿಕವು ಜೂನ್ 22ರಿಂದ ನಡೆಸಿರುವ ದಾಳಿಯಲ್ಲಿ ಕನಿಷ್ಠ 38 ಮಂದಿ ಮೃತಪಟ್ಟಿದ್ದು, 400 ಮಂದಿ ಗಾಯಗೊಂಡಿದ್ದಾರೆ ಎಂದು ಇರಾನ್‌ನ ಆರೋಗ್ಯ ಸಚಿವಾಲಯ ತಿಳಿಸಿದೆ.

## ❖ ಬರಲಿದೆ ಪಾಲಿಮರ್ ನೋಟು

- ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕಾಗದದ ಬದಲು ಪಾಲಿಮರ್ ನೋಟುಗಳನ್ನು ಪ್ರಾಯೋಗಿಕವಾಗಿ ಮುದ್ರಿಸಲು ನಿರ್ಧರಿಸಿದ್ದು, ನೋಟು ಮುದ್ರಣಕ್ಕೆ ಬೇಕಾಗುವ ಪಾಲಿಮರ್ ಹಾಳೆಗಳ ಪೂರೈಕೆಗಾಗಿ ಜಾಗತಿಕ ಟೆಂಡರ್ ಆಹ್ವಾನಿಸಿದೆ.
- ಆರ್‌ಬಿಐನ ನೋಟು ಮುದ್ರಣ ಘಟಕವು (ಬಿಆರ್‌ಬಿಎನ್‌ಎಂಪಿಎಲ್) ತನ್ನ ಮುದ್ರಣಾಲಯ ಮತ್ತು ಸರ್ಕಾರಿ ಸ್ವಾಮ್ಯದ ಸೆಕ್ಯೂರಿಟಿ ಪ್ರಿಂಟಿಂಗ್ ಮಿಂಟಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದಲ್ಲಿ (ಎಸ್‌ಪಿಎಂಸಿಐಎಲ್) ಈ ನೋಟುಗಳನ್ನು ಮುದ್ರಿಸಿ, ಪರೀಕ್ಷಿಸಲಿದೆ.
- ಬ್ಯಾಂಕ್ ನೋಟುಗಳನ್ನು ಮುದ್ರಿಸಲು ಬಳಸುವ ವಿಶೇಷ ಭದ್ರತಾ ವೈಶಿಷ್ಟ್ಯ ಹೊಂದಿರುವ ಅಪಾರದರ್ಶಕ ಪಾಲಿಮರ್ ಹಾಳೆಗಳ ಒಟ್ಟು 68 ಸಾವಿರ ರೀಮ್ ಗಾಗಿ ಬಿಆರ್‌ಬಿಎನ್ ಎಂಪಿಎಲ್ ಟೆಂಡರ್ ಆಹ್ವಾನಿಸಿದೆ. ಒಂದು ರೀಮು 500 ಹಾಳೆಗಳನ್ನು ಒಳಗೊಂಡಿದೆ. ಒಂದು ಮುಖಬೆಲೆಯ ನೋಟಿನ (ಉದಾಹರಣೆಗೆ, ₹100 ಅಥವಾ ₹500) ಮುದ್ರಣಕ್ಕೆ 34 ಸಾವಿರ ರೀಮ್ ಗಳು ಬೇಕಾಗುತ್ತವೆ ಎಂದು ಟೆಂಡರ್ ವಿವರದಲ್ಲಿ ಹೇಳಲಾಗಿದೆ.

Dr Rajkumar IAS/KAS Academy

## ವಿಬಿಎಸ್‌ಎ ಮಸೂದೆ: ಜಂಟಿ ಸಂಸದೀಯ ಸಮಿತಿ ಕರಡು ವರದಿಯಲ್ಲಿ ಉಲ್ಲೇಖ

# 'ಶಿಕ್ಷಣ ಸಂಸ್ಥೆಗಳ ಸ್ವಾಯತ್ತತೆಗೆ ಧಕ್ಕೆ'

ನವದೆಹಲಿ (ಪಿಟಿಐ): 'ವಿಕಸಿತ ಭಾರತ ಶಿಕ್ಷಣ ಅಧಿಷ್ಠಾನ' ಮಸೂದೆಯು (ವಿಬಿಎಸ್‌ಎ-2025) ದೇಶದ ಉನ್ನತ ಶಿಕ್ಷಣದ ನಿಯಂತ್ರಣ ಅಧಿಕಾರವನ್ನು ಏಕೈಕ ಸಂಸ್ಥೆಯಲ್ಲಿ ಕೇಂದ್ರೀಕರಿಸಬಹುದು ಮತ್ತು ಇದರಿಂದಾಗಿ ಶಿಕ್ಷಣ ಸಂಸ್ಥೆಗಳ ಸ್ವಾಯತ್ತತೆಯ ಮೇಲೆ ಪರಿಣಾಮ ಬೀರಬಹುದು ಎಂದು ಜಂಟಿ ಸಂಸದೀಯ ಸಮಿತಿ ಅಭಿಪ್ರಾಯಪಟ್ಟಿದೆ.

ವಿಬಿಎಸ್‌ಎ ಮಸೂದೆಯನ್ನು ಕಳೆದ ವರ್ಷ ಡಿಸೆಂಬರ್‌ನಲ್ಲಿ ಲೋಕಸಭೆಯಲ್ಲಿ ಮಂಡಿಸಲಾಗಿತ್ತು. ಮಸೂದೆಯಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳನ್ನು ಹೆಚ್ಚಿನ ಪರಿಶೀಲನೆಗೆ ಒಳಪಡಿಸುವ ಉದ್ದೇಶದಿಂದ ಅದನ್ನು ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಒಪ್ಪಿಸಲಾಗಿದೆ.

'ದೊಡ್ಡ ಪ್ರಮಾಣದ ನಿಯಂತ್ರಣ ಅಧಿಕಾರಗಳು ಒಂದೇ ಸಂಸ್ಥೆಯಲ್ಲಿ ಕೇಂದ್ರೀಕೃತವಾಗುವುದರಿಂದ ಅಧಿಕಾರಶಾಹಿ ಅಥವಾ ಸೈದ್ಧಾಂತಿಕ ಹಸ್ತಕ್ಷೇಪ ಹೆಚ್ಚಾಗಬಹುದು. ಇದರಿಂದಾಗಿ ಪ್ರಸ್ತುತ ಯುಜಿಸಿಯಡಿ ಇರುವ ಸಂಸ್ಥೆಗಳ ಸ್ವಾಯತ್ತತೆಯ ಮೇಲೆ ಪರಿಣಾಮ ಬೀರಬಹುದು ಎಂಬ ಆತಂಕವನ್ನು ಸಮಿತಿಯು ವ್ಯಕ್ತಪಡಿಸಿದೆ' ಎಂದು ಸಮಿತಿಯ ಸದಸ್ಯರಿಗೆ ಹಂಚಲಾಗಿರುವ ಕರಡು ವರದಿಯಲ್ಲಿ ತಿಳಿಸಲಾಗಿದೆ.

ನಿಯಮಗಳ ಉಲ್ಲಂಘನೆಗೆ ವಿವಿಧ ಹಂತಗಳಲ್ಲಿ ದಂಡ ವಿಧಿಸುವುದನ್ನು ಮಸೂದೆಯು ಪ್ರಸ್ತಾಪಿದೆ ಎಂಬುದನ್ನು ಸಮಿತಿಯು ಗಮನಿಸಿದೆ. ಆದರೆ, 'ನಿಯಂತ್ರಕ ಸಂಸ್ಥೆಯು ದಂಡವನ್ನು ಮನಬಂದಂತೆ ವಿಧಿಸಲು ಸಾಧ್ಯವಿಲ್ಲ' ಎಂಬುದನ್ನು ವರದಿಯು ಎತ್ತಿ ತೋರಿಸಿದೆ.

ದೇಶದ ಉನ್ನತ ಶಿಕ್ಷಣದ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತರುವ ಪ್ರಸ್ತಾಪವನ್ನು ಈ ಮಸೂದೆ ಹೊಂದಿದೆ. ಇದು ಕಾಯ್ದೆಯಾಗಿ ಜಾರಿಗೆ ಬಂದರೆ ಈಗಿರುವ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ), ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ), ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿಯು (ಎನ್‌ಸಿಟಿಇ) ಹೊಸ ಆಯೋಗದೊಂದಿಗೆ ವಿಲೀನಗೊಳ್ಳಲಿವೆ.

### ವರದಿ ಅಂಗೀಕಾರ ಮುಂದೂಡಿಕೆ

ಗಂಭೀರ ಆರೋಪದ ಮೇಲೆ 30 ದಿನ ಬಂಧನಕ್ಕೊಳಗಾಗುವ ಪ್ರಧಾನಿ, ಮುಖ್ಯಮಂತ್ರಿಗಳು ಮತ್ತು ಕೇಂದ್ರ ಸಚಿವರನ್ನು ಪದಚ್ಯುತಗೊಳಿಸಲು ಉದ್ದೇಶಿಸಿರುವ ಮಸೂದೆಯನ್ನು ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿಯು, ತನ್ನ ಕರಡು ವರದಿಯನ್ನು ಅಂಗೀಕರಿಸುವ ಪ್ರಕ್ರಿಯೆಯನ್ನು ಮುಂದೂಡಲು ಶುಕ್ರವಾರ ನಿರ್ಧರಿಸಿದೆ.

'ಮಸೂದೆ ಕುರಿತು ಹೆಚ್ಚಿನ ಚರ್ಚೆಯ ಅಗತ್ಯವಿದೆ ಎಂದು ಸದಸ್ಯರು ಅಭಿಪ್ರಾಯಪಟ್ಟ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಸಮಿತಿಯ ಮುಖ್ಯಸ್ಥೆ ಅಪರಾಜಿತಾ ಸಾರಂಗಿ ತಿಳಿಸಿದ್ದಾರೆ.

ಸಂವಿಧಾನದ 130ನೇ ತಿದ್ದುಪಡಿ ಮಸೂದೆಗೆ ಸಂಬಂಧಿಸಿದ ಜಂಟಿ ಸಂಸದೀಯ ಸಮಿತಿಯು ತನ್ನ ಕರಡು ವರದಿಯಲ್ಲಿ ಐದು ಶಿಫಾರಸುಗಳನ್ನು ಮಾಡಿದ್ದು, ಅವುಗಳನ್ನು ಈಚೆಗಷ್ಟೇ ಸದಸ್ಯರಿಗೆ ವಿತರಿಸಲಾಗಿತ್ತು.

ಸಮಿತಿಯು ಪ್ರತಿಯೊಂದು ಶಿಫಾರಸಿನ ಮೇಲೂ ಶುಕ್ರವಾರ ಪ್ರತ್ಯೇಕವಾಗಿ ಮತದಾನ ನಡೆಸುವ ಸಂದರ್ಭದಲ್ಲಿ, ಸಂಬಂಧಪಟ್ಟ ಭಾಗೀದಾರರೊಂದಿಗೆ ಹೆಚ್ಚಿನ ಸಮಾಲೋಚನೆ ಮತ್ತು ಸದಸ್ಯರ ನಡುವೆ ಹೆಚ್ಚಿನ ಚರ್ಚೆಯ ಅಗತ್ಯವಿದೆ ಎಂಬ ನಿರ್ಧಾರಕ್ಕೆ ಬರಲಾಯಿತು.

Publication Date
18/07/2026

Presented by

# ದಶಕಗಳ ಬಳಿಕ ಮಳೆಗಾಲದಲ್ಲಿ ಬಿಸಿಲ ಧಗೆ

## ನಗರದಲ್ಲಿ ಗರಿಷ್ಠ ಉಷ್ಣಾಂಶ ಸಾಮಾನ್ಯಕ್ಕಿಂತ ಐದು ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಳ

● ವರುಣ ಹೆಗಡೆ

ಬೆಂಗಳೂರು: ಮಳೆಯ ಕೊರತೆಯಿಂದಾಗಿ ನಗರದಲ್ಲಿ ತಾಪಮಾನ ಏರಿಕೆಯಾಗುತ್ತಿದೆ. ಇದರಿಂದಾಗಿ ಏಪ್ರಿಲ್-ಮೇ ತಿಂಗಳ ಬಿಸಿಲ ಧಗೆಯ ಅನುಭವ ಈ ಬಾರಿ ಜುಲೈನಲ್ಲಿಯೂ ಆಗುತ್ತಿದೆ.

ದಶಕಗಳ ಬಳಿಕ ನಗರದಲ್ಲಿ ಗರಿಷ್ಠ ಉಷ್ಣಾಂಶ ದಾಖಲೆ ಮಟ್ಟದಲ್ಲಿ ವರದಿಯಾಗುತ್ತಿದೆ. ಮಳೆಯ ನಿರೀಕ್ಷೆಯಲ್ಲಿದ್ದ ಜನರು ಬಿಸಿಲ ಧಗೆಗೆ ಹೈರಾಣರಾಗುತ್ತಿದ್ದಾರೆ. ದುರ್ಬಲ ಮುಂಗಾರಿನಿಂದ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆ ನೀರನ್ನು ಮಿತವಾಗಿ ಬಳಸುವಂತೆ ಮನವಿ ಮಾಡಿದೆ. ಜಲಮಂಡಳಿ ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಕಾವೇರಿ ನೀರನ್ನು ಗೃಹ ಬಳಕೆಗೆ ಹೊರತುಪಡಿಸಿ ಅನ್ಯ ಉದ್ದೇಶಕ್ಕೆ ಬಳಸಿದರೆ ದಂಡ




ವಿಧಿಸುವುದಾಗಿ ಎಚ್ಚರಿಸಿದೆ.

ಈ ತಿಂಗಳು ನಿರೀಕ್ಷಿತ ಮಳೆಯಾಗದ ಪರಿಣಾಮ ಉಷ್ಣಾಂಶವು ದಾಖಲೆಯ ಮಟ್ಟ ತಲುಪಿದೆ. ಹವಾಮಾನ ಇಲಾಖೆಯ ಪ್ರಕಾರ, ದುರ್ಬಲ ಮುಂಗಾರು ಮತ್ತು ಒಣ ಹವೆಯ ವಾತಾವರಣದಿಂದಾಗಿ ನಗರದ ಉಷ್ಣಾಂಶವು ಸಾಮಾನ್ಯಕ್ಕಿಂತ 4 ರಿಂದ 5 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಿದೆ. ಇದರಿಂದಾಗಿ ಗರಿಷ್ಠ ಉಷ್ಣಾಂಶ 33.6 ಡಿಗ್ರಿ ಸೆಲ್ಸಿಯಸ್ ತಲುಪಿದೆ. ಈ ಮೂಲಕ 1914 ಮತ್ತು 1926ರಲ್ಲಿ ದಾಖಲಾಗಿದ್ದ 33.3 ಡಿಗ್ರಿ ಸೆಲ್ಸಿಯಸ್‌ನ ದಾಖಲೆ ಮುರಿದಿದೆ.



ಮಳೆಯ ಕೊರತೆ ಕಾರಣ ಉಷ್ಣಾಂಶ ಸಹಜವಾಗಿ ಹೆಚ್ಚಾಗಿದೆ. ಇತ್ತೀಚಿನ ವರ್ಷಗಳಲ್ಲಿ ಈ ರೀತಿ ತಾಪಮಾನ ಏರಿಕೆ ಆಗಿರಲಿಲ್ಲ. ಸಾಧ್ಯವಾದಷ್ಟು ಕಡಿಮೆ ನೀರನ್ನು ಬಳಸಬೇಕು
**ಸಿ.ಎಸ್. ಪಾಟೀಲ್,**
ಹವಾಮಾನ ಇಲಾಖೆ ತಜ್ಞ

ಮಳೆ ಕೊರತೆ: ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ ನಗರದಲ್ಲಿ ಜೂನ್ ತಿಂಗಳಲ್ಲಿ ವಾಡಿಕೆ ಪ್ರಕಾರ 7 ಸೆಂ.ಮೀ. ಮಳೆಯಾಗಬೇಕಿತ್ತು. ಆದರೆ, 8.5 ಸೆಂ.ಮೀ. ಮಳೆ ಸುರಿದಿದೆ. ಜುಲೈ ತಿಂಗಳು ಮಳೆಯಾಗದ ಪರಿಣಾಮ ವಾತಾವರಣದಲ್ಲಿ ಉಷ್ಣಾಂಶ




ಹೆಚ್ಚಳವಾಗಿದೆ. ಜುಲೈ 17ರವರೆಗೆ ವಾಡಿಕೆ ಪ್ರಕಾರ 4.4 ಸೆಂ.ಮೀ. ಮಳೆ ಆಗಬೇಕಿತ್ತು. ಆದರೆ, 0.1 ಸೆಂ.ಮೀ. ಮಾತ್ರ ಮಳೆಯಾಗಿದೆ. ಶೇ 98 ರಷ್ಟು ಕೊರತೆಯಾಗಿದೆ. ಜೂನ್‌ನಿಂದ ಈವರೆಗೆ ವಾಡಿಕೆಯಂತೆ 11.6 ಸೆಂ. ಮೀ. ಮಳೆ ಆಗಬೇಕಿತ್ತು. ಮುಂಗಾರಿನ ಒಂದೂವರೆ ತಿಂಗಳಲ್ಲಿ ಶೇ 26ರಷ್ಟು ಮಳೆ ಕೊರತೆಯಾಗಿದ್ದು, 8.6 ಸೆಂ.ಮೀ. ಮಾತ್ರ ಮಳೆ ಸುರಿದಿದೆ.

ನಗರದಲ್ಲಿ ಈ ವರ್ಷ ಬೇಸಿಗೆಯಲ್ಲಿಯೂ ಉಷ್ಣಾಂಶ ಸಾಮಾನ್ಯಕ್ಕಿಂತ ಹೆಚ್ಚಳವಾಗಿತ್ತು. ವಾತಾವರಣದಲ್ಲಿ ಉಷ್ಣಾಂಶ ಏರಿಕೆ ಹಾಗೂ ಬಿಸಿ ಗಾಳಿಯಿಂದ ಏಪ್ರಿಲ್-ಮೇ ತಿಂಗಳಲ್ಲಿ ಜನ ಹೈರಾಣಾಗಿದ್ದರು. ತಾಪಮಾನವು ಸರಾಸರಿಗಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿ, ಬಿಸಿ ಗಾಳಿ ಕೂಡ ಬೀಸಿತ್ತು. ಇದರಿಂದಾಗಿ ಗರಿಷ್ಠ ಉಷ್ಣಾಂಶ 36 ಡಿಗ್ರಿ ಸೆಲ್ಸಿಯಸ್ ದಾಟಿತ್ತು.

'ಎಲ್ ನಿನೊ ಪ್ರಭಾವದಿಂದ ಮುಂಗಾರು ದುರ್ಬಲವಾಗಿದ್ದು, ಈ ಬಾರಿ ಎಲ್ಲೆಡೆ ಮಳೆಯ ತೀವ್ರ ಕೊರತೆಯಾಗಿದೆ. ಇದಕ್ಕೆ ಬೆಂಗಳೂರು ಕೂಡ ಹೊರತಾಗಿಲ್ಲ. ಈ ವರ್ಷ ಮುಂದಿನ ದಿನಗಳು ಆಶಾದಾಯಕವಾಗಿಲ್ಲ. ಜುಲೈ ತಿಂಗಳ ಕೊನೆಯಲ್ಲಿ ಸ್ವಲ್ಪ ಮಳೆಯಾಗಬಹುದು' ಎಂದು ಹವಾಮಾನ ಇಲಾಖೆ ತಜ್ಞರೊಬ್ಬರು ತಿಳಿಸಿದರು.

### ಮೋಡ ಕವಿದ ವಾತಾವರಣ

ಹವಾಮಾನ ಇಲಾಖೆ ಪ್ರಕಾರ ಶನಿವಾರ ಮತ್ತು ಭಾನುವಾರ ನಗರದಲ್ಲಿ ಮೋಡ ಕವಿದ ವಾತಾವರಣ ಇರುವ ಸಾಧ್ಯತೆಯಿದ್ದು, ನಿರಂತರ ಗಾಳಿ ಬೀಸಲಿದೆ. ಕೆಲ ಪ್ರದೇಶದಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ. ಇದರಿಂದಾಗಿ ತಾಪಮಾನದಲ್ಲಿ ಕೊಂಚ ಇಳಿಕೆಯಾದರೂ, ಸೋಮವಾರದಿಂದ ಮತ್ತೆ ಒಣಹವೆ ಮುಂದುವರಿಯುವ ಬಗ್ಗೆ ಇಲಾಖೆ ಮುನ್ಸೂಚನೆ ನೀಡಿದೆ. ಗರಿಷ್ಠ ಉಷ್ಣಾಂಶವು ಮತ್ತೆ ಏರಿಕೆಯ ಹಾದಿ ಹಿಡಿಯಲಿದೆ ಎಂದು ತಿಳಿಸಿದೆ.

Publication Date
18/07/2026

Presented by

### ❖ ತಂತ್ರಾಂಶ ರಫ್ತಿನಲ್ಲಿ ಕರ್ನಾಟಕವು ದೇಶದಲ್ಲೇ ಮೊದಲು: ಶಾಲಿನಿ ರಜನೀಶ್ 'ರಫ್ತು ಉತ್ತೇಜನ: ಐದು ಜಿಲ್ಲೆ ಆಯ್ಕೆ'

- ಕೇಂದ್ರ ಸರ್ಕಾರವು ದೇಶದ 120 ಜಿಲ್ಲೆಗಳನ್ನು ರಫ್ತು ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಲು ಆಯ್ಕೆ ಮಾಡಿದ್ದು, ಬೆಂಗಳೂರು ಸೇರಿ ರಾಜ್ಯದ ಐದು ಜಿಲ್ಲೆಗಳು ಈ ಪಟ್ಟಿಯಲ್ಲಿವೆ ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ತಿಳಿಸಿದರು.

- ವಿಧಾನಸೌಧದಲ್ಲಿ ಶುಕ್ರವಾರ ಶಾಲಿನಿ ರಜನೀಶ್ ಅವರ ನೇತೃತ್ವದಲ್ಲಿ ರಾಜ್ಯ ಮಟ್ಟದ ರಫ್ತು ಉತ್ತೇಜನಾ ಸಮಿತಿಯ ಸಭೆ ನಡೆಯಿತು. 'ಭಾರತ ಸರ್ಕಾರದ ವಿದೇಶಿ ವ್ಯಾಪಾರ ಮಹಾನಿರ್ದೇಶನಾಲಯವು ರಫ್ತು ಉತ್ತೇಜನಕ್ಕೆ 120 ಆದ್ಯತೆಯ ನಗರಗಳನ್ನು ಗುರುತಿಸಿದೆ. ರಾಜ್ಯದ ಬೆಂಗಳೂರು, ಬೆಳಗಾವಿ, ಹಾಸನ, ಕೋಲಾರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಅಯ್ಕೆಯಾಗಿವೆ' ಎಂದು ಸಭೆಗೆ ಮಾಹಿತಿ ನೀಡಿದರು.
- 'ದೇಶದ ಒಟ್ಟು ತಂತ್ರಾಂಶ ರಫ್ತಿನಲ್ಲಿ ಕರ್ನಾಟಕವು ಶೇ 41ರಷ್ಟು ಪಾಲು ಹೊಂದುವ ಮೂಲಕ ದೇಶದಲ್ಲೇ ಮೊದಲನೇ ಸ್ಥಾನದಲ್ಲಿದೆ. ಹಾಗೆಯೇ, ದೇಶದ ಒಟ್ಟಾರೆ ರಫ್ತಿನಲ್ಲಿ ರಾಜ್ಯವು ಶೇ 24ರಷ್ಟು ಪಾಲು ಪಡೆದು ಪ್ರಥಮ ಸ್ಥಾನವನ್ನು ಕಾಯ್ದುಕೊಂಡಿದೆ. ಇನ್ನು ವ್ಯಾಪಾರಿ ಸರಕುಗಳ ರಫ್ತಿನಲ್ಲಿ ಶೇ 7.78ರಷ್ಟು ಪಾಲಿನೊಂದಿಗೆ ರಾಜ್ಯವು ಗುಜರಾತ್, ಮಹಾರಾಷ್ಟ್ರ ಮತ್ತು ತಮಿಳುನಾಡಿನ ನಂತರ ನಾಲ್ಕನೇ ಸ್ಥಾನದಲ್ಲಿದೆ' ಎಂದು ವಿವರಿಸಿದರು.
- 'ವ್ಯಾಪಾರಿ ಸರಕುಗಳ ರಫ್ತಿನಲ್ಲಿ ಇನ್ನೂ ಬೆಳವಣಿಗೆ ಸಾಧಿಸಬೇಕಿದ್ದು, ಮೊದಲ ಸ್ಥಾನಕ್ಕೆ ಬರುವ ಗುರಿ ಹಾಕಿಕೊಳ್ಳಬೇಕು. ರಾಜ್ಯದ ರಫ್ತು ಸಾಮರ್ಥ್ಯವನ್ನು ಗರಿಷ್ಠ ಮಟ್ಟದಲ್ಲಿ ಸದುಪಯೋಗಪಡಿಸಿಕೊಳ್ಳಲು. ಹೆಚ್ಚಿನ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮಗಳನ್ನು ಹಾಗೂ ರಫ್ತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು' ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರದ ಅಧಿಕಾರಿಗಳಿಗೆ ಸೂಚನೆ ನೀಡಿದರು.
- 'ಬ್ರಿಟನ್ ಸೇರಿ ಹಲವು ದೇಶಗಳೊಂದಿಗೆ ಈಚೆಗೆ ಮಾಡಿಕೊಳ್ಳಲಾಗಿರುವ ಮುಕ್ತ ವ್ಯಾಪಾರ ನೀತಿಯ ಗರಿಷ್ಠ ಲಾಭವನ್ನು ರಾಜ್ಯವು ಪಡೆದುಕೊಳ್ಳಬೇಕು. ರಫ್ತಿಗೆ ಇರುವ ಅವಕಾಶಗಳನ್ನು ಬಳಸಿಕೊಂಡು ಎಲೆಕ್ಟ್ರಾನಿಕ್ಸ್, ಕೃಷಿ, ಆಹಾರ, ಎಂಜಿನಿಯರಿಂಗ್, ಜವಳಿ ಮತ್ತು ಔಷಧ ಉತ್ಪನ್ನಗಳ ರಫ್ತನ್ನು ಹೆಚ್ಚಿಸಬೇಕು' ಎಂದು ಸೂಚನೆ ನೀಡಿದು.
- ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು, ವಿದೇಶಿ ವ್ಯಾಪಾರ ಮಹಾನಿರ್ದೇಶನಾಲಯದ ಅಧಿಕಾರಿಗಳು, ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

## ❖ ಹೊಸ ವೀಸಾ ನಿಯಮ: ಅಮೆರಿಕದ ಜೊತೆ ಮಾತುಕತೆ-ಭಾರತ

- ವೀಸಾಕ್ಕೆ ಸಂಬಂಧಿಸಿ ಅಮೆರಿಕ ಜಾರಿಗೊಳಿಸ ಲಿರುವ ಹೊಸ ನಿಯಮಗಳು ಭಾರತೀಯರ ಮೇಲೆ ಪರಿಣಾಮ ಬೀರಲಿವೆ. ಈ ವಿಚಾರವಾಗಿ ಅಮೆರಿಕ ದೊಂದಿಗೆ ಮಾತುಕತೆ ನಡೆಸುತ್ತಿ ರುವುದಾಗಿ ಭಾರತ ಶುಕ್ರವಾರ ಹೇಳಿದೆ.
- ವಿದೇಶಿ ವಿದ್ಯಾರ್ಥಿಗಳು ಹಾಗೂ ವಿನಿಮಯ ಕಾರ್ಯಕ್ರಮದಡಿ ಅಮೆರಿಕಕ್ಕೆ ಭೇಟಿ ನೀಡುವವರನ್ನು ಗುರಿಯಾಗಿಸಿ ಹೊಸ ನಿಯಮಗಳನ್ನು ಜಾರಿಗೊಳಿಸಲು ಅಮೆರಿಕ ಮುಂದಾಗಿದೆ.
- 'ವೀಸಾಕ್ಕೆ ಸಂಬಂಧಿಸಿದ ಹೊಸ ನಿಯಮಗಳ ಕುರಿತ ವರದಿಗಳನ್ನು ಗಮನಿಸಿದ್ದೇವೆ. ಇವುಗಳಿಂದ ಅಮೆರಿಕಕ್ಕೆ ಭೇಟಿ ನೀಡುವ ಭಾರತೀಯರು ಸಂಕಷ್ಟ ಎದುರಿಸಬೇಕಾಗುತ್ತದೆ. ನಿಯಮಗಳನ್ನು ಸರಳಗೊಳಿಸುವ ಕುರಿತಂತೆ ಅಮೆರಿಕ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

# 16,399 ಟನ್ ಏಲಕ್ಕಿ ರಫ್ತು

## ಕರ್ನಾಟಕದ ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳು ಮುಂಚೂಣಿಯಲ್ಲಿ: ವಾಣಿಜ್ಯ ಸಚಿವಾಲಯ

ಪ್ರಜಾವಾಣಿ ವಾರ್ತೆ/ ಪಿಟಿಐ


**ನವದೆಹಲಿ:** ಕರ್ನಾಟಕದ ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳು ಸೇರಿದಂತೆ ದೇಶದಿಂದ ಕೊಲ್ಲಿ ರಾಷ್ಟ್ರಗಳಿಗೆ ರಫ್ತಾಗುವ ಏಲಕ್ಕಿ ಪ್ರಮಾಣವು ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ಮೂರು ಪಟ್ಟು ಹೆಚ್ಚಳವಾಗಿದೆ.

ಪಶ್ಚಿಮ ಘಟ್ಟದ ಪ್ರದೇಶದಲ್ಲಿ ಬೆಳೆಯುವ ಸಣ್ಣ ಗಾತ್ರದ ಏಲಕ್ಕಿಯು, 'ಗುಣಮಟ್ಟ, ಸುವಾಸನೆ ಮತ್ತು ಶುದ್ಧತೆ'ಗೆ ಹೆಸರಾಗಿದ್ದು, ಯುಎಇ, ಸೌದಿ ಅರೇಬಿಯಾ, ಕುವೈತ್, ಇರಾಕ್‌ನಿಂದ ಭಾರಿ ಬೇಡಿಕೆ ವ್ಯಕ್ತವಾಗಿದೆ.

ಸಣ್ಣ ಏಲಕ್ಕಿ ಬೆಳೆಯುವ ರಾಜ್ಯಗಳ ಪೈಕಿ ಕೇರಳ ಅಗ್ರಸ್ಥಾನದಲ್ಲಿದ್ದು, ದೇಶದ ಒಟ್ಟು ಏಲಕ್ಕಿ ಉತ್ಪಾದನೆಯಲ್ಲಿ ಶೇ 58ಕ್ಕೂ ಹೆಚ್ಚು ಪಾಲು ಹೊಂದಿದೆ. ಕೇರಳದ ಇಡುಕ್ಕಿ, ವಯನಾಡ್, ಪಾಲಕ್ಕಾಡ್ ಮತ್ತು ತಮಿಳುನಾಡಿನ ನೀಲಗಿರಿ, ಪಳನಿ ಮತ್ತು ಪುಲ್ನಿ ಬೆಟ್ಟ ಶ್ರೇಣಿಯಲ್ಲಿ ಸಣ್ಣ ಏಲಕ್ಕಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ದೊಡ್ಡ ಏಲಕ್ಕಿಯನ್ನು ದೇಶದ ಈಶಾನ್ಯ ಭಾಗದಲ್ಲಿ ಬೆಳೆಯಲಾಗುತ್ತದೆ.

ಕಳೆದ ಆರ್ಥಿಕ ವರ್ಷದಲ್ಲಿ ದೇಶದಿಂದ ಒಟ್ಟು 16,399 ಟನ್‌ನಷ್ಟು ಏಲಕ್ಕಿ ರಫ್ತಾಗಿದೆ. ಇದು ಹಣಕಾಸಿನ ಮೌಲ್ಯದಲ್ಲಿ ₹4,200 ಕೋಟಿಯಷ್ಟಾಗಿದೆ

ಪ್ರಮುಖ ದೇಶಗಳಿಗೆ ಏಲಕ್ಕಿ ರಫ್ತು (₹ಕೋಟಿಗಳಲ್ಲಿ)




ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಶುಕ್ರವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ತಿಳಿಸಿವೆ.

2023–24ರಲ್ಲಿ ₹1,269 ಕೋಟಿ ಮೌಲ್ಯದ 7,083 ಟನ್, 2024–25ರ ಆರ್ಥಿಕ ವರ್ಷದಲ್ಲಿ ₹1,936 ಕೋಟಿ ಮೌಲ್ಯದ 7,674 ಟನ್ ಏಲಕ್ಕಿ ರಫ್ತಾಗಿತ್ತು.

ಭಾರತದ ಮಸಾಲೆ ಪದಾರ್ಥಗಳಿಗೆ ಉತ್ತಮ ಗುಣಮಟ್ಟ ಇರುವುದರಿಂದ ವಿದೇಶಿ ಖರೀದಿದಾರರಿಂದ ಬೇಡಿಕೆ ಹೆಚ್ಚಳವಾಗಿದೆ. ಇದು ಒಟ್ಟಾರೆ ರಫ್ತು ಹೆಚ್ಚಳಕ್ಕೆ ಕಾರಣವಾಗಿದೆ ಎಂದು ತಿಳಿಸಿದೆ. ನೆದರ್ಲೆಂಡ್, ಆಸ್ಟ್ರೇಲಿಯಾ, ಬಹರೇನ್, ಕೆನಡಾ, ಚೀನಾ, ಈಜಿಪ್ಟ್ ಮತ್ತು ಇರಾನ್ ಸಹ ಭಾರತದ ಏಲಕ್ಕಿಯನ್ನು ಆಮದು ಮಾಡಿಕೊಳ್ಳುತ್ತಿವೆ.

### ಮಳೆ ಕೊರತೆ, ಉತ್ಪಾದನೆ ಇಳಿಕೆ

**ಕೊಡಗು:** ಜಿಲ್ಲೆಯಲ್ಲಿ ಏಲಕ್ಕಿ ಬೆಳೆಯುವವರ ಸಂಖ್ಯೆ ತೀರಾ ಕಡಿಮೆಯಾಗಿದೆ. ಬಹುಪಾಲು ಮಂದಿ ಏಲಕ್ಕಿ ಬದಲಿಗೆ ಕಾಫಿ, ಕಾಳುಮೆಣಸನ್ನೇ ಬೆಳೆಯ ತೊಡಗಿದ್ದಾರೆ. ವರ್ಷದಿಂದ ವರ್ಷಕ್ಕೆ ಏಲಕ್ಕಿ ಬೆಳೆಯುವ ಪ್ರದೇಶದ ವಿಸ್ತೀರ್ಣ ಕಡಿಮೆಯಾಗುತ್ತಿದೆ.

ಈ ವರ್ಷ ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಮಳೆ ಬಾರದೇ ಇರುವುದರಿಂದ ಏಲಕ್ಕಿ ಉತ್ಪಾದನೆ ಪ್ರಮಾಣ ಶೇ 30ರಿಂದ 40ರಷ್ಟು ಕಡಿಮೆಯಾಗಬಹುದು ಎಂದು ಅಂದಾಜಿಸಲಾಗಿದೆ. ಮಳೆ ಕೊರತೆ ಹೀಗೆಯೇ ಮುಂದುವರಿದರೆ ಗಿಡಗಳು ಉಳಿಯುವುದೇ ಕಷ್ಟ ಎನಿಸಿವೆ.

ಈ ವರ್ಷ ಹೆಚ್ಚಿನ ಪ್ರಮಾಣದಲ್ಲಿ ಏಲಕ್ಕಿ ಉತ್ಪಾದನೆ ಕುಸಿತವಾಗಲಿದೆ. ಸದ್ಯ, ಕೆ.ಜಿಗೆ ₹2 ಸಾವಿರದಿಂದ ₹3 ಸಾವಿರದವರೆಗೂ ದರ ಇದೆ ಎಂದು ಏಲಕ್ಕಿ ಬೆಳೆಗಾರರ ಸಹಕಾರ ಸಂಘದ ಕೊಡಗು ಜಿಲ್ಲಾಧ್ಯಕ್ಷ ವಿಜಯಕುಮಾರ್ ತಿಳಿಸಿದರು.

**20 ಸಾವಿರ ಕೆ.ಜಿ ಉತ್ಪಾದನೆ:** ಹಾಸನ ಜಿಲ್ಲೆಯಲ್ಲಿ ಕಳೆದ ವರ್ಷ 30 ಸಾವಿರ ಕೆ.ಜಿ. ಏಲಕ್ಕಿ ಉತ್ಪಾದನೆ ಆಗಿತ್ತು. ಈ ಬಾರಿ ಅಂದಾಜು 18 ಸಾವಿರದಿಂದ 20 ಸಾವಿರ ಕೆ.ಜಿ.(ಶೇ 30ರಷ್ಟು ಕಡಿಮೆ) ಆಗಬಹುದು. ಸದ್ಯಕ್ಕೆ ಏಲಕ್ಕಿ ಬೆಲೆ ₹2 ಸಾವಿರದಿಂದ ₹2,500ರವರೆಗೆ ಇದೆ.


Publication Date
18/07/2026



Presented by ಪ್ರಜಾವಾಣಿ


# ದೇಶದ ಮೊದಲ ಜಲಜನಕ ಚಾಲಿತ ರೈಲಿಗೆ ಚಾಲನೆ

**ಜಿಂದ್ (ಹರಿಯಾಣ) (ಪಿಟಿಐ):** ದೇಶದ ಮೊದಲ ಜಲಜನಕ ಚಾಲಿತ ರೈಲಿಗೆ ಹರಿಯಾಣದ ಜಿಂದ್ ರೈಲು ನಿಲ್ದಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಚಾಲನೆ ನೀಡಿದರು.



### ರೈಲಿನ ವಿಶೇಷ

- ಜಲಜನಕದ ಇಂಧನ ಕೋಶ ತಂತ್ರಜ್ಞಾನವು ಜಲಜನಕವನ್ನು ವಿದ್ಯುತ್ ಆಗಿ ಪರಿವರ್ತಿಸುತ್ತದೆ
- ಈ ಪ್ರಕ್ರಿಯೆಯಲ್ಲಿ ನೀರಿನ ಆವಿ ಮಾತ್ರ ಉತ್ಪಾದನೆಯಾಗುತ್ತದೆ
- ಸಂಚರಿಸುವ ವೇಳೆ ಶೂನ್ಯ ಇಂಗಾಲ ಹೊರಸೂಸಲಿದೆ
- ಹೊರಗಿನ ವಿದ್ಯುತ್, ಡೀಸೆಲ್ ಬಳಕೆಯಾಗದ ಕಾರಣ ಯಾವುದೇ ಮಾಲಿನ್ಯ ಉಂಟಾಗದು
- ವಿಶ್ವದಲ್ಲಿ ಅತಿ ಉದ್ದದ ಜಲಜನಕ ಚಾಲಿತ ರೈಲು ಸೇವೆಯೆಂಬ ಹೆಗ್ಗಳಿಕೆ
- ಡೀಸೆಲ್, ಎಲೆಕ್ಟ್ರಿಕ್ ಎಂಜಿನ್‌ಗೆ ಹೋಲಿಸಿದರೆ ಕಡಿಮೆ ಶಬ್ದ ಮಾಡುತ್ತದೆ. ಪಳೆಯುಳಿಕೆ ಇಂಧನದ ಮೇಲಿನ ಒತ್ತಡವೂ ಕಡಿಮೆಯಾಗಲಿದೆ
- ನಾಲ್ಕು ತಿಂಗಳ ಸತತ ಪ್ರಾಯೋಗಿಕ ಸಂಚಾರದ ನಂತರ ಸಾರ್ವಜನಿಕ ಸೇವೆಗೆ ಮುಕ್ತ
- ಜಲಜನಕ ಚಾಲಿತ ರೈಲು ಕಾರ್ಯನಿರ್ವಹಿಸುವ ಆಯ್ದ ರಾಷ್ಟ್ರಗಳ ಗುಂಪಿಗೆ ಭಾರತ ಸೇರ್ಪಡೆಯಾಗಿದೆ. ಜರ್ಮನಿ, ಅಮೆರಿಕ, ಚೀನಾ ಹಾಗೂ ಜಪಾನ್‌ನಲ್ಲಿ ಜಲಜನಕ ರೈಲು ಸೇವೆ ಇದೆ

> ಜಲಜನಕ ಚಾಲಿತ ರೈಲು ಯೋಜನೆಯು 'ಮೇಕ್ ಇನ್ ಇಂಡಿಯಾ' ಅಭಿಯಾನದ ಯಶಸ್ಸಿಗೆ ಉದಾಹರಣೆಯಾಗಿದೆ
>
> **ನರೇಂದ್ರ ಮೋದಿ,** ಪ್ರಧಾನಿ

**10**
ಕಡು ನೀಲಿ ಹಾಗೂ ಬಿಳಿಬಣ್ಣದ ಬೋಗಿಗಳು

**2,600**
ಪ್ರಯಾಣಿಕರು ಈ ರೈಲಿನಲ್ಲಿ ಒಂದು ಬಾರಿಗೆ ಪ್ರಯಾಣಿಸಬಹುದು

**89** ಕಿ.ಮೀ
ಪ್ರಯಾಣದ ಅವಧಿ 2 ತಾಸು

**75** ಕಿ.ಮೀ
ಗಂಟೆಗೆ ಗರಿಷ್ಠ ವೇಗ

**ಪ್ರಯಾಣ ದರ**

| ಕನಿಷ್ಠ | ಗರಿಷ್ಠ |
|---|---|
| ₹10 | ₹35 |

---------------------------------------------ಶುಭವಂದನೆಗಳು-----------------------------------------